ಶೂದ್ರ

ಬೆಲೆ 2.50

ಈ ಸಂಚಿಕೆಯಲ್ಲಿ :

ಕೆ. ವಿ. ತಿರುಮಲೇಶ್—ಸಂಧ್ಯಾ ಬಂಡಗದ್ದೆ—ಶಶಿಪ್ರಭ—ಲುಯಜಿ ಪಿರಾಂದೆಲ್ಲೊ—ಎ. ಆರ್. ನಾಗಭೂಷಣ—ಶಿವರಾಂ ಪೈಲೂರು ರಾಜೇಂದ್ರ ಚೆನ್ನಿ—ಎಸ್. ಜಿ. ಸಿದ್ದರಾಮಯ್ಯ—ಅನಸೂಯಾದೇವಿ ಪ್ರೊ. ಶೆಟ್ಟಾರ್ ಸಿದ್ದಾರ್ಥ ಶೈಲೇಂದ್ರ ಬಂಡಗದ್ದೆ—ಸುಜಾತ—ಪ್ರಭಾವತಿ ಸುಮತೀಂದ್ರ ನಾಡಿಗ್—ಸುದ್ದಿಯ ಗುದ್ದಾಟ.

‘ಮುಕ್ತ’ ಚರ್ಚೆಗಾಗಿ ‘ಶೂದ್ರ’ ತಿಂಗಳ ಪತ್ರಿಕೆ

ಸಂಚಿಕೆ : 5 ಮಾರ್ಚ್ 1987 ಸಂಪುಟ : 13

ಸಹಾಯಕ ಸಂಪಾದಕರು : ನಿರ್ಮಲಾರೆಡ್ಡಿ-ಆನಂದಮೂರ್ತಿ-ಮಹೇಶ್
—ಉತ್ತನೂರು ರಾಜಮ್ಮ ವಿ. ಶೆಟ್ಟಿ

ಶೂದ್ರ ಬರದಿದ್ದರೆ ಪತ್ರ ಬರೆಯಿರಿ. ಚಂದಾ ಕಳಿಸಿ. ಲೇಖನ ಕಳಿಸುವಾಗ 15 ಪೈಸೆಯ ರಿಪ್ಲೈ ಕಾರ್ಡಿಡಿ. ಚೆಕ್ ಮೂಲಕ ಕಳಿಸುವವರು 2 ರೂ ಹೆಚ್ಚು ಮರಿ ತುಂಬಿ.

ವಾರ್ಷಿಕ ಚಂದಾ : 25 ರೂ. (ಸಂಸ್ಥೆಗಳಿಗೆ ಹಾಗೂ ಪುಸ್ತಕ ಭಂಡಾರಗಳಿಗೆ 30 ರೂ) ಆಜೀವ ಚಂದಾ : 250 ರೂ (ಐದು ಕಂತುಗಳಲ್ಲಿ)

ಶೂದ್ರ ಶ್ರೀನಿವಾಸ್, ಸುದ್ದುಗುಂಟೇಪಾಳ್ಯ. ಡಿ.ಆರ್. ಕಾಲೇಜ್ (ಹಿಂದೆ)
ಬೆಂಗಳೂರು–560 029

ಮುಖಪುಟದ ಕಲಾವಿದರು : ಶ್ರೀನಿವಾಸಮೂರ್ತಿ

ಶ್ರೀನಿವಾಸಮೂರ್ತಿ ಚಿತ್ರಕಲೆಯ ಗಂಭೀರ ವಿದ್ಯಾರ್ಥಿ. ಇವರು ಹಿಂದೆ ಪುಷ್ಪಮಾಲಾರವರ ಕಲೆಯ ಬಗ್ಗೆ ಬರೆದ ಲೇಖನವನ್ನು ಶೂದ್ರದಲ್ಲಿ ಪ್ರಕಟಿಸಿದ್ದೆವು.

ಎಸ್.ವಿ. ರಂಗಣ್ಣನವರ ನಿಧನಕ್ಕೆ ‘ಶೂದ್ರ’ ತನ್ನ ಸಂತಾಪವನ್ನು ವ್ಯಕ್ತಪಡಿಸುತ್ತೆ.

ಕನ್ನಡತನ ನನ್ನ ದೃಷ್ಟಿಯಲ್ಲಿ

— ಕೆ. ವಿ. ತಿರುಮಲೇಶ್

ನನಗೇನನಿಸ್ತಾ ಇದೆ ಅಂತಂದ್ರೆ— ಬಹುಶಃ ನಾನು ಕೇರಳಕ್ಕೆ ಸೇರಿದ ಕನ್ನಡಿಗನಾಗಿದ್ದು ಈಗ ಹಲವು ವರ್ಷಗಳಿಂದ ತೆಲುಗು ರಾಜ್ಯದ ರಾಜ್ಯಧಾನಿಯಾದ ಹೈದರಾಬಾದಿನಲ್ಲಿ ನೆಲಸಿದ್ದರಿಂದ್ಲೋ ಏನೋ. ಸುಮತೀಂದ್ರ ನಾಡಿಗರಂಥ ಮಿತ್ರರು ನನ್ನ ವಿಚಾರಗಳು ಹೊರನಾಡ ಕನ್ನಡಿಗನ ವಿಚಾರಗಳಂತಿವೆ ಅಂತ ಹೇಳೋದಿದೆ; ಆದರೆ ಅದರ ಅರ್ಥ ಮಾತ್ರ ನನಗಾಗ್ತ ಇಲ್ಲ; ಯಾಕೆಂದ್ರೆ ಎಲ್ಲೇ ಇದ್ರೂ ಎಂತೇ ಇದ್ರೂ ಕನ್ನಡಿಗನೇ ಆಗಿದ್ದೇನೆ. ನಾನು ಭಾವನಾತ್ಮಕವಾಗಿ ಅಂದ್ಕೊಂಡಿದ್ದೇನೆ-ಹೇಗಿದ್ರೂ ನನಗನಿಸೋದು ಏಕಮುಖಿಯಾದ ಸಂಸ್ಕೃತಿಗಿಂತ ಬಹುಮುಖಿ ಸಂಸ್ಕೃತೀನೇ ಹೆಚ್ಚು ಅಂತಃಸತ್ವವುಳ್ಳದ್ದು ಅಂತ. ಬದುಕುವ ಶಕ್ತಿಯಿರೋದೂ ಇಂಥ ಬಹುಮುಖಿ ಸಂಸ್ಕೃತಿಗೇನೇ. ಅದು ಘಾತಗಳನ್ನೂ ಆಘಾತಗಳನ್ನೂ ತಡಕೊಳ್ಳುತ್ತೆ. ಹಲವು ನೆರೆಗಳನ್ನ ಕಂಡ ಮಣ್ಣಿನಂತೆ ಕಸುವುಳ್ಳದ್ದಾಗಿರುತ್ತೆ. 'ವ್ಯಕ್ತಿ ಮತ್ತು ಪರಂಪರೆಗಳು' ಅನ್ನೋ ಒಂದು ಲೇಖನದಲ್ಲಿ ನಾನು ಹೇಗೆ ವ್ಯಕ್ತಿಯೊಬ್ಬ ಅನೇಕ ಪರಂಪರೆಗಳಿಗೆ ಏಕಕಾಲಕ್ಕೆ ಸೇರಿಕೊಳ್ತಾನೆ ಎಂಬ ಬಗ್ಗೆ ಬರೆದಿದ್ದೇನೆ. ಮಂಗೋಲಿಯನ್ನರ ಉದಾಹರಣೆ ಕೊಡ್ತ ಮಂಗೋಲಿಯನರು ಹೇಗೆ ಮೊದಲು ಮುಸ್ಲಿಮ್ ದ್ವೇಷಿಗಳಾಗಿದ್ದು ಮುಸ್ಲಿಮರ ತಲೆಗಳನ್ನ ತರಿಯುತ್ತಾ ತರಿಯುತ್ತಾ ನಂತರ ಇಸ್ಲಾಮಿಗೆ ಮತಾಂತರಗೊಂಡು ಮುಸ್ಲಿಮೇತರರ ತಲೆಗಳನ್ನ ತರಿಯತೊಡಗಿದರು ಎಂಬ ಬಗ್ಗೆ ಹೇಳಿದೆ ಆ ಲೇಖನದಲ್ಲಿ. ಬೇರುಗಳನ್ನ ಹುಡುಕೋರನ್ನ ಕಂಡರೆ ನನಗೆ ಅನುಕಂಪವಿದೆ. ಆದರೆ ಹೀಗೆ ಹುಡುಕ್ತಾ ಹುಡುಕ್ತಾ ನಾವು ಎಷ್ಟು ದೂರ ಹೋಗಲು ತಯಾರಿದ್ದೀವಿ? ಚರಿತ್ರೆಯಲ್ಲಿ ಆಸಕ್ತಿ ಬೇಕು. ಆದ್ರೆ ಚರಿತ್ರೆಯನ್ನ ನಮ್ಮ ನಮ್ಮ ಅನುಕೂಲಕ್ಕೆ ಸರಿಯಾಗಿ ಬರಕೊಳ್ಳೋದು ಮಾತ್ರ ಸರಿಯಲ್ಲ.

ಅಂದ್ರೆ ಕನ್ನಡತನ ಅನ್ನೋದೇ ಇಲ್ಲ ಅಂತ ನಾ ಹೇಳ್ಲಾರೆ. ಯಾವುದು ಭಾವನಾತ್ಮಕವಾಗಿ ನಿಜವೋ ಅದನ್ನ ಒಪ್ಪಲೇ ಬೇಕಾಗ್ತದೆ. ಡೆಹರಾಡೂನ್‌ನಿಂದ ಅತ್ಯಂತ ಕಡಿದಾದ ಸುತ್ತು ದಾರಿಯಲ್ಲಿ ಏರಿ, ದಕ್ಷಿಣದಿಂದ ಎಷ್ಟೋ ದೂರದಲ್ಲಿರುವ, ಸ್ವರ್ಗಕ್ಕೆ ಬಹು ಸಮೀಪ ಅಂತ ಅನಿಸೋ ಮಸ್ಸೂರಿಯನ್ನು ಸೇರಿದಾಗ ಅಲ್ಲಿ

ಡಾ| ಕೆ.ವಿ. ತಿರುಮಲೇಶ್, ರೀಡರ್, ಸಿ.ಐ.ಇ.ಎಫ್.ಎಲ್., ಹೈದರಾಬಾದ್-500007

ನಿಮ್ಮನ್ನ ದಕ್ಷಿಣದ ಹೋಟೆಲೊಂದು ಸ್ವಾಗತಿಸಿದರೆ ಸಂತೋಷವಾಗುತ್ತದೆ. ಅದೇ ರೀತಿ ಯಾವುದೇ ದೇಶದಲ್ಲಿ ಬೇರೆ ಭಾಷೆಗಳನ್ನಾಡೋ ಜನರ ಮಧ್ಯೆ ಕನ್ನಡಿಗನೊಬ್ಬನ ದರ್ಶನವಾದಾಗ ಏನೋ ಆತ್ಮೀಯತೆಯ ಅನುಭವವಾಗ್ತದೆ. ಇಂಗ್ಲೆಂಡ್‌ನಂಥ ದೇಶದಲ್ಲಿ ಭಾರತೀಯರು ಮತ್ತು ಪಾಕಿಸ್ತಾನಿಗಳು ಸಮೀಪದವರಾಗ್ತಾರೆ. ಹಾಗೇನೇ ಕನ್ನಡಿಗರು ಎಲ್ಲೇ ಇದ್ದರೂ ಅವರು ಭಾವನಾತ್ಮಕವಾಗಿ ಕರ್ನಾಟಕದ ವಿಧಿಯೊಂದಿಗೆ ತಮ್ಮನ್ನ ಗುರುತಿಸಿಕೊಂಡಿರ್ತಾರೆ. ಅಂದ್ರೆ ಕೆಲವು ಭಾವನಾತ್ಮಕ ಸತ್ಯಗಳಿವೆ ಎಂಬು ದನ್ನ ನಾವು ಒಪ್ಪಲೇ ಬೇಕಾಗ್ತದೆ. ಕನ್ನಡತನ ಅನ್ನೋದು ಅಂಥ ಒಂದು ಸತ್ಯ. ಆರಂಕುಸಮಿಟ್ಟೊಡಂ ನೆನೆವುದೆನ್ನ ಮನಂ ಬನವಾಸಿ ದೇಶಮಂ ಎಂಬ ರೀತಿಯ ಸತ್ಯ, ಕನ್ನಡವೇ ಸತ್ಯ ಎಂಬಂಥ ಸತ್ಯ. ಇಂಥದೊಂದು ಭಾವನಾತ್ಮಕ ಸತ್ಯವನ್ನು ನಾವು ಒಪ್ಪದೇ ಇದ್ರೆ ದೇಶಪ್ರೇಮ, ಭಾಷಾಪ್ರೇಮ ಎಂಬುದಕ್ಕೆಲ್ಲ ಅರ್ಥವೇ ಇಲ್ಲ.

ಇಂಥ ಸತ್ಯಾನ ನಾವು ರಮಣೀಯವಾಗಿ ಮಾಡೋದು ಸಾಧ್ಯ. ಅ.ನ. ಕೃಷ್ಣ ರಾಯರ ಕಾದಂಬರಿಗಳಲ್ಲಿ ಕನ್ನಡ ರಾಜರಾಜೇಶ್ವರಿಯ ವರ್ಣನೆಗಳು ಸಿಗುತ್ತವೆ. ಈ ವರ್ಣನೆಗಳನ್ನ ಓದಿ ಚಿಕ್ಕಂದಿನಲ್ಲಿ ರೋಮಾಂಚಗೊಂಡುದು ನಿಜ. ಆದರೆ ನಾವಿಂದು ಅದೇ ಉಸಿರಲ್ಲಿ ಕನ್ನಡ ರಾಜರಾಜೇಶ್ವರಿಯ ಬಗ್ಗೆ ಮಾತಾಡಲಾರೆ. ಅಂಥ ರಮಣೀಯ ಭಾವನೆಗಳು ಒಂದು ಸಮೂಹದ ಬೆಳವಣಿಗೆಯ ಕೆಲವೊಂದು ಕಾಲಘಟ್ಟಗಳಲ್ಲಿ ಅಗತ್ಯ ವಾಗಬಹುದು. ಕರ್ನಾಟಕದ ಏಕೀಕರಣದ ಪೂರ್ವಭಾವಿಯಾಗಿ ಅಂಥ ರಮಣೀಯ ಕಲ್ಪನೆ ಅಗತ್ಯವಾಗಿತ್ತು. ಇಂದೀಗ ವಾಸ್ತವತೆಯ ಸಮಸ್ಯೆಗಳನ್ನ ಎದುರಿಸೋ ಕಾಲ. ಆದ್ರೂ ನಮ್ಮ ಭಾವುಕ ಜಗತ್ತು ನಷ್ಟಗೊಂಡಿಲ್ಲ. ಅದು ನಷ್ಟಗೊಂಡರೆ ನಂತರ ಬದುಕೋದಕ್ಕೆ ಕಾರಣವೇ ಇಲ್ಲದಾಗತ್ತೆ. ಯಾಕೆಂದ್ರೆ ಮನುಷ್ಯ ಕೇವಲ ಹೊಟ್ಟೆ ಹೊರೆಯೋ ಉದ್ದೇಶದಿಂದಲೆ ಬದುಕೋದಕ್ಕೆ ಆಗಲ್ಲ. ಬೇರೆ ಮೌಲ್ಯಗಳಿರುತ್ತವೆ. ಕನಸುಗಳಿರುತ್ತವೆ, ಕಲ್ಪನೆಗಳಿರುತ್ತವೆ. ಈ ಇರುವಿಕೆಯೇ ಇವುಗಳ ವಾಸ್ತವ ಕೂಡ. ಮನುಷ್ಯನ ಇಂಥ ನೆಲಬಿಟ್ಟ ಅಸ್ತಿತ್ವದಲ್ಲಿ ಭಾಷೆಗೆ ಮಹತ್ತರ ಪಾತ್ರವಿದೆ. ಆದ್ರೆ ಭಾವುಕತೆಯ ಅಪಾಯವೆಂದರೆ ಭಾವುಕತೆಯೇ ಆಗಿದೆ. ಅದು ನಮ್ಮಲ್ಲಿ ಕೆಲವೊಂದು ವಿಷಯಗಳಲ್ಲಿ ದಾರಿತಪ್ಪಿಸುವ ಸಾಧ್ಯತೆಯಿದೆ. ಕನ್ನಡತನ ನಮಗೆ ಬೇಕು. ಮಾತ್ರ ಅದು ನಮಗೆ ಬಿಡುಗಡೆ ಕೊಡುವ ಬದಲು ನಮ್ಮನ್ನ ಅಜ್ಞಾನದಲ್ಲಿ ಕೆಡವಬಾರದು.

ಈಗ ಬೆಂಗ್ಳೂರು, ಕೋಲಾರದಂಥ ಕಡೆ ಬೇರೆ ಭಾಷೆಯ ಜನ ಬಂದು ನೆಲೆಸ್ತ ಇದಾರೆ. ನೆಲಸೋದೇ ಅಲ್ಲ, ನಮ್ಮ ರಾಜಕೀಯ ಸಾಂಸ್ಕೃತಿಕ ಜೀವನವನ್ನ ಆಳೋ ದಕ್ಕೆ ನೋಡ್ತ ಇದಾರೆ. ಹೀಗಾದಾಗ ನಮಗೆ ಘಾಬರಿಯುಂಟಾಗೋದು ಸಹಜವೆ. ಘಾಬರಿಯ ಕಾರಣವೇನು ? ನಮ್ಮ ಭಾಷೆಗೆ ಏನಾದ್ರೂ ಆಗಿಬಿಡತ್ತೋ ಎಂಬ ಘಾಬರಿ. ಅಂದ್ರೆ ಭಾಷೆ ಅಂತ ಅನ್ನೋದು ಒಂದು ವಾಸ್ತವ. ಭಾಷೆಗೋಸ್ಕರ

ಜಗಳಗಳಾಗಿವೆ, ಯುದ್ಧಗಳಾಗಿವೆ. ಯಾಕೆಂದ್ರೆ ಭಾಷೆ ಅನ್ನೋದು ನಮ್ಮ ಭಾವನಾತ್ಮಕ ಜಗತ್ತನ್ನು ಆಳುವಂಥ ಒಂದು ಶಕ್ತಿ. ಬರೀ ಕಣ್ಣಿಗೆ ಕಾಣಿಸೋದ್ರಲ್ಲೆ ನಮ್ಮ ಜಗತ್ತು ಮುಗಿಯೋದಿಲ್ಲ. ಹೊರ ಜಗತ್ತಿಗಿಂತಲೂ ದೊಡ್ಡದು ಆಂತರಿಕ ಜಗತ್ತು. ಈ ಆಂತರಿಕ ಜಗತ್ತಿಗೆ ಅಪಾಯುವಾಗೋದನ್ನ ನಾವು ಸಹಿಸೋದಿಲ್ಲ. ನಿಮ್ಮ ಉಡುಗೆ ತೊಡುಗೇನ ಯಾರಾದ್ರೂ ಟೀಕಿಸಿದರೆ ನಿಮಗೆ ಬೇಸರವಾಗುತ್ತೆ. ಆದರೆ ಅದನ್ನ ನೀವು ಸಹಿಸಿಕೋಬಲ್ಲಿರಿ. ಆದರೆ ನಿಮ್ಮ ಭಾಷೇನ ಟೀಕಿಸಿದರೆ ಸಹಿಸೋದು ಕಷ್ಟವಾಗುತ್ತೆ. ನಂತರ ಅಂಥ ವ್ಯಕ್ತಿಯೊಂದಿಗೆ ಆತ್ಮೀಯವಾಗಿ ಇರೋದು ಕಷ್ಟವೆನಿಸುತ್ತದೆ. ಹಾಗೇನೆ, ಬೇರೆ ಭಾಷೆಯ ವ್ಯಕ್ತಿ ನಮ್ಮ ಭಾಷೇನ ಕಲ್ತು ಮಾತಾಡ ತೊಡಗಿದ್ರೆ ಅದು ನಮಗೆ ಖುಷಿಯ ಸಂಗತಿ. ಆತನ ಮಾತು ತಪ್ಪು ತಪ್ಪಾಗಿದ್ರೂ ಕ್ಷಮಿಸಿ ಬಿಡ್ತೇವೆ. ನಾನು ಭಾವನಾತ್ಮಕ ಸತ್ಯ ಅನ್ನೋದು ಇದನ್ನೆ. ಆದರಿಂದ್ಲೆ, ಬೇರೆ ಭಾಷೆಯನ್ನಾಡುವ ಜನರ ಮಧ್ಯೆ ಹೋಗಿ ನನ್ನ ಬಿಸಾರ ಬೇರೆ ಅಂತ ಪಟ್ಟು ಹಿಡಿಯೋದು ಅಪಾಯಕಾರಿ ಕೆಲಸ. ಮನುಷ್ಯ ಕೇಳುವಷ್ಟೇ ಕೊಡೋದಕ್ಕೂ ತಯಾರಿರಬೇಕು.

ಭಾಷೆ ಮಟ್ಟಿಗೆ ಸಹನೆ ಅಸಹನೆಗಳ ಪ್ರಶ್ನೆ ಅತ್ಯಂತ ಜಟಿಲವಾದ್ದು. ಕೆಲವೊಮ್ಮೆ ಯಾವ ಕಾರಣಾನೂ ಇಲ್ದೇನೆ ಬೇರೆ ಜನರ ಅಸಹನೆಗೆ ಗುರಿಯಾಗಿಬಿಡ್ತಾರೆ. ಕಾರಣವಿಲ್ಲದ ಇಂಥ ವರ್ತನೆಗೆ ಪೂರ್ವಾಗ್ರಹ ಅನ್ನುತ್ತಾರೆ. ಪೂರ್ವಾಗ್ರಹದಿಂದ ಪ್ರೇರಿತವಾದ ವರ್ತನೆಗಳು ಅತ್ಯಂತ ದಾರುಣವಾದ ಪರಿಣಾಮಗಳನ್ನುಂಟುಮಾಡ್ತವೆ. ಸಮಕಾಲೀನ ಚರಿತ್ರೆಯಲ್ಲಿ ಸಾಕಷ್ಟು ಉದಾಹರಣೆಗಳಿವೆ. ಜನಾಂಗ ದ್ವೇಷ, ವರ್ಣ ದ್ವೇಷ, ಮತದ್ವೇಷ, ಭಾಷಾದ್ವೇಷ-ಇವೆಲ್ಲವೂ ಒಂದೇ ರೀತಿಯವು. ನಾಜಿಗಳು ಯೆಹೂದ್ಯರನ್ನ ಹಾಗೂ ಜಿಪ್ಸಿಗಳನ್ನ ಸಾಮೂಹಿಕ ವಧೆ ಮಾಡೋದಕ್ಕೆ ಹೇಸಲಿಲ್ಲ; ಯಾಕೆಂದರೆ ಜರ್ಮನಿಯನ್ನು ಯೆಹೂದ್ಯರು ಜಿಪ್ಸಿಗಳೂ ಕಲುಷಿತಗೊಳಿಸಿದ್ದಾರೆ ಎನ್ನೋದು ಅವರ ನಂಬಿಕೆಯಾಗಿತ್ತು. ಆರ್ಯನ್ ಮೂಲದವರು ತಾವು-ಜಗತ್ತಿನ ಜನಾಂಗಗಳೆಲ್ಲ ತಾವೇ ಶ್ರೇಷ್ಠ, ತಮ್ಮ ರಕ್ತವೇ ಅತ್ಯಂತ ಶುದ್ಧವಾದ್ದು ಎಂಬ ಪೂರ್ವಾಗ್ರಹದಿಂದ ನಾಜಿಗಳು ಕುರುಡರಾಗಿದ್ದರು, ನೀಲಿ ಕಣ್ಣುಗಳ, ಕೆಂಪು ಮೈ ಬಣ್ಣದ, ದೀರ್ಘದೇಹಿಗಳೂ ಶಕ್ತಿಶಾಲಿಗಳೂ ಆದ ಆರ್ಯನ್ ಮೂಲದವರಲ್ಲದವರಿಗೆ ಜರ್ಮನಿಯಲ್ಲಿ ಮಾತ್ರವೇ ಅಲ್ಲ ಲೋಕದಲ್ಲೆಲ್ಲೂ ಇರಲುಹಕ್ಕಿಲ್ಲ ಎಂಬ ವಾದ ನಾಜಿಗಳದ್ದು. ತಮಾಷೆಯೆಂದರೆ ಯಾವ ವಿಧದಿಂದ ನೋಡಿದರೂ ಈ ಬಣ್ಣನೆಗೆ ಒಳಗಾಗದ ಗೆಬೆಲ್ಸ್ ಇಂಥವಾದವನ್ನ ಪ್ರಚಾರ ಪಡಿಸಲು ಮುಂದಾದ್ದು ! ತನ್ನ ದೈಹಿಕ 'ಕೊರತೆ'ಗಳನ್ನ ತಿಳಿದುಕೊಂಡಿದ್ದ ಈತ ಇತರ ನಾಜಿಗಳಿಗಿಂತ ತುಸು ಜಾಸ್ತಿನೇ ಮಾತಾನಾಡೋದರ ಮೂಲಕ ಇವನ್ನ ಮರೆಮಾಚುವುದಕ್ಕೆ ಯತ್ನಿಸಿದ್ದು ಕಂಡು ಬರುತ್ತೆ.

ರಕ್ತದ ಮೇಲಿಂದ ಯಾವುದೇ ಒಂದು ಜನಾಂಗದವರು ಮೇಲು, ಇನ್ನೊಂದು ಕೀಳು ಎಂದು ಹೇಳೋಹಾಗಿಲ್ಲ. ರಕ್ತ, ಮೈಬಣ್ಣ, ಎತ್ತರ, ಭಾಷೆ, ಆಹಾರ ವ್ಯವಹಾರ-ಇವು ಯಾವುವೂ ಒಂದು ಜನಾಂಗವನ್ನ ಶ್ರೇಷ್ಠವನ್ನಾಗಿಯಾಗಲಿ, ಹೀನವನ್ನಾಗಿಯಾಗಲಿ ಮಾಡೋದಿಲ್ಲ. ಆದ್ರೆ ಅಸ್ಸಾಂ ಚಳುವಳಿಯಂಥ ಚಳುವಳಿಗಳಿಗೆ ಅರ್ಥವಿಲ್ವೆ? ಜನ ಹೊರಗಿನಿಂದ ಬಂದು ತಮ್ಮ ಸಂಸ್ಕೃತೀನ ಹಿಂದಕ್ಕೆ ತಳ್ತ ಇದ್ದಾರೆ, ತಮ್ಮ ಹುಟ್ಟಿದ ಊರಲ್ಲೆ ತಾವು ಪರಕೀಯರಾಗ್ತಿದೇವೆ ಎಂಬ ಅಹೋಮಿಯಾ ಜನರ ಭಾವನೆ ತಪ್ಪೆ? ಅಥವಾ ಈ ಭಯದ ಹಿಂದೆ ಅಡಗಿರೋದು ಕೇವಲ ಆರ್ಥಿಕ ಜೀವನದ ಸತ್ಯಗಳು ಮಾತ್ರವೆ? ಒಂದು ಭಾಷೆ, ಒಂದು ಸಂಸ್ಕೃತಿ ಎಷ್ಟರ ಮಟ್ಟಿಗೆ ಹೊರಗಿನ ಒತ್ತಡಗಳನ್ನ ಸಹಿಸಿಕೊಳ್ಳೋದು ಸಾಧ್ಯ?

ಭಾಷಾ ವಿಜ್ಞಾನಿಯೂ ವಿಚಾರವಾದಿಯೂ ಆದ ನಾನು ಒಂದು ಭಾಷೆ ಇನ್ನೊಂದಕ್ಕಿಂತ ಮೇಲು ಅಥವಾ ಕೀಳು ಎಂದು ಹೇಳಲಾರೆ. ಆದರೆ ಒಬ್ಬ ಲೇಖಕನೂ. ಒಂದು ಪ್ರಿಯವಾದ ಭಾಷೆ. ನನ್ನ ಪ್ರೀತಿ, ಸಿಟ್ಟು, ದುಗುಡ, ಆತಂಕಗಳು ಈ ಬಾಷೆಯ ಮೂಲಕವೆ ವ್ಯಕ್ತಳೆಯಬೇಕಾದ್ದರಿಂದ ನನ್ನ ಬದುಕಿನ ಒಂದು ಅಂಗವೇ ಆಗಿದೆ ಇದು. ಆದ್ದರಿಂದಲೇ ಭಾಷೆ ಬಿಡುಗಡೇನೂ ಹೌದು, ಬಂಧನಾನೂ ಹೌದು. ಇಂಥ ದ್ವಂದ್ವಗಳು ನಮ್ಮ ವ್ಯಕ್ತಿಜೀವನದಲ್ಲಿದ್ದಂತೆ ಸಾರ್ವಜನಿಕ ಜೀವನದಲ್ಲೂ ಇವೆ. ಯಾವೊಬ್ಬ ವ್ಯಕ್ತಿಯೂ ಒಂದು ನಡುಗಡ್ಡೆಯಲ್ಲ ಅಂತಾನೆ ಇಂಗ್ಲಿಷ್ ಕವಿ ಡನ್. ಯಾರಂ ಸತ್ತರು ಅಂತ ಬೀದಿಬಾಗಿಲಿಗೆ ಓಡಬೇಡ, ಪ್ರತಿಯೊಂದೂ ಸಾವೂ ನಮ್ಮದೇ ಅಂತ ಅನ್ನುತ್ತಾನೆ. ಇದೇನೋ ವೇದಾಂತ ಅನ್ನಿಸಬಹುದು--ಇದರ ಹಿಂದಿನ ಸತ್ಯವನ್ನ ಮಾತ್ರ ಅಲ್ಲಗಳೆಯಲಿಕ್ಕೆ ಆಗೋದಿಲ್ಲ. ಯಾವ ವ್ಯಕ್ತಿಯೂ ಒಂದು ನಡುಗಡ್ಡೆ ಅಲ್ಲ. ವ್ಯಕ್ತಿಗೆ ವ್ಯಕ್ತಿಯ ಸಂಬಂಧ ಇರುತ್ತೆ; ಸಮೂಹಕ್ಕೆ ಸಮೂಹದ ಸಂಬಂಧಾನೂ ಇರ್ತದೆ. ಅದೇ ಅಲ್ದೆ ಸಮೂಹವಿಲ್ಲದೆ ವ್ಯಕ್ತಿಯಿಲ್ಲ, ವ್ಯಕ್ತಿಯಿಲ್ಲದೆ ಸಮೂಹನೂ ಇಲ್ಲ. ಇದೊಂದು ಚಿರಂತನ ಸತ್ಯ. ಹಾಗೇನೇ ಯಾವ ಭಾಷೆ ಕೂಡ ಒಂದು ನಡುಗಡ್ಡೆ ಅಲ್ಲ. ಎಲ್ಲ ಭಾಷೆಗಳೂ ಪರಸ್ಪರ ಮೈ ಮೈ ಮುಟ್ಟಿಕೊಂಡೇ ಇವೆ. ಚಾಮ್ಸ್‌ಕಿಯ ಪ್ರಕಾರ ಎಲ್ಲ ಭಾಷೆಗಳ ಹಿಂದೆ ಮನುಷ್ಯರೆಲ್ಲರಿಗೆ ಮೂಲಭೂತವಾದ ಕೆಲವೊಂದು ತತ್ವಗಳಿವೆ. ಮಗು ಹುಟ್ಟಿದಾಗಲೇ ಈ ತತ್ವಗಳನ್ನೂ ಅದು ಪಡಕೊಂಡಿರ್ತದೆ. ನಂತರ ತನ್ನ ಸಮಾಜದ ಭಾಷೇನ ಕಲಿಯೋದಕ್ಕೆ ಮಗೂಗೆ ಕಷ್ಟವಾಗಲ್ಲ. ಅದೇ ರೀತಿ ಇನ್ನೊಂದು ನಾವು ತಿಳಕೋಬೇಕಾದ ಸಂಗತಿಯೆಂದರೆ ಯಾವ ಭಾಷೇನೂ ಪರಿಶುದ್ಧವಲ್ಲ. ಶ್ರೇಷ್ಠ ಅಥವಾ ನಿಕೃಷ್ಟವಲ್ಲ. ಮನುಷ್ಯ ಜನಾಂಗಗಳಂತೆ ಭಾಷೆಗಳೂ ಸಹಾ ಒಂದರಿಂದೊಂದು ಪಡೆಯುತ್ತವೆ, ಕೊಡುತ್ತವೆ, ಪರಸ್ಪರ ಪರಿಣಾಮ ಬೀರುತ್ತವೆ. ಇದು ಭಾಷೆಯ ಜಾಯಮಾನ--ಎಂದರೆ, ಮನುಷ್ಯರ ಸಹಜ ಪ್ರವೃತ್ತಿ ಎಂದರ್ಥ. ಯಾಕೆಂದ್ರೆ ಭಾಷೆಗೆ ಅದರದೇ ಆದ ಮನಸ್ಸಿಲ್ಲ.

ಬೇರೊಂದು ಭಾಷೆಯ ಪದಗಳನ್ನ ಎಡ ತಗೊಳ್ಬೇಕು ಅಂತ ನಾವು ಮನಸ್ಸು ಮಾಡಿದರೆ ನಮ್ಮ ಭಾಷೆಗೆ ಆ ಪದಗಳು ಬರ್ತವೆ. ಇಂದಲ್ಲ ನಮ್ಮ ಭಾಷೆ ಪರಿಶುದ್ಧವಾದ್ದು, ಇತರ ಭಾಷೆಗಳ ಸಂಪರ್ಕದಿಂದ ಅದು ಹಾಳಾಗತ್ತೆ, ಅದ್ದರಿಂದ ಅದನ್ನ ಗೃಹಬಂಧನ ದಲ್ಲಿಟ್ಟು ಕಾಪಾಡಿಕೋಬೇಕು. ಅದರ ಸುತ್ತನೂ ಒಂದು ಭದ್ರ ಕೋಟೆ ಕಟ್ಟಬೇಕು ಅನ್ನೋದಿದೆಯಲ್ಲ--ಶುದ್ಧೋದನ ತನ್ನ ಮಗನ್ನ ಹಾಗೆ ಬೆಳೆಸೋದಕ್ಕೆ ಪ್ರಯತ್ನ ಮಾಡಿದ. ಆದರೆ ಅದು ಫಲಪ್ರದವಾಗಲಿಲ್ಲ. ಯಾಕೆಂದ್ರೆ ಇಂಥ ಇನ್ಸುಲೇಶನ್ ಮನುಷ್ಯರಿಗೆ ಎಷ್ಟು ಅಸಹಜವೋ ಭಾಷೆಗಳಿಗೂ ಅಷ್ಟೇ ಅಸಹಜ. ನೀವು ಆಂಧ್ರ ದಿಂದ ತಮಿಳುನಾಡಿಗೆ ಹೋದರೆ ತೆಲುಗು ಎಲ್ಲಿ ಮುಗಿಯುತ್ತೆ, ತಮಿಳು ಎಲ್ಲಿ ಆರಂಭ ವಾಗತ್ತೆ ಅನ್ನೋದೇ ತಿಳಿಯಲ್ಲ! ಆದ್ರೆ ಭಾಷೆಗಳು ಪರಸ್ಪರ ಮೈ ಮೈ ಮುಟ್ಟ ಬಾರದು ಅನ್ನೋದು ಕೇವಲ ನಮ್ಮ ಹಟಮಾರಿತನ. ಇದಕ್ಕೆ ಕಾರಣ ಬೇರೆ ಬೇರೆ ಇರ್ತದೆ. ಹೊರಗಿನವರ ಕುರಿತಾದ ಭಯ, ಸಂದೇಹ, ಒಣಜಂಭ ಇತ್ಯಾದಿ ಇತ್ಯಾದಿ. ಈ ಕಾರಣಗಳೇನೇ ಇದ್ರೂ ಇದರಿಂದ ಭಾಷೆಯ ಜೀವಂತಿಕೆಗೆ ಆಗೋ ಪರಿಣಾಮ ಮಾತ್ರ ಚೆನ್ನಾಗಿರೋದಿಲ್ಲ. ತಮಿಳ್ನಾಡಿನಲ್ಲಿ ಈ ಪರಿಸ್ಥಿತಿಯ ಸೂಚನೆಗಳಿವೆ. ತಮಿಳರು ಸಂಸ್ಕೃತ, ಹಿಂದಿ, ಇಂಗ್ಲೀಷ್ ಎಲ್ಲವನ್ನೂ ಒಟ್ಟಾರೆಯಾಗಿ ದೂರವಿಟ್ಟು, ತಮ್ಮ ಬೇರುಗಳ್ನ ಹುಡುಕ್ತ ಹುಡುಕ್ತ ಹಿಂದೆ ಹಿಂದೆ ಹೋಗ್ತಿದಾರೆ. ಭಾಷೆಯ ಮೇಲಾಗುವ ಪರಿಣಾಮವೆಂದರೆ ಅದನ್ನಾಡೋ ಮಂದಿ ಮೇಲಿನ ಪರಿಣಾಮ ಅಂತ ತಿಳಕೋಬೇಕು. ಒಂದು ಭಾಷೆಯನ್ನಾಡುವ ಜನ ಹೊರಗಿನವರೊಂದಿಗೆ ಯಾವ ರೀತಿ ವರ್ತಿಸಲು ತಯಾರಾಗಿದ್ದಾರೆ ಎಂಬ ಪ್ರಶ್ನೆ ಇಲ್ಲಿ ಮುಖ್ಯವಾಗಿರೋದು.

ಈ ರೀತಿಯಿಂದ ನೋಡಿದ್ರೆ ಕನ್ನಡದ ಅದೃಷ್ಟ ಚೆನ್ನಾಗಿದೆ. ಕೇವಲ ಭಾಷೆ ದೃಷ್ಟಿಯಿಂದ ನೋಡಿದ್ರೂ, ಕನ್ನಡವು ಸಂಸ್ಕೃತ, ಪ್ರಾಕೃತ, ಪರ್ಶಿಯನ್, ಮರಾಠಿ, ಹಿಂದಿ ಮುಂತಾದ ಭಾಷೆಗಳ ಸಂಪರ್ಕ ಹೊಂದಿ ಅನೇಕ ವಿಧದಲ್ಲಿ ತನ್ನ ಕಸುವನ್ನ ಹೆಚ್ಚಿಸಿಕೊಂಡಿದೆ. ಪ್ರಾಕೃತ ಮೂಲವಾದ ಪ-ಹ ಬದಲಾವಣೆ ದಕ್ಷಿಣ ಭಾರತದ ಪ್ರಧಾನ ದ್ರಾವಿಡ ಭಾಷೆಗಳಲ್ಲಿ ಕನ್ನಡದಲ್ಲಿ ಮಾತ್ರವೇ ಕಾಣಿಸಿಕೊಂಡಿತು ಅನ್ನೋದು ಕೂಡ ಕುತೂಹಲಕರ ಸಂಗತಿ. ಕನ್ನಡದ 'ಹಾಲು' ಉಳಿದ ಸೋದರ ಭಾಷೆಗಳಲ್ಲಿ 'ಪಾಲು' ಆಗಿಯೆ ಉಳಿದಿದೆ. ಆಶ್ಚರ್ಯವೆಂದರೆ, ಕನ್ನಡದಲ್ಲೂ ಎಲ್ಲ ಪಕಾರಗಳು ಹಕಾರವಾಗಲಿಲ್ಲ; ಹಾಲು ಎಂಬ ಶಬ್ದದ ಜತೇನೇ ಪಾಲು (ಇನ್ನೊಂದು ಅರ್ಥದಲ್ಲಿ) ಉಳಿದುಕೊಂಡಿದೆ. ಹಚ್ಚೆಯ ಜತೆಗೆ ಪಚ್ಚೆನೂ ಇದೆ! ಅಲ್ದೆ, ಭೌಗೋಳಿಕ ಕಾರಣ ಗಳಿಂದಾಗಿ ಕನ್ನಡದೊಳಗೆ ಭಾಷಾಪ್ರಭೇದಗಳೂ ಸಾಕಷ್ಟು ಸಂಖ್ಯೆಯಲ್ಲಿವೆ. ಅಂದ್ರೆ ಇದು ಕನ್ನಡದ್ದೆ ವೈಶಿಷ್ಟ್ಯ ಅಂತ ನಾವೇನೂ ಹೇಳ್ತಾ ಇಲ್ಲ. ಒಂದು ಭಾಷೆ ಶ್ರೀಮಂತವೋ ಅಲ್ಲವೋ ಎಂಬುದನ್ನ ಈ ಎಲ್ಲ ವಿದ್ಯಮಾನಗಳು ಸೂಚಿಸುತ್ತವೆ ಅನ್ನೋದಕ್ಕೆ ಹೇಳ್ತ ಇದೇನೆ. ಇಲ್ಲಿ ಶ್ರೀಮಂತಿಕೆ ಅನ್ನೋ ಪದವನ್ನ ಸರಿಯಾದ

ರೀತಿಯಲ್ಲಿ ಅರ್ಥಮಾಡಿಕೋಬೇಕು. ಈಚೆಗೆ ಬೇಂದ್ರೆಯವರ ಕಾವ್ಯಾನ ಅಭ್ಯಾಸ ಮಾಡ್ತಿದ್ದಂತೆ ನನಗನ್ನಿಸ್ತು--ಈ ಕವಿಯನ್ನ ಜನಪದ ಕವಿ ಅನ್ನೋದಕ್ಕಂತ್ಲೂ, ಭಾಷೆಯ ಮಡಿವಂತಿಕೇನ ಮೀರಿದ ಬಂಡುಗಾರ ಕವಿ ಅನ್ನೋದೇ ಹೆಚ್ಚು ಸೂಕ್ತ ಅಂತ. ಯಾಕಂದ್ರೆ ಬೇಂದ್ರೆ ಕನ್ನಡದ ಎಲ್ಲ ಭಾಷಾ ಪ್ರಭೇದಗಳನ್ನೂ ಒಂದೇ ಬೀಸಿನಲ್ಲಿ ಬಳಸ್ತಾರೆ; ಅವು ಸಾಲ್ದೆ ಇತರ ಭಾಷೆಗಳಿಂದ್ಲೂ ಕೊಂಡುಕೋತಾರೆ. ಬೇಂದ್ರೆ ಭಾಷೆಯೆಂದರೆ ಅದೊಂದು ಸಂಕರ, ಸಂಕೀರ್ಣ. ಭಾಷಾಶುದ್ಧಿಯಾಗಲಿ, ಮಡಿವಂತಿಕೆಯಾಗಲಿ, ಅಲ್ಲಿ ಹುಡುಕಿದ್ರೂ ಸಿಗಲಾರವು. ಇದರಿಂದ ಬೇಂದ್ರೆಗೆ ಒದಗೋ ಪ್ರಾಸಲಯಗಳ ಸಾಧ್ಯತೆ ಅಪರಿಮಿತ. ಆದ್ರೆ, ಬೇಂದ್ರೆ ಹೀಗೆ ಕನ್ನಡವನ್ನ ಪೂರ್ತಿಯಾಗಿ ಉಪಯೋಗಿಸೋದು ಕೇವಲ ಹೊರ ಅಲಂಕಾರಗಳಿಗೆ ಮಾತ್ರವೆ ಅಲ್ಲ; ಶೈಲಿಯೆನ್ನೋದು ಬೇಂದ್ರೆಗೆ ಕಾವ್ಯದ ಬಗೆಗಿನ ಹಾಗೂ ಜೀವನದ ಬಗೆಗಿನ ಧೋರಣೆಯಾಗಿಬಿಡ್ತದೆ.

ಅತಿ ಶುದ್ಧವಾದ ಭಾಷೆಯಾಗಲಿ, ಅತಿ ಶುದ್ಧ ಪರಂಪರೆಯಾಗಲಿ ಮಾನವ ಸಮಾಜದಲ್ಲಿ ಇಲ್ಲ. ಒಂದು ಪರಂಪರೆ ಅನ್ನೋದು ಆ ಹೆಸರೇ ಸೂಚಿಸುವಂತೆ ಹಲವು ತಲೆಮಾರುಗಳಿಂದ ಬಂದಿರೋ ವಿಶ್ವಾಸಗಳು. ಹೀಗೆ ತಲೆಮಾರುಗಳನ್ನ ದಾಟಿ ಬರುತ್ತ ಅವು ಬದಲಾಗುವುದು, ಅರ್ಥ ಕಳಕೊಳ್ಳೋದು, ಹೊಸ ಅರ್ಥ ಪಡೆಯೋದು ಸಾಧ್ಯ. ಆದ್ದರಿಂದ ಯಾವ ಪರಂಪರೆಯೂ ಅದರ ಮೂಲರೂಪದಲ್ಲಿರೋದು ಸಾಧ್ಯವಿಲ್ಲ. ಬೇರುಗಳನ್ನ ಹುಡುಕ್ಕೊ ಮಂದಿ ಒಂದು ವೇಳೆ ಬೇರುಗಳನ್ನ ಕಾಣೋದ್ರಲ್ಲಿ ಯಶಸ್ವಿಯಾದ್ರೂ ಆ ಬೇರುಗಳ ಸ್ವರೂಪ ಕಂಡು ವಿಸ್ಮಯಗೊಳ್ಳೋದರಲ್ಲಿ ಸಂದೇಹವಿಲ್ಲ. ಆಗ ನಿರಾಸೆಯೂ ಆಗುತ್ತೆ. ಯಾಕಂದ್ರೆ ವಾಸ್ತವ ಅನ್ನೋದು ನಮ್ಮ ಕಲ್ಪನೆಯಷ್ಟು ಸುಂದರವಾಗಿ ಇರಲ್ಲ. ದೋಸ್ತೊವ್‌ಸ್ಕಿಯ ಕರಮಜೋವ್ ಸೋದರರು ಎಂಬ ಕಾದಂಬರಿಯಲ್ಲಿ ಕ್ರಿಸ್ತ ಮರಳಿ ಬರ್ತೇನೆ ಅಂದಾಗ ಜನ ಬೇಡ ಬೇಡ ಅನ್ನುತ್ತಾರೆ. ಕ್ರಿಸ್ತ ಮರಳಿ ಬಂದರೆ ಯಾರಿಗೂ ಆತನ ಪರಿಚಯ ಕೂಡ ಸಿಗಲ್ಲ. ಅವನಿಗೆ ತನ್ನ ಉಪದೇಶ ಹೀಗೊಂದು ರೂಪ ತಳೆಯಿತೇ ಅಂತ ಅಚ್ಚರಿನೂ ಆಗತ್ತೆ. ಹೋಮರನ ಮಹಾಕಾವ್ಯವಾದಈಲಿಯಡ್‌ನ ರೋಮಾಂಚಕಾರಿ ಕತೆ ಯಾರಿಗೆ ತಾನೆ ಗೊತ್ತಿಲ್ಲ? ಅಂಥ ಕತೆ ನಡೆದ ಟ್ರಾಯ್ ನಗರದ ಶೋಧನೆಯನ್ನು ಹೆನ್ರಿಕ್ ಶ್ಲೈಮನ್ ಎಂಬಾತ ಕಳೆದ ಶತಮಾನದ ಕೊನೆಯಲ್ಲಿ ಮಾಡಿದ. ಟ್ರಾಯ್ ನಗರವೆಂಬುದು ಒಂದು ನಿಜಕ್ಕೂ ಇತ್ತು, ಅದೊಂದು ಕಪೋಲಕಲ್ಪಿತ ಕತೆಯಾಗಿರಲಿಲ್ಲ ಎನ್ನೋದು ಇದರಿಂದ ಗೊತ್ತಾಯ್ತು. ಆದರೆ ಈ ಕುರಿತು ಬರೀತ ಶ್ಲೈಮನ್ ಹೇಳ್ತಾನೆ--ಟ್ರಾಯ್ ನಗರ ಹೋಮರ್ ಹೇಳೋವಷ್ಟು ದೊಡ್ಡದೇನೂ ಆಗಿರ್ಲಿಲ್ಲ ಅಂತ. ಈ ಮಹಾಕವಿಯ ಕಲ್ಪನೆಯನ್ನ ಮನಸ್ಸಿನಲ್ಲಿಟ್ಟುಕೊಂಡು ನೋಡಿದವರಿಗೆ ಕಾದಿರೋದು ಭಾರೀ ನಿರಾಸೆ. ಕವಿ ವರ್ಣಿಸುವಷ್ಟು

ಶೂದ

ದೊಡ್ಡ ಯುದ್ಧ ಅಲ್ಲಿ ನಡೆದಿರೋದು ಸಾಧ್ಯ ಇಲ್ಲ. ಶ್ಲೈಮನ್ ಇನ್ನೂ ಒಂದು ಸಂಗತಿ ಹೇಳ್ತಾನೆ—ಹೋಮರ್ ಕವಿಯಾಗಿದ್ದ, ಚರಿತ್ರಕಾರನಾಗಿರಲಿಲ್ಲ, ಅಂತ. ಹೋಮರನ ಟ್ರಾಯ್ ನಗರದ ಕಲ್ಪನೇನೇ ಬೇರೆ, ವಾಸ್ತವದ ಸಂಗತೀನೇ ಬೇರೆ. (ಆದರೆ ಈ ಕಾರಣಕ್ಕೆ ಟ್ರಾಯ್ ನಗರದ ಶೋಧನೆಯ ಮಹತ್ವವೇನೂ ಕಡಿಮೆ ಯಾಗಲ್ಲ.) ಹಾಗೇನೆ, ಒಂದು ವೇಳೆ ರಾಮಾಯಣ, ಮಹಾ ಭಾರತಗಳ ಕತೆ ನಿಜ ವಾಗಿರ್ತಿದ್ದರೆ, ಈ ನಿಜಕ್ಕೂ ನಮ್ಮ ಕಲ್ಪನೆಗೂ ವ್ಯತ್ಯಾಸ ಖಂಡಿತ ಇರತ್ತೆ ಎಂದು ಊಹಿಸಬಹುದು. ಹೀಗೆ ನಾವು ನದೀಮೂಲ, ಋಷೀಮೂಲ, ಕಾವ್ಯಮೂಲ, ಪರಂ ಪರೆಯ ಮೂಲ ಹುಡುಕಿ ಭ್ರಮನಿರಸನಗೊಳ್ತೇವೆ. ಭಾಷೆಯ ಸಂಗತೀನೂ ಹೀಗೇ ಯಾವ ಭಾಷೆಯ ಮೂಲವನ್ನೂ ನಾವಿಂದು ಕಾಣುವ ಸ್ಥಿತಿಯಲ್ಲಿಲ್ಲ. ಭಾಷೆಯೆನ್ನೋದು ಹೇಗೆ ಹುಟ್ಟಿತು ಎನ್ನೋದರ ಬಗ್ಗೆ ಹಲವು ಥಿಯರಿಗಳಿವೆ. ಆದರೆ ಈ ಥಿಯರಿ ಗಳಲ್ಲಿ ಸರಿ ಯಾವುದು, ತಪ್ಪು ಯಾವುದು ತಿಳಿಯದು. ಇಂಥ ಹುಡುಕಾಟ ನಿಷ್ಪ್ರ ಯೋಜಕ. ಅದೂ ಅಲ್ಲದೆ, ನಮ್ಮ ಕನ್ನಡದ ಹಿಂದಿನ ರೂಪಗಳೇ ನಮಗಿಂದು ಅರ್ಥ ವಾಗಲ್ಲ. ಹಳೆಗನ್ನಡ ಓದಿ ತಿಳಕೋಬೇಕಾದರೆ ಪರಿಶ್ರಮ ಬೇಕು. ಹಾಗಾದಾಗ ಹಳೆ ಗನ್ನಡವೂ ಒಂದೇ, ಇನ್ನೊಂದು ಭಾಷೆಯೂ ಒಂದೇ.

ಬದಲಾಗ್ತ ಹೋಗೋದು ಭಾಷೆಯ ಜಾಯಮಾನ—ತಲೆಮಾರಿನಿಂದ ತಲೆ ಮಾರಿಗೆ ಇಂಥ ಬದಲಾವಣೆಗಳು ಆಗ್ತಲೇ ಇರುತ್ತವೆ. ಭಾಷೆನಲ್ಲೂ ಬಟ್ಟೆ ಬರೆ ಗಳಂತೆ ಫ್ಯಾಶನು ಬರತ್ತೆ, ಫ್ಯಾಶನು ಹೋಗತ್ತೆ. ನಮ್ಮದೇ ಅಜ್ಜಂದಿರು ಅಜ್ಜೀರು ಮಾತಾಡೋ ನಮ್ಮ ಭಾಷೆಯ ರೀತಿ ನಮಗೆ ಸೇರಲ್ಲ ; ನಾವು ಹಾಗೆ ಮಾತಾಡಿದರೆ ಹಳಬರ ಹಾಗೆ ತೋರುತ್ತೇವೆ. ಹಾಗೆ ಬಳಸೋದು ನಮಗೆ ಮುಜುಗರದ ವಿಷಯ. ಅದೇ ರೀತಿ ನಮ್ಮ ಮುಂದಿನ ಜನಾಂಗವೂ ನಮ್ಮ ರೀತಿಯನ್ನ ಕಂಡು ಮುಜುಗರ ಪಡಬಹುದು ಎನ್ನೋದು ಕೂಡ ಸತ್ಯ. ಇಂಥ ಸಹಜವಾದ ಬದಲಾವಣೇನ ಯಾವದೇ ಅಕಾಡೆಮಿ ಒಂದು ಫರ್ಮಾನ ಹೊರಡಿಸಿ ತಡೆಯೋದು ಸಾಧ್ಯವಿಲ್ಲ. ಆಯಾ ಜನಾಂಗದ ಆಯಾ ಪೀಳಿಗೆಯ ಅಗತ್ಯಗಳನ್ನ ಹೊಂದಿಕೊಂಡು ಭಾಷೆ ಬದಲಾಗತ್ತೆ. ಆದ್ದರಿಂದ ನಾಳಿನ ಕನ್ನಡದ ರೂಪ ಹೇಗಿರುತ್ತೆ ಅಂತ ಯಾರೂ ಹೇಳಲಾರರು. ಭಾಷೆ 'ಬೆಳೆಯುತ್ತೆ' ಎಂಬ ಭಾವನೆ ಕೆಲವರಿಗಿದೆ—ಈ 'ಬೆಳೆ'ಯೋದು ಎಂಬುದರ ಅರ್ಥ ನಮಗೆ ಗೊತ್ತಿರ ಬೇಕು. ಭಾಷೆ ಬೆಳೆಯೋದೆಂದ್ರೆ ಅಗತ್ಯಕ್ಕೆ ತಕ್ಕಂತೆ ಮಾರ್ಪಾಟು ಹೊಂದೋದು ಎಂಬ ಅರ್ಥ. ಒಂದು ಭಾಷೆಯಲ್ಲಿ ಸಾಹಿತ್ಯವಿದ್ದ ಮಾತ್ರಕ್ಕೆ ಅದು ಇವಿಲ್ಲದ ಭಾಷೆ ಗಿಂತ ಮುಂದಿದೆ ಎಂಬ ಭಾವನೆ ಸರಿಯಲ್ಲ. ಬರಹ ಯಾಕೆ ಬಂತು, ಸಾಹಿತ್ಯ ಯಾಕೆ ಬಂತು ಎಂದು ನೋಡಿದರೆ ನಾವು ನಿಜವಾಗಿ ಚರ್ಚಿಸುತ್ತಿರೋದು ಭಾಷೆಯನ್ನಲ್ಲ, ಭಾಷೆಯನ್ನಾಡುವ ಜನರನ್ನು ಎಂಬುದು ತಿಳಿಯುತ್ತೆ. ಆದ್ದರಿಂದಲೇ, ಮನುಷ್ಯ ಸಮಾಜವನ್ನು ಬಿಟ್ಟು ಭಾಷೆಯ ಗತಿಯ ಬಗ್ಗೆ ವಿವೇಚಿಸುವುದು ಬಹಳ ಸೀಮಿತವಾದ

ಸಮೀಪಸನವಾಗಿಬಿಡತ್ತೆ. ಭಾಷೆಯ ಕುರಿತು ನಾವು ಏನು ನಿರ್ಣಯ ತೆಗೆದುಕೊಂಡರೂ ಅದು ಆ ಭಾಷೆಯನ್ನಾಡುವ ಜನರ ಜೀವನದ ಮೇಲೆ ಪರಿಣಾಮ ಬೀರುತ್ತೆ. ಆದ್ರೆ ಕೇವಲ ಒಂದು ಅಕಾಡೆಮಿ ಅಥವಾ ಸರಕಾರ ಇಂಥ ನಿರ್ಣಯಗಳನ್ನು ತೆಗೆದುಕೊಂಡರೆ ಸಾಕಾಗೋದಿಲ್ಲ. ಜನ ಅದನ್ನ ಒಪ್ಪಬೇಕು.

ಇದು ಯಾಕೆ ಹೀಗೆ ಎಂಬುದಕ್ಕೆ ಉತ್ತರ ಸ್ಪಷ್ಟವಾಗಿಯೇ ಇದೆ. ಭಾಷೆಯನ್ನೋದು ಸಾರ್ವಜನಿಕ ಸೊತ್ತು. ಮನುಷ್ಯ ಯಾವುದಾದರೂ ಒಂದನ್ನ ಬೇರೆಯವರ ಜತೆ ಹಂಚಿಕೊಳ್ಳಲೇಬೇಕಾದ್ದಿದ್ದರೆ ಅದು ಭಾಷೆ ಎಂಬುದನ್ನ ಮರೀಬಾರ್ದು. ಒಬ್ಬನನ್ನು ಬಿಟ್ಟು ಇಬ್ಬರು ಸೇರಿದಾಗ ಮಾತ್ರವೆ ಭಾಷೆ ಅಗತ್ಯವಾಗೋದು. ಆದ್ದರಿಂದಲೇ ಭಾಷೆಯ ಉಪಯೋಗ ಸಾರ್ವಜನಿಕ ಜೀವನಕ್ಕೆ ಸ್ಪಂದಿಸುವಂಥ ಸಂಗತಿ. ನಾವು ಹತ್ತು ಜನ ಸೇರಿ, ಕನ್ನಡವನ್ನ ಇನ್ನು ಮುಂದೆ ಹೀಗೆ ಬಳಸ್ತೀವಿ ಅಂತ ಒಂದು ತೀರ್ಮಾನಕ್ಕೆ ಬಂದರೆ ಆಗ್ಲಿಲ್ಲ. ಈ ತೀರ್ಮಾನ ಚಾಲ್ತಿಗೆ ಬರಬೇಕು—ಎಂದರೆ, ಇದನ್ನ ಒಪ್ಪಿಕೊಳ್ಳಬೇಕು, ಅಳವಡಿಸಿಕೊಳ್ಳಬೇಕು, ಸಾರ್ವಜನಿಕ ಭಾಷೆಗೂ ಸಾಹಿತ್ಯ—ಮುಖ್ಯವಾಗಿ ಕಾವ್ಯ—ಭಾಷೆಗೂ ಇರೋ ವ್ಯತ್ಯಾಸ ನೋಡಿದರೆ ಕಾವ್ಯಭಾಷೆ ಯಾಕೆ ಹೆಚ್ಚೆಚ್ಚು ಖಾಸಗಿಯಾಗಿದೆ ಎಂಬುದು ಗೊತ್ತಾಗುತ್ತೆ. ಕಾವ್ಯಭಾಷೆಯಲ್ಲಿ ಜನಪದವೊಂದೇ ಸಾರ್ವಜನಿಕವಾದ್ದು. ಬೇಂದ್ರೆ, ಕುವೆಂಪು, ಅಡಿಗ, ಶಿವರುದ್ರಪ್ಪ ಇವರೆಲ್ಲರೂ ಕಾವ್ಯದಲ್ಲಿ ಭಾಷೇನ ಖಾಸಗಿಯಾಗಿ ಉಪಯೋಗಿಸ್ತಾರೆ. ಅವರೇನು ಹೇಳ್ತಾರೆಂದು ನಮಗೆ ಸುಲಭವಾಗಿ ಗೊತ್ತಾಗಲ್ಲ; ಹೀಗೆ ಸುಲಭದಲ್ಲಿ ಗೊತ್ತುಮಾಡೋದು ಅವರ ಉದ್ದೇಶಾನೂ ಅಲ್ಲ. ಕಾವ್ಯಭಾಷೆ ಖಾಸಗಿಯಾಗ್ತ ಆಗ್ತ ಅದು ಕವಿಯ ಒಳಜಗತ್ತಿಗೆ ನಮ್ಮನ್ನ ಒಯ್ದುಬಿಡತ್ತೆ. ಈ ಒಳಜಗತ್ತು ಪೂರ್ತಿಯಾಗಿ ನಮ್ಮ ಅರಿವಿಗೆ ಸಿಗತ್ತೆ ಅಂತ ಅನ್ನೋದಕ್ಕಾಗಲ್ಲ. ಸಾರ್ವಜನಿಕ ಭಾಷೆಯಲ್ಲಿ ಶಬ್ದಗಳಿಗೆ, ಶಬ್ದಗಳಿಂದಾಗುವ ವಾಕ್ಯಗಳಿಗೆ ಅರ್ಥವಿರತ್ತದೆ—ಈ ಅರ್ಥವೇನೆಂದು ಎಲ್ಲರಿಗೂ ತಿಳಿದಿರತ್ತೆ. ಯಾಕೆಂದರೆ ಭಾಷೆಗೂ ಹೊರಗಿನ ಜಗತ್ತಿಗೂ ಇರೋ ಸಂಬಂಧ ಸ್ಪಷ್ಟವಾದ್ದು. ಮಳೆ ಬರ್‍ತಾಇದೆ ಎಂದು ಯಾರಾದ್ರೂ ಹೇಳಿದ್ರೆ ಅದು ಸತ್ಯವೋ ಸುಳ್ಳೋ ಎಂದು ಪರೀಕ್ಷಿಸಬಹುದು. ಆದರೆ ಕಾವ್ಯದಲ್ಲಿ ಉಪಯೋಗವಾಗುವ ಭಾಷೆಯ ರೀತಿ ಬೇರೇನೆ. ಇಲ್ಲಿನ ಅರ್ಥ ಆಂತರಿಕ ಜಗತ್ತಿಗೆ ಸಂಬಂಧಿಸಿದುದು. ಇಂಥ ಆಂತರಿಕ ಜಗತ್ತು ಹೊರಜಗತ್ತಿನಿಂದ ಪೂರ್ತಿಯಾಗಿ ಕಳಚಿಕೊಂಡಾಗ ಮಾತ್ರ ಕವಿಯ ಭಾಷೆ ಪೂರ್ತಿ ಅಸಂಬದ್ಧವಾಗಿ ನಮಗೆ ತೋರಬಹುದು. ಬೆಕೆಟ್‌ನ ವೈಟಿಂಗ್ ಫಾರ್ ಗಾಡೋ ಎಂಬ ನಾಟಕದಲ್ಲಿ ಮೂಕವಾಗಿದ್ದ ಪಾತ್ರವೊಂದು ಬಡಬಡಿಸತೊಡಗುತ್ತದೆ. ಒಂದು ವಾಕ್ಯ ಎಲ್ಲಿ ಮುಗಿಯುತ್ತೆ ಇನ್ನೊಂದು ಎಲ್ಲಿ ಆರಂಭವಾಗತ್ತೆ, ಒಟ್ಟಾರೆ ಈ ಮನುಷ್ಯ ಏನು ಹೇಳ್ತಾನೆ ಅನ್ನೋದೇ ಗೊತ್ತಾಗಲ್ಲ. ಇಲ್ಲಿನ ಅರ್ಥಕ್ಕಿಂತ ಧ್ವನಿಯೇ ಮುಖ್ಯ. ಕವಿಗಳನ್ನೂ, ಹುಚ್ಚರನ್ನೂ, ಪ್ರಣಯಿಗಳನ್ನೂ ಶೇಕ್ಸ್‌ಪಿಯರ್ ಒಂದೇ ಸಾಲಿನಲ್ಲಿ ನಿಲ್ಲಿಸ್ತಾನೆ.

ಕಾವ್ಯಭಾಷೆಯಲ್ಲಿ ದಿಕ್ಚ್ಯುತಿಯೇ ಮುಖ್ಯ ಅನ್ನುತ್ತಾನೆ ಪಾರ್ವಲೇರಿ. ದಿಕ್ಚ್ಯುತಿ ಅಥವಾ ಮಾರ್ಗಾಂತರದ ಮೂಲಕವೇ ಕವಿ ತನ್ನ ಕಾಣ್ಕೆಯೇನಿದೆಯೋ ಅದರ ದರ್ಶನ ನಮಗೆ ಮಾಡಿಸುವುದು ಸಾಧ್ಯ. ಆದರೆ ದಿಕ್ಚ್ಯುತಿ ಮಾಡೋದಕ್ಕಾದರೂ ಒಂದು ದಿಕ್ಕಿನ ಕಲ್ಪನೆ ಬೇಕು ತಾನೆ? ಸಾರ್ವಜನಿಕ ಭಾಷೆಯೆಂದರೆ ಇಂಥ ದಿಕ್ಕುಗಳ ಕಲ್ಪನೆ. ಇವುಗಳ ಉಲ್ಲಂಘನದಲ್ಲಿ ನಾವು ಕಾಣೋದು ಕವಿಗಳ ವೈಯಕ್ತಿಕ ಪ್ರತಿಭೆ, ಶೈಲಿಯನ್ನ. ಒಂದೇ ರೀತಿಯ ವಾರ್ಧಕ ಷಟ್ಪದೀನ ಲಕ್ಷ್ಮೀಶ, ರಾಘವಾಂಕರು ಬೇರೆ ಬೇರೆ ಶೈಲಿಯಲ್ಲಿ ನಡೆಸ್ತಾರೆ. ಲಕ್ಷ್ಮೀಶನ ಮಾಧುರ್ಯ ರಾಘವಾಂಕನಲ್ಲಿಲ್ಲ. ರಾಘವಾಂಕನ ಗಡಸುತನ ಲಕ್ಷ್ಮೀಶನಲ್ಲಿಲ್ಲ. ಆದರೆ ಸಾರ್ವಜನಿಕ ಭಾಷೆಯ ಉಪಯೋಗದಲ್ಲಿ ನಾವಿದನ್ನೇನೂ ಹುಡುಕೋದಿಲ್ಲ. ಅಲ್ಲಿ ಭಾಷೆಗೆ ಒಂದು ಉದ್ದೇಶ ಇರತ್ತೆ. ಆ ಉದ್ದೇಶ ಪೂರ್ತಿಯಾದರೆ ಭಾಷೆ ಸಫಲವಾದ ಹಾಗೆ. ಅಂಥ ಕಡೆ ಒಂದು ರೀತಿಯ ಸಾರ್ವತ್ರಿಕತೆ, ಎಲ್ಲರಿಗೂ ಅರ್ಥವಾಗೋ ಗುಣ ಮುಖ್ಯವೇ ಹೊರತು ವೈಯಕ್ತಿಕ ಪ್ರತಿಭೆಯಲ್ಲ. ಆದ್ದರಿಂದ್ಲೇ ಸಾರ್ವಜನಿಕ ಭಾಷೆ ಕೆಲವೊಂದು ನಿಯಮಗಳ ಪರಿಪಾಲನೆ ಮಾಡಬೇಕಾದ್ದು ಮುಖ್ಯವಾಗತ್ತೆ. ಈ ನಿಯಮಗಳನ್ನ ಮುರಿದರೆ ಅದಕ್ಕೆ ಸಾಮಾಜಿಕವಾದ ಕಾರಣಗಳು ಬೇಕು. ಈ ಕಾರಣಗಳು, ಇವು ಉಂಟು ಮಾಡುವ ಪರಿಣಾಮಗಳು ನಮಗೆಲ್ಲ ಗೊತ್ತಿರ್ತವೆ. ಉದಾಹರಣೆಗೆ, ಹಂಗಿಸೋದು ವ್ಯಂಗ್ಯವಾಗಿ ಮಾತಾಡೋದು, ಹೀಗೆ. ಅಂದ್ರೆ ಇವೂ ಕೂಡ ಸೂತ್ರಬದ್ಧವಾಗಿ ನಡೆಯೋ ಸಂಗತಿಗಳು. ಆದ್ರಿಂದಲೆ, ಸಾರ್ವಜನಿಕ ಭಾಷೇನ ನಮಗೆ ಇಷ್ಟಬಂದಂತೆ ಬದಲಿಸಲಾರೆವು. ಅದು ಬದಲಾಗೋದು ಸಮೂಹದ ಒಟ್ಟಾರೆ ಅಗತ್ಯಗಳಿಗೆ ತಕ್ಕಂತೆ, ಒಟ್ಟಾರೆ ಒಲವುಗಳನ್ನು ಹೊಂದಿಕೊಂಡು.

ಭಾಷೆಯ ಸಾರ್ವಜನಿಕ ಉಪಯೋಗವೇ ಬೇರೆ. ಕಾವ್ಯದಲ್ಲಿ ಅದರ ಉಪಯೋಗವೇ ಬೇರೆ ಎಂದು ನೋಡಿದೆವು. ಅಂದರೆ ಸಾರ್ವಜನಿಕವಾಗಿ ಭಾಷೆ ಅನ್ನೋದು ಬರೀ ಒಂದು ಸಾಧನವೆ, ಉಪಕರಣವೇ? ಅದು ಕೇವಲ ಉಪಕರಣವಾದರೆ ಅದರ ಬಗ್ಗೆ ನಮಗಿರೋ ಭಾವನಾತ್ಮಕ ಸಂಬಂಧವನ್ನ ವಿವರಿಸೋದು ಹೇಗೆ? ಕೇವಲ ಉಪಕರಣ ಮಾತ್ರವಾದರೆ, ಒಂದನ್ನ ಬಿಟ್ಟು ಇನ್ನೊಂದನ್ನ ಯಾವ ಮಾನಸಿಕ ಯಾತನೆಯೂ ಇಲ್ಲದೆ ನಾವು ಸ್ವೀಕರಿಸೋದು ಸಾಧ್ಯ. ಆದರೆ ಭಾಷೆಯ ಸಂಗತಿ ಹಾಗಲ್ಲ. ಮನುಷ್ಯ ಯಾಂತ್ರಿಕವಾಗಿ ಬಾಳಲಾರ. ವಿಶ್ವಕನ್ನಡ ಸಮ್ಮೇಳನದ ಉದ್ಘಾಟನಾ ಭಾಷಣ ಮಾಡ್ತ ಶಿವರಾಮ ಕಾರಂತರು ಜ್ಞಾನದ ಹಸಿವಿನ ಬಗೆ ಮಾತಾಡಿದ್ರು. ಜ್ಞಾನದ ಹಸಿವಿನಂತೆಯೆ, ಭಾವನೆಯ ಹಸಿವೂ ಇದೆ. ಮನುಷ್ಯನಿಗೆ ಪ್ರೀತಿಬೇಕು, ಪ್ರೀತಿಸೋದಕ್ಕೆ ಮುದಿಬೇಕು. ದಯೆ, ಅನುಕಂಪ ಎಲ್ಲವೂ ಬೇಕು. ತಾಯಿಯಿಲ್ಲದ ತಬ್ಬಲಿಗಳು ತಾಯಿಯ ಪ್ರೀತಿಯ ಹಸಿವಿನಿಂದ ನರಳುತ್ತಾರೆ.

ಸಮೀಪನವಾಗಿಬಿಡತ್ತೆ. ಭಾಷೆಯ ಕುರಿತು ನಾವು ಏನು ನಿರ್ಣಯ ತೆಗೆದುಕೊಂಡರೂ ಅದು ಆ ಭಾಷೆಯನ್ನಾಡುವ ಜನರ ಜೀವನದ ಮೇಲೆ ಪರಿಣಾಮ ಬೀರುತ್ತೆ. ಆದ್ರೆ ಕೇವಲ ಒಂದು ಅಕಾಡೆಮಿ ಅಥವಾ ಸರಕಾರ ಇಂಥ ನಿರ್ಣಯಗಳನ್ನು ತೆಗೆದುಕೊಂಡರೆ ಸಾಕಾಗೋದಿಲ್ಲ. ಜನ ಅದನ್ನ ಒಪ್ಪಬೇಕು.

ಇದು ಯಾಕೆ ಹೀಗೆ ಎಂಬುದಕ್ಕೆ ಉತ್ತರ ಸ್ಪಷ್ಟವಾಗಿಯೇ ಇದೆ. ಭಾಷೆಯೆನ್ನೋದು ಸಾರ್ವಜನಿಕ ಸೊತ್ತು. ಮನುಷ್ಯ ಯಾವುದಾದರೂ ಒಂದನ್ನ ಬೇರೆಯವರ ಜತೆ ಹಂಚಿಕೊಳ್ಳಲೇಬೇಕಾದ್ದಿದ್ದರೆ ಅದು ಭಾಷೆ ಎಂಬುದನ್ನ ಮರೀಬಾರ್ದು. ಒಬ್ಬನನ್ನು ಬಿಟ್ಟು ಇಬ್ಬರು ಸೇರಿದಾಗ ಮಾತ್ರವೆ ಭಾಷೆ ಅಗತ್ಯವಾಗೋದು. ಆದ್ದರಿಂದಲೇ ಭಾಷೆಯ ಉಪಯೋಗ ಸಾರ್ವಜನಿಕ ಜೀವನಕ್ಕೆ ಸ್ಪಂದಿಸುವಂಥ ಸಂಗತಿ. ನಾವು ಹತ್ತು ಜನ ಸೇರಿ, ಕನ್ನಡವನ್ನ ಇನ್ನು ಮುಂದೆ ಹೀಗೆ ಬಳಸ್ತೀವಿ ಅಂತ ಒಂದು ತೀರ್ಮಾನಕ್ಕೆ ಬಂದರೆ ಆಗ್ಲಿಲ್ಲ. ಈ ತೀರ್ಮಾನ ಚಾಲ್ತಿಗೆ ಬರಬೇಕು—ಎಂದರೆ, ಇದನ್ನ ಒಪ್ಪಿಕೊಳ್ಳಬೇಕು, ಅಳವಡಿಸಿಕೊಳ್ಳಬೇಕು, ಸಾರ್ವಜನಿಕ ಭಾಷೆಗೂ ಸಾಹಿತ್ಯ—ಮುಖ್ಯವಾಗಿ ಕಾವ್ಯ—ಭಾಷೆಗೂ ಇರೋ ವ್ಯತ್ಯಾಸ ನೋಡಿದರೆ ಕಾವ್ಯಭಾಷೆ ಯಾಕೆ ಹೆಚ್ಚೆಚ್ಚು ಖಾಸಗಿಯಾಗಿದೆ ಎಂಬುದು ಗೊತ್ತಾಗುತ್ತೆ. ಕಾವ್ಯಭಾಷೆಯಲ್ಲಿ ಜನಪದವೊಂದೇ ಸಾರ್ವಜನಿಕವಾದ್ದು. ಬೇಂದ್ರೆ, ಕುವೆಂಪು, ಅಡಿಗ, ಶಿವರುದ್ರಪ್ಪ ಇವರೆಲ್ಲರೂ ಕಾವ್ಯದಲ್ಲಿ ಭಾಷೇನ ಖಾಸಗಿಯಾಗಿ ಉಪಯೋಗಿಸ್ತಾರೆ. ಅವರೇನು ಹೇಳ್ತಾರೆಂದು ನಮಗೆ ಸುಲಭವಾಗಿ ಗೊತ್ತಾಗಲ್ಲ ; ಹೀಗೆ ಸುಲಭದಲ್ಲಿ ಗೊತ್ತುಮಾಡೋದು ಅವರ ಉದ್ದೇಶಾನೂ ಅಲ್ಲ. ಕಾವ್ಯಭಾಷೆ ಖಾಸಗಿಯಾಗ್ತ ಆಗ್ತ ಅದು ಕವಿಯ ಒಳಜಗತ್ತಿಗೆ ನಮ್ಮನ್ನ ಒಯ್ದುಬಿಡತ್ತೆ. ಈ ಒಳಜಗತ್ತು ಪೂರ್ತಿಯಾಗಿ ನಮ್ಮ ಅರಿವಿಗೆ ಸಿಗತ್ತೆ ಅಂತ ಅನ್ನೋದಕ್ಕಾಗಲ್ಲ. ಸಾರ್ವಜನಿಕ ಭಾಷೆಯಲ್ಲಿ ಶಬ್ದಗಳಿಗೆ, ಶಬ್ದಗಳಿಂದಾಗುವ ವಾಕ್ಯಗಳಿಗೆ ಅರ್ಥವಿರತ್ತದೆ—ಈ ಅರ್ಥವೇನೆಂದು ಎಲ್ಲರಿಗೂ ತಿಳಿದಿರತ್ತೆ. ಯಾಕೆಂದರೆ ಭಾಷೆಗೂ ಹೊರಗಿನ ಜಗತ್ತಿಗೂ ಇರೋ ಸಂಬಂಧ ಸ್ಪಷ್ಟವಾದ್ದು. ಮಳೆ ಬರ್ತಾ ಇದೆ ಎಂದು ಯಾರಾದ್ರೂ ಹೇಳಿದ್ರೆ ಅದು ಸತ್ಯವೋ ಸುಳ್ಳೋ ಎಂದು ಪರೀಕ್ಷಿಸಬಹುದು. ಆದರೆ ಕಾವ್ಯದಲ್ಲಿ ಉಪಯೋಗವಾಗುವ ಭಾಷೆಯ ರೀತಿ ಬೇರೇನೆ. ಇಲ್ಲಿನ ಅರ್ಥ ಆಂತರಿಕ ಜಗತ್ತಿಗೆ ಸಂಬಂಧಿಸಿದುದು. ಇಂಥ ಆಂತರಿಕ ಜಗತ್ತು ಹೊರಜಗತ್ತಿನಿಂದ ಪೂರ್ತಿಯಾಗಿ ಕಳಚಿಕೊಂಡಾಗ ಮಾತ್ರ ಕವಿಯ ಭಾಷೆ ಪೂರ್ತಿ ಅಸಂಬದ್ಧವಾಗಿ ನಮಗೆ ತೋರಬಹುದು. ಬೆಕೆಟ್‌ನ ವೈಟಿಂಗ್ ಫಾರ್ ಗಾಡೋ ಎಂಬ ನಾಟಕದಲ್ಲಿ ಮೂಕವಾಗಿದ್ದ ಪಾತ್ರವೊಂದು ಬಡಬಡಿಸತೊಡಗುತ್ತದೆ. ಒಂದು ವಾಕ್ಯ ಎಲ್ಲಿ ಮುಗಿಯುತ್ತೆ ಇನ್ನೊಂದು ಎಲ್ಲಿ ಆರಂಭವಾಗತ್ತೆ, ಒಟ್ಟಾರೆ ಈ ಮನುಷ್ಯ ಏನು ಹೇಳ್ತಾನೆ ಅನ್ನೋದೇ ಗೊತ್ತಾಗಲ್ಲ. ಇಲ್ಲಿನ ಅರ್ಥಕ್ಕಿಂತ ಧ್ವನಿಯೇ ಮುಖ್ಯ. ಕವಿಗಳನ್ನೂ, ಹುಚ್ಚರನ್ನೂ, ಪ್ರಣಯಿಗಳನ್ನೂ ಶೇಕ್ಸ್‌ಪಿಯರ್ ಒಂದೇ ಸಾಲಿನಲ್ಲಿ ನಿಲ್ಲಿಸ್ತಾನೆ.

ಕಾವ್ಯಭಾಷೆಯಲ್ಲಿ ದಿಕ್ಚ್ಯುತಿಯೇ ಮುಖ್ಯ ಅನ್ನುತ್ತಾನೆ ಪಾಲ್‌ವಲೇರಿ. ದಿಕ್ಚ್ಯುತಿ ಅಥವಾ ಮಾರ್ಗಾಂತರದ ಮೂಲಕವೇ ಕವಿ ತನ್ನ ಕಾಣ್ಕೆಯೇನಿದೆಯೋ ಅದರ ದರ್ಶನ ನಮಗೆ ಮಾಡಿಸುವುದು ಸಾಧ್ಯ. ಆದರೆ ದಿಕ್ಚ್ಯುತಿ ಮಾಡೋದಕ್ಕಾದರೂ ಒಂದು ದಿಕ್ಕಿನ ಕಲ್ಪನೆ ಬೇಕು ತಾನೆ? ಸಾರ್ವಜನಿಕ ಭಾಷೆಯೆಂದರೆ ಇಂಥ ದಿಕ್ಕುಗಳ ಕಲ್ಪನೆ. ಇವುಗಳ ಉಲ್ಲಂಘನದಲ್ಲಿ ನಾವು ಕಾಣೋದು ಕವಿಗಳ ವೈಯಕ್ತಿಕ ಪ್ರತಿಭೆ, ಶೈಲಿಯನ್ನ. ಒಂದೇ ರೀತಿಯ ವಾರ್ಧಕ ಷಟ್ಪದೀನ ಲಕ್ಷ್ಮೀಶ, ರಾಘವಾಂಕರು ಬೇರೆ ಬೇರೆ ಶೈಲಿಯಲ್ಲಿ ನಡೆಸ್ತಾರೆ. ಲಕ್ಷ್ಮೀಶನ ಮಾಧುರ್ಯ ರಾಘವಾಂಕನಲ್ಲಿಲ್ಲ. ರಾಘವಾಂಕನ ಗಡಸುತನ ಲಕ್ಷ್ಮೀಶನಲ್ಲಿಲ್ಲ. ಆದರೆ ಸಾರ್ವಜನಿಕ ಭಾಷೆಯ ಉಪಯೋಗದಲ್ಲಿ ನಾವಿದನ್ನೇನೂ ಹುಡುಕೋದಿಲ್ಲ. ಅಲ್ಲಿ ಭಾಷೆಗೆ ಒಂದು ಉದ್ದೇಶ ಇರತ್ತೆ. ಆ ಉದ್ದೇಶ ಪೂರ್ತಿಯಾದರೆ ಭಾಷೆ ಸಫಲವಾದ ಹಾಗೆ. ಅಂಥ ಕಡೆ ಒಂದು ರೀತಿಯ ಸಾರ್ವತ್ರಿಕತೆ, ಎಲ್ಲರಿಗೂ ಅರ್ಥವಾಗೋ ಗುಣ ಮುಖ್ಯವೇ ಹೊರತು ವೈಯಕ್ತಿಕ ಪ್ರತಿಭೆಯಲ್ಲ. ಆದ್ದರಿಂದ್ಲೇ ಸಾರ್ವಜನಿಕ ಭಾಷೆ ಕೆಲವೊಂದು ನಿಯಮಗಳ ಪರಿಪಾಲನೆ ಮಾಡಬೇಕಾದ್ದು ಮುಖ್ಯವಾಗತ್ತೆ. ಈ ನಿಯಮಗಳನ್ನ ಮುರಿದರೆ ಅದಕ್ಕೆ ಸಾಮಾಜಿಕವಾದ ಕಾರಣಗಳು ಬೇಕು. ಈ ಕಾರಣಗಳು, ಇವು ಉಂಟು ಮಾಡುವ ಪರಿಣಾಮಗಳು ನಮಗೆಲ್ಲ ಗೊತ್ತಿರ್ತವೆ. ಉದಾಹರಣೆಗೆ, ಹಂಗಿಸೋದು ವ್ಯಂಗ್ಯವಾಗಿ ಮಾತಾಡೋದು, ಹೀಗೆ. ಅಂದ್ರೆ ಇವೂ ಕೂಡ ಸೂತ್ರಬದ್ಧವಾಗಿ ನಡೆಯೋ ಸಂಗತಿಗಳು. ಆದ್ರಿಂದಲೆ, ಸಾರ್ವಜನಿಕ ಭಾಷೇನ ನಮಗೆ ಇಷ್ಟಬಂದಂತೆ ಬದಲಿಸಲಾರೆವು. ಅದು ಬದಲಾಗೋದು ಸಮೂಹದ ಒಟ್ಟಾರೆ ಅಗತ್ಯಗಳಿಗೆ ತಕ್ಕಂತೆ, ಒಟ್ಟಾರೆ ಒಲವುಗಳನ್ನು ಹೊಂದಿಕೊಂಡು.

ಭಾಷೆಯ ಸಾರ್ವಜನಿಕ ಉಪಯೋಗವೇ ಬೇರೆ. ಕಾವ್ಯದಲ್ಲಿ ಅದರ ಉಪಯೋಗವೇ ಬೇರೆ ಎಂದು ನೋಡಿದೆವು. ಅಂದರೆ ಸಾರ್ವಜನಿಕವಾಗಿ ಭಾಷೆ ಅನ್ನೋದು ಬರೀ ಒಂದು ಸಾಧನವೆ, ಉಪಕರಣವೇ? ಅದು ಕೇವಲ ಉಪಕರಣವಾದರೆ ಅದರ ಬಗ್ಗೆ ನಮಗಿರೋ ಭಾವನಾತ್ಮಕ ಸಂಬಂಧವನ್ನ ವಿವರಿಸೋದು ಹೇಗೆ? ಕೇವಲ ಉಪಕರಣ ಮಾತ್ರವಾದರೆ, ಒಂದನ್ನ ಬಿಟ್ಟು ಇನ್ನೊಂದನ್ನ ಯಾವ ಮಾನಸಿಕ ಯಾತನೆಯೂ ಇಲ್ಲದ ನಾವು ಸ್ವೀಕರಿಸೋದು ಸಾಧ್ಯ. ಆದರೆ ಭಾಷೆಯ ಸಂಗತಿ ಹಾಗಲ್ಲ. ಮನುಷ್ಯ ಯಾಂತ್ರಿಕವಾಗಿ ಬಾಳಲಾರ. ವಿಶ್ವಕನ್ನಡ ಸಮ್ಮೇಳನದ ಉದ್ಘಾಟನಾ ಭಾಷಣ ಮಾಡ್ತ ಶಿವರಾಮ ಕಾರಂತರು ಜ್ಞಾನದ ಹಸಿವಿನ ಬಗೆ ಮಾತಾಡಿದ್ರು. ಜ್ಞಾನದ ಹಸಿವಿನಂತೆಯೆ, ಭಾವನೆಯ ಹಸಿವೂ ಇದೆ. ಮನುಷ್ಯನಿಗೆ ಪ್ರೀತಿಬೇಕು, ಪ್ರೀತಿಸೋದಕ್ಕೆ ಮನಿಬೇಕು. ದಯೆ, ಅನುಕಂಪ ಎಲ್ಲವೂ ಬೇಕು. ತಾಯಿಯಿಲ್ಲದ ತಬ್ಬಲಿಗಳು ತಾಯಿಯ ಪ್ರೀತಿಯ ಹಸಿವಿನಿಂದ ನರಳುತ್ತಾರೆ.

ಅನಾಥಾಶ್ರಮದಲ್ಲಿ ಹೊಟ್ಟೆಗೆ ಕಾಲಕಾಲಕ್ಕೆ ಅನ್ನ ಸಿಗಬಹುದು; ಆದರೆ ಪ್ರೀತಿಯ ಹಸಿವು ಅನ್ನದಿಂದ ತೃಪ್ತವಾಗೋದಿಲ್ಲ. ಅದೇ ರೀತಿ ಮನುಷ್ಯನಿಗೆ ಸಮೂಹದೊಂದಿಗೆ ಗುರ್ತುಪಡೆಯುವ ಅಗತ್ಯ. ಮತ ಧರ್ಮಗಳು ಹುಟ್ಟಿಕೊಂಡುದು ಇಂಥ ಅಗತ್ಯದಿಂದ ಇದ್ದರೂ ಇರಬಹುದು. ನನ್ನ ಪಾಕಿಸ್ತಾನೀ ಮಿತ್ರನೊಬ್ಬ ಒಮ್ಮೆ ನನ್ನಲ್ಲಿ ಹೇಳಿದ–ನಾನು ಮೆಕ್ಕಾಗೆ ಹೋಗಿ ಅಲ್ಲಿ ಸಹಸ್ರ ಸಹಸ್ರ ಮಂದಿಯ ಜತೆ ನಮಾಜು ಮಾಡ್ದೆ ನಾನೆಷ್ಟೋ ಭಾಗ್ಯಶಾಲಿ ಎನಿಸಿತು, ಹಾಗಂತ. ಈ ನನ್ನ ಮಿತ್ರ ಅವಿದ್ಯಾವಂತನೇನಲ್ಲ. ಭೌತಶಾಸ್ತ್ರ ಕಲಿಸುವ ಕಾಲೇಜು ಅಧ್ಯಾಪಕ; ಅನೇಕ ದೇಶಗಳನ್ನ ಸುತ್ತಿದೋನು. ಸಹಸ್ರಾರು ಮಂದಿ ಒಂದೆಡೆ ಸೇರಿ ಮಂಡಿಯೂರಿ ಪ್ರಾರ್ಥನೆ ಮಾಡೋ ದೃಶ್ಯ ಅವನಿಗೆ ರೋಮಾಂಚಕಾರಿ ಅನುಭವ ಒದಗಿಸಿತು; ಈ ಸಹಸ್ರ ಸಹಸ್ರ ಮಂದಿಯ ಧರ್ಮಕ್ಕೆ ತಾನೂ ಸೇರಿದವನು ಎಂಬ ಕಾರಣದಿಂದ ಅವನಲ್ಲಿ ಧನ್ಯತಾಭಾವ ಮೂಡಿತು. ಈ ಅವನ ಅನುಭವದ ಸತ್ಯವನ್ನು ಅಲ್ಲಗಳೆಯಲು ನಾನು ಯಾರು? ಹೀಗೆ ಭಕ್ತಿ, ಧರ್ಮ, ಮತ ಕೂಡ ಒಂದು ಹಸಿವಾಗಿ ಅದರ ಬೆನ್ನು ಹತ್ತಿ ಹೊರಟವರಿಗೆ ನಮ್ಮ ದೇಶದಲ್ಲಿ ಕೊರತೆಯಿಲ್ಲ. ಭಾಷೆ ಕೂಡ ಇಂಥದೇ ಒಂದು ಭಾವನಾತ್ಮಕ ಅಗತ್ಯ--ಅದು ಕೇವಲ ಉಪಕರಣವಲ್ಲ. ಒಂದನೆ ಮಹಾಯುದ್ಧದಲ್ಲಿ ಭಾಗವಹಿಸಿದ ಇಂಗ್ಲೀಷ್ ಕವಿ ವಿಲ್‌ಫ್ರೆಡ್ ಓವೆನ್‌ನ್ನ ಯಾಕಾಗಿ ಯುದ್ಧಕ್ಕೆ ಸೇರಿದೀಯಾ ಎಂದು ಪ್ರಶ್ನಿಸಿದಾಗ ಆತ "ಇಂಗ್ಲೀಷ್ ಭಾಷೆಗಾಗಿ" ಎಂದು ಉತ್ತರಿಸಿದ. ಇಂಥ ಸತ್ಯಗಳನ್ನ ತಿರಸ್ಕರಿಸೋದು ಹೇಗೆ?

ಶ್ರೇಷ್ಠವಾದ ಸಾಹಿತ್ಯವಾದ್ರೂ ಲೇಖಕನ ತಾಯ್ನುಡಿಯಲ್ಲಿ ಅಥವಾ ಆತ ಭಾವನಾತ್ಮಕವಾಗಿ ತನ್ನದಾಗಿ ಮಾಡಿಕೊಂಡ ನುಡಿಯಲ್ಲಿ ಮಾತ್ರವೇ ಸಾಧ್ಯ. ಶ್ರೇಷ್ಠ ಸಾಹಿತ್ಯ ಯಾಕೆ ಲೇಖನ ತಾಯ್ನಾಡಿನಲ್ಲಿ ಮಾತ್ರ ಸಾಧ್ಯ ಎಂಬ ಬಗ್ಗೆ ಯೋಚಿಸ್ಬೇಕು. ಇದು ಕೇವಲ ಭಾಷಾಪಾಂಡಿತ್ಯದ ಸಂಗತಿಯಲ್ಲ. ಭಾಷೇನ ಪ್ರಯತ್ನ ಪಟ್ಟರೆ ಕಲಿತು ಕರಗತ ಮಾಡಿಕೊಳ್ಳೋದು ದೊಡ್ಡದಲ್ಲ. ವ್ಯಾಕರಣ ನಿಯಮಗಳು ಹೇಳದಂಥ ಸ್ತರಗಳು, ಕಂಪನಗಳು ಇರುತ್ತವೆ. ಸಾಹಿತ್ಯಕ್ಕೆ, ಅದರಲ್ಲೂ ಕಾವ್ಯಕ್ಕೆ ಈ ಸ್ತರಗಳು ಮುಖ್ಯವಾಗ್ತವೆ. ಯಾಕಂದ್ರೆ ಕಾವ್ಯ ನಿರ್ಮಿಸುವ ಆಂತರಿಕ ಜಗತ್ತು ಇಂಥದ್ದು. ಆದ್ದರಿಂದಲೇ ನೀವು ಇನ್ನೊಂದು ಭಾಷೆಯಲ್ಲಿ ಬೇಕಾದ್ರೆ ಪ್ರಬಂಧ ಬರೀಬಹುದು, ಬಹುಶಃ ಕತೆ, ಕಾದಂಬರಿ ಪದ್ಯಗಳನ್ನೂ ಬರೀಬಹುದು. ಆದ್ರೆ ಒಂದು ಮಹಾಕಾವ್ಯ ಬರೀಲಾರಿರಿ, ಒಳ್ಳೇ ಭಾವಗೀತೆಗಳನ್ನ ಬರೀಲಾರಿರಿ. ಯಾಕೆಂದ್ರೆ ಮಹಾಕಾವ್ಯಕ್ಕೆ ಬೇಕಾದ ಶೈಲಿಯ ಹರವನ್ನ ಎರಡನೇ ಭಾಷೆ ಕೊಡಲಾರದು; ಅದೇ ರೀತಿ, ಭಾವಗೀತೆಗೆ ಬೇಕಾದ ಭಾವನಾತ್ಮಕತೆಯನ್ನ ಕೂಡ ಎರಡನೆ ಭಾಷೆ ಒದಗಿಸಲಾರದ್ದು. ಮಾತೃಭಾಷೆಯಲ್ಲೆ ನಾವು ನಮ್ಮ ನಮ್ಮ ಮೋಕ್ಷವನ್ನ ಗಳಿಸಿಕೊಳ್ಳಬೇಕು. ಹೀಗೆಂದಾಗ ಮಾತೃಭಾಷೆ ಕನ್ನಡವಲ್ಲದ ಬೇಂದ್ರೆ, ಮಾಸ್ತಿಯವರಂಥವರ

ಮಹಾಸಾಧನೆಗಳು ನಮಗೆ ನೆನಪಾಗದೆ ಇರಲ್ಲ. ಆದ್ರೆ ಬೇಂದ್ರೆ ಮಾಸ್ತಿಯವರಿಗೆ ಕನ್ನಡ ಮಾತೃಭಾಷೆ ಅಲ್ದೆ ಇದ್ರೂ, ಮಾತೃಭಾಷೆಗಿಂತ ಭಾವನಾತ್ಮಕವಾಗಿ ಅದು ಹತ್ತಿರವಾಗಿತ್ತು ಎಂಬುದನ್ನ ಮರೀಬಾರ್ದು.

ಒಂದೆಡೆ ಭಾಷೆ ಯಾವ ನಿಯಂತ್ರಣಕ್ಕೂ ಒಳಗಾಗ್ದೆ ತನ್ನದೇ ಗತಿಯಲ್ಲಿ ಸಾಗುವ ಸಂಗತಿ-- ಇನ್ನೊಂದೆಡೆ ಅದು ನಮ್ಮ ಪ್ರೀತಿಯ ಆತಂಕದ ವಾಹಕವೂ. ಹೌದು, ಈ ಎರಡನೆಯದೇ ನಮ್ಮ ಕನ್ನಡತನ ವಸ್ತುನಿಷ್ಠವಾಗಿ ಕನ್ನಡವೆನ್ನೋದು ಇತರ ಅನೇಕ ಭಾಷೆಗಳಂತೆ ಒಂದುಭಾಷೆ; ಆದ್ರೆಕನ್ನಡಿಗರಾದ ನಮಗೆಅದು ಕೇವಲ ಭಾಷೆಯಲ್ಲ; ಭಾಷೆ ಗಿಂತಲೂ ಹತ್ತಿರವಾದ ಒಂದು ಭಾವನಾತ್ಮಕ ಸಂಗತಿ. ಈದ್ವಂದ್ವದಿಂದ ನಮಗೆ ಮುಕ್ತಿ ಯಿಲ್ಲ ಯಾರಿಗೂ ಇಲ್ಲ. ಇಂಥ ದ್ವಂದ್ವಗಳನ್ನ ನಿರಾಕರಿಸುವುದು ತೀರ ಅಪ್ರಾಮಾಣಿಕವಾಗು ತ್ತದೆ. ದ್ವಂದ್ವ, ವಿರೋಧಭಾಸ, ತಳಮಳಗಳನ್ನ ಸಹಿಸಿಕೊಳ್ಳಲಾರದ ಮನಸ್ಸು ಅತ್ಯಂತ ದುರ್ಬಲವೂ ನಿಸ್ಸಾರವೂ ಆದ್ದು. ಮನುಷ್ಯ ಸಮಾಜಗಳ ಸ್ಥಿತಿಗಳನ್ನ ಪರಿಶೀಲಿಸಿ ನೋಡಿದರೆ, ಎಲ್ಲ ಕಾಲದಲ್ಲೂ ಇಂಥ ದ್ವಂದ್ವಗಳನ್ನ, ಅಸಂಬದ್ಧ ಸ್ಥಿತಿ ವಿಶೇಷಗಳನ್ನ ಕಾಣ್ತೇವೆ. ಅಸಂಗತ ನಾಟಕ ಚಳುವಳಿಯ ಅಂತರ್ಯವೇ ಇಂಥ 'ಅಸಂಗತ'. ನಾವೆ ಲ್ಲಿಂದ ಬಂದಿದ್ದೀವಿ, ಎಲ್ಲಿ ಹೋಗ್ತ ಇದ್ದೀವಿ, ಏನು ಮಾಡ್ತ ಇದ್ದೀವಿ ಎಂದು ಮುಂತಾದ ಅಪ್ರಿಯ ಪ್ರಶ್ನೆಗಳನ್ನ ಈ ಸಾಹಿತ್ಯ ಚಳವಳಿ ಎತ್ತಿತ್ತು. ವ್ಯಕ್ತಿಗಳ ವಿಕ್ಷಿಪ್ತತೆಗೆ ಒತ್ತು ಕೊಟ್ಟಿತು. ಬೂತಗನ್ನಡಿಯಲ್ಲಿ ಮುಖ ನೋಡಿಕೊಂಡರೆ ವಿಕಾರವಾಗಿ ಕಾಣಿಸ್ತೆ. ಅಸಂಗತ ನಾಟಕಗಳೆಂದರೆ ಹಾಗೆ. ಆದ್ರೆ ಇಂಥ ಪ್ರಶ್ನೆಗಳನ್ನ ಎತ್ತೋದೇ ಒಂದು ದೊಡ್ಡ ಜೋಕಾದ್ರಿಂದ ಈ ನಾಟಕಗಳು ಜೋಕಿನ ನೆಲೆಯಲ್ಲೆ ನಿಂತುಬಿಟ್ಟವು. ಶೇಕ್ಸ್ ಪಿಯರ್ ಕೂಡ ತನ್ನ ನಾಟಕಗಳಲ್ಲಿ ಸಮಾನಾಂತರವಾಗಿ ಇಂಥ ಅಸಂಗತ ಸೆಳೆಗಳನ್ನ ತರ್ತಾನೆ. ಆದರೆ ಶೇಕ್ಸ್‌ಪಿಯರ್‌ನಲ್ಲಿ ಅಸಂಗತವೇ ನಾಟಕವಾಗೋದಿಲ್ಲ. ಹೀಗೆ ಅಸಂ ಗತವೇ ನಾಟಕವಾದಾಗ ಏನಾಗ್ತದೆ ಅಂದ್ರೆ, ಸರ್ಕಸ್ ಬಫೂನ ಎಷ್ಟೇ ಕೈಚಳಕ ತೋರಿಸಿದ್ರೂ ಆತ ಮರಣಕುಂಡದೊಳಗೆ ಮೋಟಾರ್ ಸೈಕಲ್ ಓಡಿಸಲಿ, ಆಕಾಶದಲ್ಲಿ ಜೋಕಾಲಿಯಾಡಲಿ, ಬೆಂಕಿವರ್ತುಲದೊಳಗಿಂದ ನೆಗೆಯಲಿ ಏನೆ ಮಾಡಿದ್ರೂ, ಆತ ಮಾಡಿದ್ದೆಲ್ಲ ಒಂದು ಜೋಕಾಗಿಬಿಡತ್ತೆ. ನಗಿಸೋದೇ ಬಫೂನನ ಉದ್ದೇಶ ಅಂತ ನಕ್ಕು ಬಿಡ್ತೇವೆ. ಅಂಥ ಮುಖವಾಡ ಬರಕೊಂಡಮೇಲೆ ಅತ ಆಟದ ಮಧ್ಯೆ ಅಕಸ್ಮಾತ್ ಸತ್ತೇಹೋದ್ರೂ ಅದು ಒಂದು ಜೋಕ್ ಅಂತ ಜನ ತಿಳ್ಕೊಂಡುಬಿಡ್ತಾರೆ. ಅಸಂಗತ ನಾಟಕಗಳ ಹಣೇಬರಹ ಈ ರೀತಿ ಆಯ್ತಾದ್ರಿಂದ ಅದರ ಗಂಭೀರವಾದ ಫಿಲಾಸಫೀನ ಯಾರೂ ಗಂಭೀರವಾಗಿ ಅರಗಿಸಿಕೊಳ್ಳಿಲ್ಲ. ಸಾಮಾನ್ಯ ಜನ ದ್ವಂದ್ವಗಳೆಂದರೆ, ಅಸಂ ಗತೆಯೆಂದರೆ, ಸಂದಿಗ್ಧತೆಯೆಂದರೆ ಅಯ್ಯೋ ಎಂದು ಬೊಬ್ಬಿಡುತ್ತಾರೆ. ಅವರಿಗೆ ಒಂದೋ ಅದು, ಇಲ್ಲಾ ಇದು ಎಂಬ, ಆರ್ಥರ್‌ಕೆಸ್ಲರ್ ಹೇಳುವ, ಇತ್ಯರ್ಥವಾದ (reduction-ism) ಸಂತೋಷ ಕೊಡತ್ತೆ. ರೋಗನಿಧಾನವನ್ನು ತಕ್ಷಣ ಮಾಡಿ ಔಷಧಿ ಕೊಡುವ

ವೈದ್ಯರಲ್ಲಿ ಜನರ ನಂಬಿಕೆ—ಏನೆಂದು ನೋಡೋಣ. ಸದ್ಯ ಅರ್ಥ ಆಗ್ತ ಇಲ್ಲ ಎಂದೇ ವಾದರೂ ವೈದ್ಯ ಹೇಳಿದರೆ ಆತನ ಬಗ್ಗೆ ಜನಕ್ಕೆ ಸಂದೇಹ ಉಂಟಾಗತ್ತೆ. ಆದರೆ ನಿಜವಾದ ಸಂಗತಿಗಳು ಇತ್ಯರ್ಥವಾದಕ್ಕೆ ಸಿಗಲ್ಲ-ಅವು ಬಹು ಸಂಕೀರ್ಣವಾಗಿರತ್ತೆ.

ಈಗ ಬಹುಮುಖಿಯಾದ ಸಂಸ್ಕೃತಿ ಬಗ್ಗೆ ನಾನು ಮಾತಾಡಿದೆ. ಏಕಮುಖಿಯಾದ ಸಂಸ್ಕೃತಿಗಿಂತ ಇದೇ ಸತ್ವಯುತವಾದ್ದು ಎಂದೆ. ವಾಸ್ತವದಲ್ಲಿ ಏಕಮುಖಿಯಾದ ಸಂಸ್ಕೃತಿ ಅನ್ನೋದೆ ಇಲ್ಲ. ಎಲ್ಲಾ ಸಂಸ್ಕೃತಿಗಳೂ ಆಂತರ್ಯದಲ್ಲಿ ಸಂಕೀರ್ಣವಾದುವು, ಸಂಕರ ಗೊಂಡವು. ಕೆಲವು ಹೆಚ್ಚು, ಇನ್ನು ಕೆಲವು ಕಡಿಮೆ ಎಂದಷ್ಟೆ ಹೇಳಬಹುದು. ಒಂದು ಸಮೂಹ ಹೊರಗಿನ ಎಲ್ಲಾ ಸಂಗತಿಗಳಿಗೆ ಪೂರ್ತಿಯಾಗಿ ಮುಚ್ಚಿಕೊಂಡರೆ ಮಾತ್ರ ಏಕ ಮುಖಿಯಾದ ಸಂಸ್ಕೃತಿಯೊಂದು ಇರೋದು ಸಾಧ್ಯ. ಕೆಲವು ಬುಡಕಟ್ಟುಗಳನ್ನು ಬಿಟ್ಟರೆ ಹೀಗೆ ಪೂರ್ತಿಯಾಗಿ ಮುಚ್ಚಿಕೊಂಡ ಸಮೂಹಗಳ, ಎಲ್ಲೂ ಕಾಣಸಿಗವು. ಈ ವಿಷಯ ವನ್ನು ಬದಿಗಿಟ್ಟು, ಸಂಸ್ಕೃತಿಗಳ ಮುಖಾಮುಖಿಯನ್ನ ನೋಡಿದರೆ ಅಲ್ಲಿ ಕೊಂಡುಕೊಡುವ ಕ್ರಿಯೆ ಕಾಣುತ್ತೇವೆ. ಒಂದು ಸಂಸ್ಕೃತಿ ಇನ್ನೊಂದು ಸಂಸ್ಕೃತಿಯಿಂದ ತುಸು ಜಾಸ್ತಿಯೆ ಪ್ರಭಾವಿತವಾಗಬಹುದು. ಸಂಸ್ಕೃತಿಗಳ ಘರ್ಷಣೆ ಎಲ್ಲಾ ಕಾಲದಲ್ಲೂ ನಡೆಯುವ ಸಂಗತಿ. ಆಗ ಒಂದು ಸಂಸ್ಕೃತಿ ತನ್ನತನವನ್ನ ಕಳೆದುಕೊಳ್ಳಬಹುದು-ಅಂದ್ರೆ ಸಂಕರಕ್ಕೂ ಒಂದು ಮಿಶ್ರಣ ಮಿತಿ ಇದೆ ; ಈ ಮಿತಿಯನ್ನ ಮೀರಿದರೆ ಅದು ತನ್ನ ಗುರುತು ಕಳಕೊಂಡು ಬಿಡ್ತದೆ. ಒಂದು ಸಂಸ್ಕೃತಿಯ 'ನಾಶ'ವೆಂದರೆ ಈ ಅರ್ಥದಲ್ಲಿ. ದಕ್ಷಿಣ - ಅಮೇರಿಕವನು ಸ್ಪಾನಿಶ್ ಮಂದಿ ಗೆದ್ದುಕೊಂಡಾಗ ಎರಡು ಸಂಸ್ಕೃತಿಗಳ ಘರ್ಷಣೆ ನಡೆಯಿತು-ಕೆಂಪು ಇಂಡಿ ಯನರ ಸಂಸ್ಕೃತಿಮತ್ತು ಯುರೋಪಿನ ಕ್ರಿಶ್ಚಿಯನ್ ಸಂಸ್ಕೃತಿಗಳ ನಡುವೆ. ಇದರ ರಾಜ ಕೀಯ ಮತ್ತು ಸಾಂಸ್ಕೃತಿಕ ತೀರ್ಮಾನಗಳು ಇಂದು ನಮಗೆಲ್ಲ ಗೊತ್ತಿರೋ ಸಂಗತಿ. ಕೆಂಪು ಇಂಡಿಯನರು ತಮ್ಮ ಸಂಸ್ಕೃತಿಯನ್ನ ನಿಧಾನವಾಗಿ ಕಳಕೊಂಡರು. ಅಷ್ಟರ ಮಟ್ಟಿಗೆ ಈ ಪ್ರಾಚೀನ ಸಂಸ್ಕೃತಿ ಯುರೋಪಿನ ಮೇಲೆ ಪರಿಣಾಮ ಬೀರಿಲ್ಲ. ಕೆಂಪು ಇಂಡಿಯನರ ಸಂಸ್ಕೃತಿ ಈ ಕಾರಣಕ್ಕೆ ಕೀಳೆಂದು ಹೇಳೋ ಹಾಗಿಲ್ಲ. ಆದರೆ ಸಂಸ್ಕೃತಿಯೆನ್ನೋದು ಹಲವು ಮೌಲ್ಯಗಳ, ಶಕ್ತಿಗಳ ಒಂದು ಚೇತನ. ಚರಿತ್ರೆಯ ಕೆಲವು ಕಾಲಘಟ್ಟಗಳು ಹೇಗಿರ್ತವೆ ಎನ್ನೋದಕ್ಕೆ ಸಾಧ್ಯವಿಲ್ಲ-ಹೇಗಿದ್ದರೂ ಯುರೋಪಿಯನರ ದಾಳಿಯನ್ನು ಕೆಂಪು ಇಂಡಿಯನರು ತಡಕೊಳ್ಳೋಕ್ಕೆ ಸಾಧ್ಯವಾಗಿಲ್ಲ. ಆದ್ರೆ ಯಾವುದೂ ಪೂರ್ತಿಯಾಗಿ ನಾಶವಾಗತ್ತೆ ಅನ್ನೊ ಹಾಗಿಲ್ಲ-ಕ್ರಿಶ್ಚಿಯನ್ ಧರ್ಮ ಕೂಡ ಎಲ್ಲ ದೇಶಗಳಲ್ಲೂ ಒಂದೇ ರೀತಿ ಇಲ್ಲ ; ಯುರೋಪಿನಲ್ಲಿ ಅದು ಒಂದು ರೀತಿ ಇದೆ; ದಕ್ಷಿಣ ಅಮೇರಿಕದಲಿ ಕೆಂಪು ಇಂಡಿಯನರ ಮಧ್ಯೆ, ಆಫ್ರಿಕಾದಲ್ಲಿ ಕಪ್ಪು ಜನರ ಮಧ್ಯೆ ಇನ್ನೊಂದು ರೀತಿಯಲ್ಲಿದೆ. ಇಸ್ಲಾಮು, ಬೌದ್ಧ ಧರ್ಮಗಳ ಮೇಲೆ ಕೂಡ ಆಯಾ ಪ್ರದೇಶದ ಸಂಸ್ಕಾರಗಳು ಪ್ರಭಾವ ಬೀರಿವೆ. ಇಂಗ್ಲೀಷರು ಭಾರತಕ್ಕೆ ಬಂದಾಗ ಏನಾಯಿತು ? ಭಾರತೀಯ ಸಂಸ್ಕೃತಿ

ಅಳಿದುಹೋಗಲಿಲ್ಲ; ಅದರ ತನ್ನತನ ಕರಗಲಿಲ್ಲ. ಆದರೆ ಅದು ಮತ್ತೆ ಮೊದಲಿನಂತೆ ಇರೋದು ಸಾಧ್ಯವಾಗಲಿಲ್ಲ. ಇದು ಕೇವಲ ಆಚಾರ ವಿಚಾರಗಳ ಪ್ರಶ್ನೆಯೊಂದೇ ಅಲ್ಲ. ರಾಜಕೀಯ ಮತ್ತು ಟೆಕ್ನಾಲಜಿಯ ಪ್ರಶ್ನೆ ಕೂಡ ಹೌದು. ಜಾಗತಿಕ ಆಗುಹೋಗುಗಳನ್ನ ಎದುರಿಸೋ ಪ್ರಶ್ನೆ ಕೂಡ ಹೌದು. ಇಂದು ಭಾರತೀಯ ಮನೆಗಳಲ್ಲಿ ದೇವರ ಸ್ಥಾನವನ್ನು ಟಿವಿ ಆಕ್ರಮಿಸತೊಡಗಿದೆ ಎಂದು ಅನಂತಮೂರ್ತಿ ಹೇಳುತ್ತಾರೆ. ಭಾರತೀಯ ಸಂಗೀತಕ್ಕಿಂತಲೂ ಪಾಶ್ಚಾತ್ಯ ಸಂಗೀತ ಯುವತಲೆಮಾರಿಗೆ ಆಕರ್ಷಕವಾಗಿ ಕಾಣಿಸುವ ಹಾಗಿದೆ. ಧೋತಿ, ಸೀರೆಗಳ ಬದಲಿಗೆ ಜೀನ್ಸ್ ಬಂದಿದೆ, ಸ್ಕರ್ಟ್ ಬಂದಿದೆ. ಅದೇ ರೀತಿ ಇಂಗ್ಲೀಷ್ ಭಾಷೆಯ ಉಪಯೋಗ ಹೆಚ್ಚೆಚ್ಚು ಆಗ್ತಾ ಇದೆ. ಹೀಗಿರುತ್ತ, ಕನ್ನಡಕ್ಕೆ ಹೆಚ್ಚಿನ ಅಪಾಯ ಹಿಂದಿಯಿಂದಲೆ, ಇಂಗ್ಲೀಷಿನಿಂದಲೆ ಹೇಳೋದು ಹೇಗೆ?

ಭಾಷೆ ಉಪಯೋಗವಾಗೋದು ಸ್ವತಂತ್ರವಾತಾವರಣದಲ್ಲಿ. ಭಾಷೆ ಎಂಬ ಸಂಗತಿಯೇ ಮನುಷ್ಯ ಸ್ವಾತಂತ್ರ್ಯದ ಪ್ರಕಟಣೆ. ಜನಕ್ಕೆ ಬೇಕಾದರೆ ಕನ್ನಡ ಇರತ್ತೆ; ಬೇಡದಿದ್ದರೆ ಇರಲ್ಲ. ಎಂದರೆ ಕನ್ನಡದ ಬಗ್ಗೆ ನಾವೇನೂ ಮಾಡಲ್ಲಾರವೆ? ಇದರ ಬಗ್ಗೆ ಯೋಚಿಸೋದೇ ನಿಷ್ಪ್ರಯೋಜಕವೇ? ಎಂದು ಕೇಳಬಹುದು. ಕನ್ನಡದ ಬಗ್ಗೆ ನಾವು ಮಾಡಬಹುದಾದ್ದು ಸಾಕಷ್ಟಿದೆ, ಕನ್ನಡದ ಬಗ್ಗೆ ಎಂದರೆ ಕನ್ನಡಿಗ ಸಮಾಜದ ಬಗ್ಗೆ ಎಂಬುದನ್ನ ಪುನರಪಿ ಹೇಳ್ತೇನೆ. ಯಾಕೆಂದರೆ ಕನ್ನಡದ ಕಾರ್ಯಕ್ರಮಗಳೆಲ್ಲ ಕನ್ನಡಿಗರ ಬದುಕಿಗೆ ಸಂಬಂಧಿಸಿದ ಕಾರ್ಯಕ್ರಮಗಳೇ ಆಗ್ತವೆ. ಆದ್ದರಿಂದ ಕನ್ನಡತನದ ಬಗ್ಗೆ ಮಾತಾಡೋದು ನಿಷ್ಪ್ರಯೋಜಕ ಅಲ್ಲ. ಕನ್ನಡದ ಭಾಷೆ ತೆರೆದಿರಬೇಕು ನಿಜ; ಕನ್ನಡ ಸಮಾಜಾನೂ ತೆರೆದಿರಬೇಕು. ಶಿವರಾಮ ಕಾರಂತರು ಒಂದು ಭಾಷಣದಲ್ಲಿ ಹೇಳಿದ್ರು—ಭಾಷೆಗಿಂತ ಬದುಕು ಮುಖ್ಯ ಅಂತ. ನಿಜವಾದ ಮಾತು. ಆದರೆ ಬದುಕು ಪ್ರಕಟವಾಗಬೇಕಾದ್ದಾದರೂ ಭಾಷೆ ಮೂಲಕವೇ ಆಗಿರ್ತೆ. ಇವೆರಡನ್ನ ಬೇರೆ ಬೇರೆ ಮಾಡೋಹಾಗಿಲ್ಲ. ಭಾಷೆಗೆ ಬದುಕು ಬೇಕು: ಬದುಕಿಗೆ ಭಾಷೆನೂ ಬೇಕು. ಭಾಷೆ ಅನ್ನೋದು ನಮ್ಮ ಸಂಸ್ಕೃತಿಯ ಒಂದು ಅಂಗ, ಒಂದು ಮಾಧ್ಯಮ. ಭಾಷೆ ಬಗ್ಗೆ ನೇರವಾಗಿ ಏನು ಮಾಡಬಹುದು? ಟ್ಯಾಪ್‌ರೈಟರುಗಳನ್ನ ಕೊಂಡುಕೊಬಹುದು: ಪತ್ರಿಕೆಗಳನ್ನ ಪ್ರೋತ್ಸಾಹಿಸಬಹುದು; ಮುದ್ರಣಾಲಯಗಳನ್ನ ಹೆಚ್ಚಿಸಬಹುದು; ಪುಸ್ತಕಗಳನ್ನ ಸುಲಭ ಬೆಲೆಗಳಲ್ಲಿ ಹಂಚಬಹುದು. ಏನೇ ಮಾಡಿದ್ರೂ ಇವನ್ನ ಉಪಯೋಗಿಸಬೇಕೆನ್ನೋ ಇರಾದೆ ಜನರಲ್ಲಿ ಮೂಡದೆ ಇದ್ರೆ ಯಾವ ಪ್ರಯೋಜನವೂ ಇಲ್ಲ. ಇಂಥ ಇರಾದೆ ಹೇಗೆ ಮಾಡೋದು? ಇದರ ಬಗ್ಗೆ ನಾವೇನು ಮಾಡಬಹುದು? ಈ ರೀತಿ ಯೋಚಿಸೋ ಅಗತ್ಯ ಇದೆ. ಒಂದು ಉದಾಹರಣೆ ಕೊಡಬಹುದಾದರೆ, ಇಂದು ವಿಜ್ಞಾನದ ಬಗ್ಗೆ ನಮಗೆ ತಿಳೀಬೇಕಾದ್ರೆ ಇಂಗ್ಲೀಷಿನ ಮರೆ ಹೋಗಬೇಕು

ಈಚಿಗೆ ತಾನೆ ಕರ್ನಾಟಕ ವಿಜ್ಞಾನ ಪರಿಷತ್ತು ವೈಜ್ಞಾನಿಕ ಪತ್ರಿಕೆಯೊಂದನ್ನ ಸಾಮಾನ್ಯ ಓದುಗರಿಗೋಸ್ಕರ ತರ್ತ ಇದೆ. ಶಿವರಾಮ ಕಾರಂತರು, ನಿರಂಜನರು ಈ ದಿಕ್ಕಿನಲ್ಲಿ ಸಾಕಷ್ಟು ದುಡಿದಿದ್ದಾರೆ. ಬೇರೆ ಭಾಷೆಗಳ ಮರೆಹೋಗದೆ ಕನ್ನಡ ಜನಕ್ಕೆ ಜ್ಞಾನ ಕನ್ನಡದಲ್ಲೆ ಒದಗೋದು ಸಾಧ್ಯವಾದರೆ ಮಾತ್ರ ಅವರು ಕನ್ನಡ ಓದ್ತಾರೆ. ಇದು ವಿದ್ಯಾಭ್ಯಾಸ ಇರೋರ ಪ್ರಶ್ನೆ. ಆದಿಲ್ಲದವರ ಬಗ್ಗೆ ನಾವೇನು ಮಾಡ್ತಿದ್ದೇವೆ? ಅಕ್ಷರಾಭ್ಯಾಸ ಕೂಡ ಇಲ್ಲದ ಜನ ಇದ್ದಾರಲ್ಲ. ಇದೆಲ್ಲ ನಮಗೆಲ್ಲ ತಿಳಿದ ಸಂಗತಿಗಳೆ. ನಮ್ಮನ್ನ ಯಾವತ್ತೂ ಕಾಡುತ್ತಿರೋ ಸಮಸ್ಯೆಗಳೇ.

ಆದರೆ ಯಾರೂ ಹೆಚ್ಚಾಗಿ ಗಮನಕ್ಕೆ ತಂದುಕೊಳ್ಳದ ಕೆಲವು ಸಂಗತಿಗಳಿವೆ. ಕನ್ನಡತನದ ದೃಷ್ಟಿಯಿಂದ ಇವೂ ಮುಖ್ಯ. ಉದಾಹರಣೆಗೆ, ಒಂದು ಭಾಷೆಯ ಶಬ್ದಸಂಪತ್ತು ಅದರ ಸಾರ್ವಜನಿಕ ಉಪಯೋಗದ ದೃಷ್ಟಿಯಿಂದ ಮಹತ್ತ್ವದ ಸಂಗತಿ. ಅನೇಕ ಭಾಷಾಪ್ರಭೇದಗಳಿರುವ ಕನ್ನಡದ ಶಬ್ದಸಂಪತ್ತು ಕಡಿಮೆಯೇನಲ್ಲ. ಇಂಥ ಪ್ರಭೇದಗಳನ್ನ ಒಳಗೊಂಡಿರುವ ಕರಾರುವಾಕ್ಕಾದ ನಿಘಂಟುಗಳು ನಮ್ಮಲ್ಲಿಲ್ಲ. ಹಾಗೇನೇ ವೃತ್ತಿಪರ ಪದಗಳನ್ನ ಒಂದೆಡೆ ಕೂಡುವಂಥ ನಿಘಂಟುಗಳು, ಆಕರ ಗ್ರಂಥ ಗಳು ಬೇಕು. ಒಡಗಿ, ಮೋಚಿ, ಕುಂಬಾರ, ದರ್ಜಿ, ಒಕ್ಕಲಿಗ – ಇವರ ಕಸುಬಿಗೆ ಸಂಬಂಧಿಸಿದ ಪದಗಳು ಎಲ್ಲರಿಗೂ ಗೊತ್ತಿರಲ್ಲ. ಇಂಥ ಗ್ರಂಥಗಳು ನಮ್ಮ ಜ್ಞಾನ ಸಂಪತ್ತನ್ನ ಹೆಚ್ಚಿಸ್ತವೆ. ನಮ್ಮ 'ಪರಂಪರೆ'ಯೇನಿದ್ದರೂ ಅದರ ಬಗ್ಗೆ ತಿಳುವು ಮೂಡಿಸುತ್ತದೆ. ಇಂಥ ತಿಳಿವಿನಿಂದ ಮೂಡದ ಕಲ್ಪನೆಗಳು ಭ್ರಮಾತ್ಮಕವಾಗಿರು ತ್ತವೆ. ಅವು ಥಕ್ಕನೆ ಭ್ರಮನಿರಸನಗೊಳ್ಳುತ್ತವೆ.

ಒಂದು ಭಾಷೆಯ ತನ್ನತನವೆನ್ನೋದು ಆ ಭಾಷೆಯನ್ನಾಡುವ ಸಮೂಹದ ಚೈತನ್ಯಕ್ಕೆ ಇನ್ನೊಂದು ಹೆಸರು. ಆದ್ದರಿಂದ ಕನ್ನಡತನ ಅನ್ನೋದು ಕನ್ನಡಿಗರೆಲ್ಲರ ಒಟ್ಟಾರೆ ಸಮೂಹ ಜೀವನಕ್ಕೆ ಸಂಬಂಧಿಸಿದ ಸಂಗತಿ. ಭಾಷೆ ಮಾತ್ರ ಸಾಲದು– ಅದನ್ನ ಹೇಗೆ ಬಳಸ್ತೇವೆ, ಯಾತಕ್ಕೆ ಬಳಸ್ತೇವೆ ಅನ್ನೋದೂ ಮುಖ್ಯ. ಸದ್ಯ ಕನ್ನಡದಲ್ಲಿ ಬರುತ್ತಿರೋ ಹೊಸ ಹೊಸ ಪತ್ರಿಕೆಗಳು ಮತ್ತು ಸಾಹಿತ್ಯ ಕೃತಿಗಳು– ಇವುಗಳ ಹಿನ್ನೆಲೆಯಲ್ಲಿ ನೋಡಿದರೆ ಈ ಪ್ರಶ್ನೆ ಗಂಭೀರವಾದ್ದು ಅನಿಸುತ್ತೆ. ಭಾಷೇನ ಯಾವುದಕ್ಕೂ ಬಳಸಬಹುದು--ಸುಳ್ಳು ಹೇಳೋದಕ್ಕೆ, ನಿಂದಿಸೋದಕ್ಕೆ, ಗೇಲಿಮಾಡೋ ದಕ್ಕೆ, ಚರಿತ್ರವಧೆ ಮಾಡೋದಕ್ಕೆ. ಹಾಗೇನೇ: ಜ್ಞಾನಾಭಿವೃದ್ಧಿಗೆ, ಸಂತೋಷಕ್ಕೆ ಭಾವನಾಪ್ರಪಂಚ ವಿಸ್ತರಿಸೋದಕ್ಕೆ, ಸುಳ್ಳನ್ನ ಎತ್ತಿ ತೋರಿಸೋದಕ್ಕೆ, ಆತ್ಮವಿಮರ್ಶ ನಕ್ಕೆ, ಸತ್ಯಶೋಧನಕ್ಕೆ. ಎಲ್ಲಾ ಭಾಷೆಗಳಲ್ಲೂ ಇಂಥ ಸಾಧ್ಯತೆಗಳಿವೆ. ಭಾಷೇನ ಹೇಗೆ ಬಳಸ್ತೇವೆ, ಯಾತಕ್ಕೆ ಬಳಸ್ತೇವೆ ಅನ್ನೋದು ಸಂಸ್ಕೃತಿಗೆ ಸಂಬಂಧಿಸಿದ ಪ್ರಶ್ನೇನೇ ಹೊರತು ಕೇವಲ ಭಾಷೆಗಷ್ಟೇ ಸಂಬಂಧಿಸಿದ್ದಲ್ಲ. ಕೊನೆಗೂ ನಾವು ಕನ್ನಡತನ ಕಾಣುವುದು ಕನ್ನಡಿಗರ ಜನಜೀವನದಲ್ಲೇನೇ. ●

ಸಂಧ್ಯಾ

ಮಿಂಚು ಕಂಗಳ ಚೆಲುವೆಯ ಕಂಡವನು
ಹೆಸರೇನು ಎಂದಾಗ- 'ಸಂಧ್ಯಾ'
ಎಂಬ ಉತ್ತರ ಬಂದಾಗ
ತನ್ನ ಜೀವನದಲ್ಲು ಬಹುಬೇಗ
'ಸಂಧ್ಯಾಕಾಲ' ಬರಬಹುದು
ಎಂಬ ಮೂಢ ನಂಬಿಕೆಗೆ ಹೆದರಿದರೂ,
ಅವಳನ್ನೇ ಮದುವೆಯಾಗುವುವೆನೆಂದು
ಧೈರ್ಯದಿಂದ ಮುಂದು ಬಂದ ;
ಅವಳು ಮನೆದುಂಬಿದ ಗಳಿಗೆ;
ಬೆಳದಿಂಗಳು ಬಂದು ಹೊಕ್ಕಂತೆ ಆಯ್ತು
ಕಂಗಳು ದೀಪದಂತೆ ಹೊಳೆಯಿತು
ಮನೆ ತುಂಬಿದ ಮಡದಿ ಮನಸನ್ನೂ ತುಂಬಿದಳು.
ಆಮೇಲೆ ಗೊತ್ತಾಯ್ತು ಅವನಿಗೆ,
'ಸಂಧ್ಯಾ' ಎಂದರೆ ಎಂದೂ
'ಕತ್ತಲಾಗದ ಸಂಜೆ' ಎಂದು.

—ಸಂಧ್ಯಾ ಬಂದಗದ್ದೆ

ಸಂಧ್ಯಾ ಬಂದಗದ್ದೆ, ಬಂದಗದ್ದೆ, ಕೆಳದಿ ಅಂಚೆ, ಸಾಗರ ತಾಲ್ಲೂಕು, ಶಿವಮೊಗ್ಗ ಜಿಲ್ಲೆ.

ದೂರ ಸರಿದದ್ದೇಕೆ ಗೆಳತಿ ?

ರೆಕ್ಕೆ ಸುಟ್ಟ ಬಾವಲಿಯಂತೆ ಹಳೆಯ
ನೆನಪಿಗೆ ಜೋತು ಬಿದ್ದು ದಿನವೂ ಸಾಯುತ್ತದೆ
ಸೋತ ಮನಸ್ಸು
ನಿಷ್ಠುರ ಕಲ್ಪನೆಯು ಕಾಲಿಲ್ಲದ ಸುಂದರ
ಸಿಹಿ ನೆನಪುಗಳು ವಾಸ್ತವಿಕತೆಯು
ಸುತ್ತ ನೆರಳಾಟದ ಭೂತಗಳಾಗಿ
ಕೇಕೆ ಹಾಕುವಂತಾಯ್ತಲ್ಲಾ

—ಶಶಿಪ್ರಭ ನಂ. 104, ಅಂಜನಾದ್ರಿ 5ನೇ ಮುಖ್ಯರಸ್ತೆ 1ನೇ ಹಂತ, ವೆಸ್ಟ್ ಆಫ್ ಕಾರ್ಡ್ ರಸ್ತೆ, ಬೆಂಗಳೂರು-560 010.

ಗೆಳತಿ ಹೇಳು, ನನ್ನಿಂದ ದೂರ ಸರಿದದ್ದೇಕೆ ?

ಬಣ್ಣ ಭಾವನೆಗಳ ಬೆರಳಾಟದಲ್ಲಿ ನನ್ನ ಸಿಕ್ಕಾಗಿಸಿ
ಜೀವವಿಲ್ಲದ ತೊಗಲು ಬೊಂಬೆಯಾಗಿಸಿ
ಅರಗಿಸಿಕೊಳ್ಳಲು, ಅರ್ಥೈಸಿಕೊಳ್ಳಲೂ ಆಗದ
ಹುಚ್ಚು ಶಬ್ದ ಜಾಲಗಳ ಕೋಠಿಯಲ್ಲಿ ಅಂದು
ಹಿಡಿದಿಟ್ಟದ್ದೇಕೆ ? ಈಗ ದೂರ ಸರಿದದ್ದೇಕೆ ?

ಮಾತುಗಳು ಮೂಕವಾಗಿ, ಮೂಕತೆ ಮಾತನಾಡಿದಾಗ
ಜೀವಂತಿಕೆಗೆ ಉಸಿರಾಗಿದ್ದ ನೀನು
ಇಂದು ಮೌನವಾದುದ್ದೇಕೆ ?

ಬಿಚ್ಚು ಕಂಗಳ ಹೊಳಪ ಕಾವಿನಲಿ ನನ್ನ
ಕಂಡ ನೀನಿಂದು ಮಂಕಾಗಿ
ಮುಗ್ಧತೆಯು ಸೋಗಿನಲಿ ದೂರ ಸರಿದದ್ದೇಕೆ ಗೆಳತಿ ?

ಜೀವನದ ಪ್ರೀತಿ ಪ್ರೇಮಗಳ ಬೆಸೆದಾಟದಲ್ಲಿ
ಕಾರಣಗಳ ನೆಪವೊಡ್ಡಿ ಕೊಂಡಿ ಕಳಚಿಕೊಂಡ ನೀನು

ತೊ
ಟ್ಟು
ತೊ
ಟ್ಟಾ
ಗಿ

ಮಿಡಿದ ನನ್ನ ಕಣ್ಣೀರಿನ
ಕನ್ನಡಿಯಾದೆಯಲ್ಲ ಗೆಳತಿ ?

ಬಿಟ್ಟ ಬಿರುಕಿನ ಬದುಕ ಹಂದರದಲ್ಲಿ
ಪಳಯುಳಿಕೆಯ ಪ್ರತೀಕವಾದ ನೀನು
ಹೇಳು ಗೆಳತಿ ದೂರ ಸರಿದದ್ದೇಕೆ ?
ಸರಿದು ಭಾರವಾಗಿದ್ದೇಕೆ ?

—ಶಶಿಪ್ರಭ

ಯುದ್ಧ

—ಲುಯಜಿ ಪಿರಾಂಡೆಲ್ಲೊ

ರಾತ್ರಿಯ ರೈಲಿನಲ್ಲಿ ರೋಮನ್ನು ಬಿಟ್ಟ ಪ್ರಯಾಣಿಕರು ಪುಟ್ಟ ನಿಲ್ದಾಣವಾದ ಫೇಬ್ರಿಯಾನೋದಲ್ಲಿ ಬೆಳಗಿನ ಜಾವದ ತನಕ ಕಾಯಬೇಕಾಗಿತ್ತು. ಮುಂದಕ್ಕೆ ಅವರು ಹಳೆಯ ಕಾಲದ ಚಿಕ್ಕ ರೈಲಿನಲ್ಲಿ ಸಲ್ಮೋನಾಗೆ ಹೋಗಬೇಕಾಗಿತ್ತು.

ಉಸಿರು ಕಟ್ಟಿಸುವಂತಿದ್ದ ಹೊಗೆ ತುಂಬಿದ ಎರಡನೆಯ ದರ್ಜೆಯ ಡಬ್ಬಿಯೊಳಗೆ ಐದು ಜನರು ಒಂದು ರಾತ್ರಿಯನ್ನು ಕಳೆದಿದ್ದರು. ಬೆಳಗಿನ ಜಾವದ ಹೊತ್ತಿಗೆ ಕಪ್ಪು ಬಟ್ಟೆ ಧರಿಸಿದ್ದ ದಪ್ಪ ಹೆಂಗಸೊಬ್ಬಳನ್ನು ಮೂಟೆಯನ್ನು ತಳ್ಳುವಂತೆ ಅವಳ ಗಂಡ ಒಳಗೆ ನೂಕಿದ. ಏದುಸಿರು ಬಿಡುತ್ತಿದ್ದ, ನರಳುತ್ತಿದ್ದ ಅವನು ಅವಳ ಹಿಂದೆ ಹತ್ತಿದ. ಪುಟ್ಟದಾಗಿ, ಸಣ್ಣಗೆ, ದುರ್ಬಲನಾಗಿದ್ದ ಅವನ ಮುಖ ಬಿಳುಚಿಕೊಂಡಿತ್ತು; ಅವನ ಚಿಕ್ಕ ಕಣ್ಣುಗಳು ಹೊಳೆಯುತ್ತಿದ್ದವು; ಅವನು ಸಂಕೋಚದಿಂದ ಮುದುಡಿ ಹೋಗಿದ್ದ.

ಕುಳಿತುಕೊಂಡ ಮೇಲೆ ಅವನು ತನಗೆ ಮತ್ತು ತನ್ನ ಹೆಂಡತಿಗೆ ಜಾಗ ಕೊಟ್ಟಿದ್ದಕ್ಕಾಗಿ ಇತರ ಪ್ರಯಾಣಿಕರಿಗೆ ಥ್ಯಾಂಕ್ಸ್ ಹೇಳಿದ. ನಂತರ ತನ್ನ ಹೆಂಡತಿಯ ಕಡೆ ತಿರುಗಿ, ಅವಳ ಕೋಟನ್ನು ತೆಗೆಯಲು ಸಹಾಯ ಮಾಡುತ್ತಾ ಮೃದುವಾಗಿ ಕೇಳಿದ:

"ನಿನಗೇನೂ ತೊಂದರೆಯಾಗಲಿಲ್ಲ ತಾನೇ ?"

ಉತ್ತರಿಸುವುದಕ್ಕೆ ಬದಲು ಅವಳು ತನ್ನ ಕೋಟಿನ ಕಾಲರನ್ನು ಮುಖವನು ಮುಚ್ಚುವಂತೆ ಮೇಲಕ್ಕೆ ಎಳೆದುಕೊಂಡಳು.

"ದರಿದ್ರ ಪ್ರಪಂಚ" ವಿಷಾದದಿಂದ ಮುಗುಳ್ನಗುತ್ತಾ ಗಂಡ ಗೊಣಗಿದ.

ಸಹ ಪ್ರಯಾಣಿಕರಿಗೆ ಹೆಂಡತಿಯ ಬಗ್ಗೆ ಹೇಳುವುದು ತನ್ನ ಕರ್ತವ್ಯವೆಂದು ಭಾವಿಸಿ ಅವನು ಹೇಳತೊಡಗಿದ. ಅವಳ ಸ್ಥಿತಿ ಕರುಣಾಜನಕವಾಗಿತ್ತು ಏಕೆಂದರೆ

ಅನು : ಎ.ಆರ್. ನಾಗಭೂಷಣ, 1235, ಕೆ.ಎಂ. ಪುರಂ, ಮೈಸೂರು-560 004

ಇಪ್ಪತ್ತು ವರ್ಷದ ಒಬ್ಬನೇ ಮಗನನ್ನು ಯುದ್ಧ ಸೆಳೆದುಕೊಂಡಿತ್ತು. ಅವನಿಗಾಗಿ ಇಬ್ಬರೂ ತಮ್ಮ ಜೀವನವನ್ನೇ ಸವೆಸಿದ್ದರು. ಅವನು ಓದಲು ರೋಮ್‌ಗೆ ಹೋದಾಗ ಇಬ್ಬರು ಸಲ್ಮೋನಾದ ತಮ್ಮ ಮನೆಯನ್ನು ಬಿಟ್ಟು ಅವನೊಡನೆ ರೋಮ್‌ಗೆ ಹೋಗಿದ್ದರು. ಕನಿಷ್ಠ ಆರು ತಿಂಗಳು ರಣರಂಗಕ್ಕೆ ಕರೆಯಬಾರದೆಂಬ ಭರವಸೆಯನ್ನು ಸರ್ಕಾರದಿಂದ ಪಡೆದುಕೊಂಡು ಅವನು ಸೈನ್ಯಕ್ಕೆ ಸೇರಲು ಒಪ್ಪಿದ್ದರು. ಆದರೆ ಈಗ ಇದ್ದಕ್ಕಿದ್ದಂತೆ ಮೂರು ದಿನಗಳಲ್ಲಿ ಹೊರಟು ಬಿಡಬೇಕೆಂದೂ ಅವನನ್ನು ತಂದೆತಾಯಿಯರು ಬೀಳ್ಕೊಡಬೇಕೆಂದೂ ಒಂದು ಟೆಲಿಗ್ರಾಂ ಬಂದಿತ್ತು.

ಉದ್ದನೆಯ ಕೋಟ್ ಧರಿಸಿದ್ದ ಅವಳು ಮಿಸುಕಾಡುತ್ತಾ ಆಗಾಗ್ಗೆ ಗೊರಗೊರ ಶಬ್ದ ಮಾಡುತ್ತಾ ಕುಳಿತಿದ್ದಳು. ತನ್ನ ಗಂಡನ ವಿವರಣೆ ಉಳಿದವರಲ್ಲಿ ಸ್ವಲ್ಪವೂ ಅನುಕಂಪವನ್ನು ಹುಟ್ಟಿಸುವುದಿಲ್ಲ ಎಂದು ಅವಳಿಗೆ ಖಚಿತವಾಗಿ ಅನ್ನಿಸಿತು. ಪ್ರಾಯಶಃ ಅವರೆಲ್ಲರ ಸ್ಥಿತಿಯೂ ಅವಳ ಸ್ಥಿತಿಯಂತೆಯೇ ಇತ್ತು. ಗಮನವಿಟ್ಟು ಕೇಳುತ್ತಿದ್ದ ಒಬ್ಬ ಹೇಳಿದ.

"ನಿಮ್ಮ ಮಗ ಯುದ್ಧಕ್ಕೆ ಈಗ ಹೊರಡುತ್ತಿದ್ದಾನೆ. ನೀವು ದೇವರಿಗೆ ಕೃತಜ್ಞತರಾಗಿರಬೇಕು. ನನ್ನ ಮಗ ಯುದ್ಧ ಪ್ರಾರಂಭವಾದ ದಿನವೇ ಹೋದ. ಎರಡು ಬಾರಿ ಗಾಯಗೊಂಡು ವಾಪಸ್ಸು ಬಂದು ಹಿಂತಿರುಗಿ ಹೋಗಿದ್ದಾನೆ."

"ನನ್ನ ವಿಷಯ ಕೇಳಿ. ನನ್ನ ಇಬ್ಬರು ಮತ್ತು ನನ್ನ ಅಣ್ಣನ ಮೂರು ಮಕ್ಕಳು ರಣರಂಗದಲ್ಲಿದ್ದಾರೆ" ಎಂದ ಇನ್ನೊಬ್ಬ ಪ್ರಯಾಣಿಕ.

"ಆದರೆ, ನಮಗಿರುವುದು ಒಬ್ಬನೇ ಮಗ" ಎಂದ ಗಂಡ.

"ಅದರಿಂದಾದ ವ್ಯತ್ಯಾಸವೇನು ? ಅವನನ್ನು ಅತಿ ಮುದ್ದು ಮಾಡಿ ನೀವು ಹಾಳು ಮಾಡಬಹುದು. ನಿಮಗೆ ಇತರ ಮಕ್ಕಳಿದ್ದಿದ್ದೇ ಆದರೆ ಅವರನ್ನು ಪ್ರೀತಿಸುವುದಕ್ಕಿಂತ ಹೆಚ್ಚಾಗಿ ನಿಮ್ಮ ಈ ಮಗನನ್ನು ನೀವು ಪ್ರೀತಿಸಲಾರಿರಿ. ಚೂರುಚೂರು ಮಾಡಿ ಮಕ್ಕಳಿಗೆ ಸಮನಾಗಿ ಹಂಚುವ ಬ್ರೆಡ್ಡಿನಂತಲ್ಲ ತಂದೆಯ ಪ್ರೀತಿ, ಒಬ್ಬ ಮಗನಿರಲೀ ಹತ್ತು ಜನ ಮಕ್ಕಳಿರಲೀ ತಂದೆ ತನ್ನ ಪ್ರೀತಿಯನ್ನು ಭೇದಭಾವವಿಲ್ಲದೆ ತೋರಿಸುತ್ತಾನೆ. ನಾನು ಇಬ್ಬರು ಮಕ್ಕಳಿಗಾಗಿ ಅರ್ಧರ್ಧ ದುಃಖಿಸುತ್ತಿಲ್ಲ ಆದರೆ ಎರಡರಷ್ಟು"........

"ನಿಜ......ನಿಜ......" ಗಂಡ ನಿಟ್ಟುಸಿರು ಬಿಡುತ್ತಾ ಮುಜಗರದಿಂದ ಹೇಳಿದ. "ಇಬ್ಬರು ಮಕ್ಕಳು ರಣರಂಗದಲ್ಲಿದ್ದು ಒಂದು ವೇಳೆ ಒಬ್ಬ ಸತ್ತರೆ (ನಿಮ್ಮ ವಿಷಯದಲ್ಲಿ ಹೀಗಾಗದಿರಲಿ) ತಂದೆಯನ್ನು ಸಮಾಧಾನ ಮಾಡಲು ಇನ್ನೊಬ್ಬನಿರುತ್ತಾನೆ, ಆದರೆ..."

"ಹೌದು, ಸಮಾಧಾನ ಮಾಡಲು ಒಬ್ಬನಿರುತ್ತಾನೆ. ಆದರೆ, ಅವನಿಗಾಗಿ ತಂದೆ ಬದುಕಲೇಬೇಕಾಗುತ್ತದೆ. ಒಬ್ಬನೇ ಮಗನಿದ್ದು, ಅವನು ಸತ್ತರೆ ತಂದೆ ಕೂಡಾ ಸತ್ತು ತನ್ನ ದುಃಖವನ್ನು ಕೊನೆಗಾಣಿಸಿಕೊಳ್ಳಬಹುದು. ಎರಡರಲ್ಲಿ ಯಾವುದು ಕಷ್ಟ ? ನನ್ನ ಪರಿಸ್ಥಿತಿ ನಿಮ್ಮದಕ್ಕಿಂತ ಹೆಚ್ಚು ಶೋಚನೀಯ ಎನಿಸುವುದಿಲ್ಲವೆ ?"

"ಅಸಂಬದ್ಧವಾದ ಮಾತು" ಎಂದ ಇನ್ನೊಬ್ಬ ಪ್ರಯಾಣಿಕ. ದಪ್ಪದೇಹ, ಕೆಂಪು ಮುಖ, ಮಂಕಾಗಿದ್ದರೂ ಕೆಂಪಗೆ ಉರಿಯುತ್ತಿದ್ದ ಕಣ್ಣುಗಳು.

ಏದುಸಿರು ಬಿಡುತ್ತಿದ್ದ. ಅವನ ದುರ್ಬಲ ದೇಹ ತಡೆದುಕೊಳ್ಳಲು ಸಾಧ್ಯವೇ ಎನಿಸುವಂತಿದ್ದ ಊದಿಕೊಂಡಿದ್ದ ಕಣ್ಣುಗಳಲ್ಲಿ ಭಯಂಕರ ಹಿಂಸೆ ಚಿಮ್ಮುತ್ತಿತ್ತು.

"ಅಸಂಬದ್ಧ" ಮುರಿದು ಹೋಗಿದ್ದ ಎರಡು ಹಲ್ಲುಗಳನ್ನು ಕೈಯಿಂದ ಮುಚ್ಚಿಕೊಳ್ಳಲು ಪ್ರಯತ್ನಿಸುತ್ತಾ ಹೇಳಿದ. "ನಮ್ಮ ಲಾಭಕ್ಕಾಗಿ ನಾವು ನಮ್ಮ ಮಕ್ಕಳಿಗೆ ಜನ್ಮ ಕೊಡುತ್ತೇವೆಯೇ ?"

ಉಳಿದ ಪ್ರಯಾಣಿಕರು ಅವನತ್ತ ನೋವಿನಿಂದ ನೋಡಿದರು. ಯುದ್ಧ ಪ್ರಾರಂಭವಾದ ದಿನವೇ ರಣರಂಗಕ್ಕೆ ಹೊರಟುಹೋಗಿದ್ದ ಮಗನ ತಂದೆ ನಿಟ್ಟುಸಿರಿಡುತ್ತಾ ಹೇಳಿದ, "ನೀವು ಹೇಳಿದ್ದು ನಿಜ. ನಮ್ಮ ಮಕ್ಕಳು ನಮಗೆ ಸೇರಿದವರಲ್ಲ. ದೇಶಕ್ಕೆ ಸೇರಿದವರು."

"ಥತ್" ಪ್ರತಿಕ್ರಿಯಿಸಿದ ದಪ್ಪನೆಯ ಪ್ರಯಾಣಿಕ. "ನಮ್ಮ ಮಕ್ಕಳು ಹುಟ್ಟಿದಾಗ ನಾವು ದೇಶದ ಬಗ್ಗೆ ಯೋಚಿಸುತ್ತೇವೆಯೇ ? ನಮ್ಮ ಮಕ್ಕಳು ಹುಟ್ಟುತ್ತಾರೆ ಏಕೆಂದರೆ ಅವರು ಹುಟ್ಟಬೇಕು. ಅವರು ಬೆಳೆದಂತೆ ನಮ್ಮಂತೆಯೇ ಆಗುತ್ತಾರೆ, ಇದು ಸತ್ಯ. ನಾವು ಅವರ ಬಗ್ಗೆ ಯೋಚಿಸಿದಷ್ಟು ಅವರು ನಮ್ಮ ಬಗ್ಗೆ ಯೋಚಿಸುವುದಿಲ್ಲ. ಅವರಿಗೆ ಇಪ್ಪತ್ತು ವರ್ಷವಾದಾಗ ನಾವು ಇಪ್ಪತ್ತು ವರ್ಷದವರಿದ್ದಾಗ ಹೇಗಿದ್ದೆವೋ ಹಾಗೆಯೇ ಇರುತ್ತಾರೆ. ನಮಗೂ ತಂದೆತಾಯಿಯರು ಇದ್ದರು. ಆದರೆ ಬೇರೆ ಎಷ್ಟೋ ವಿಷಯಗಳೂ ಇದ್ದವು-ಹುಡುಗಿಯರು, ಸಿಗರೇಟು, ಭ್ರಮೆಗಳು, ಹೊಸ ಸಂಬಂಧಗಳು......ನಮಗೆ ಇಪ್ಪತ್ತು ವರ್ಷವಾಗಿದ್ದಾಗ ದೇಶದ ಕರೆಗೆ ತಂದೆತಾಯಿಯರು ಬೇಡವೆಂದರೂ ಉತ್ತರಿಸುತ್ತಿದ್ದೆವು. ಈಗಲೂ ನಮಗೆ ದೇಶಪ್ರೇಮ ತುಂಬಾ ಇದೆ, ಆದರೆ ಮಕ್ಕಳ ಮೇಲಿನ ಪ್ರೀತಿ ಇನ್ನೂ ಹೆಚ್ಚು. ಮಗನ ಬದಲು ರಣರಂಗಕ್ಕೆ ಹೋಗುವುದು ಸಾಧ್ಯವಿದ್ದರೆ ನಮ್ಮಲ್ಲಿ ಯಾರು ಬೇಡವೆನ್ನುತ್ತಾರೆ ?"

ಎಲ್ಲರೂ ನಿಶ್ಶಬ್ದವಾಗಿ ತಲೆಯಾಡಿಸುತ್ತಾ ಸಮ್ಮತಿಸುತ್ತಿದ್ದರು.

ದಪ್ಪನೆಯ ಪ್ರಯಾಣಿಕ ಮುಂದುವರೆಸಿದ. "ಇಪ್ಪತ್ತು ವರ್ಷದ ನಮ್ಮ ಮಕ್ಕಳ ಭಾವನೆಗಳನ್ನು ನಾವೇಕೆ ಅರ್ಥ ಮಾಡಿಕೊಳ್ಳಬಾರದು ? ಆ ವಯಸ್ಸಿನಲ್ಲಿ ಅವರಿಗೆ (ನಾನು ಒಳ್ಳೆಯ ಹುಡುಗರ ಬಗ್ಗೆ ಹೇಳುತ್ತಿದ್ದೇನೆ) ನಮ್ಮ ಮೇಲಿನ ಪ್ರೀತಿಗಿಂತ ದೇಶ ಪ್ರೇಮ ಹೆಚ್ಚು ಎನ್ನಿಸುವುದು ಸಹಜವಲ್ಲವೆ ? ನಾವು ಮುದುಕರು ಓಡಾಡಲು ಆಗದೆ ಮನೆಯಲ್ಲಿಯೇ ಇರಬೇಕೆಂದು ಅವರಿಗೆ ಅನ್ನಿಸುವುದು ಸಹಜವಲ್ಲವೇ ? ಹಸಿವಿನಿಂದ ಸಾಯುವುದನ್ನು ತಪ್ಪಿಸಲು ಆಹಾರವನ್ನು ರಕ್ಷಿಸಿಡುತ್ತೇವೆ. ಹಾಗೆಯೇ ದೇಶವೆನ್ನು ವುದೂ ಅಸ್ತಿತ್ವದಲ್ಲಿ ಇರುವುದಾದರೆ. ದೇಶವೂ ಒಂದು ಅಗತ್ಯವಾದರೆ ಯಾರಾದರೂ ಅದನ್ನು ರಕ್ಷಿಸಲೇಬೇಕು; ಇಪ್ಪತ್ತು ವರ್ಷಗಳಾದಾಗ ನಮ್ಮ ಮಕ್ಕಳು ಹೋಗುತ್ತಾರೆ. ಅವರಿಗೆ ಕಣ್ಣೀರು ಬೇಡ. ಅವರು ರೋಮಾಂಚನಗೊಂಡು ಖುಷಿಯಿಂದ ಸಾಯುತ್ತಾರೆ. (ನಾನು ಒಳ್ಳೆಯ ಹುಡುಗರ ಬಗ್ಗೆ ಹೇಳುತ್ತಿದ್ದೇನೆ). ಜೀವನದ ಕೊಳಕು ಮುಖ ಗಳನ್ನು, ಅದರ ಬೇಸರವನ್ನು, ಸಣ್ಣತನವನ್ನು, ಭ್ರಮನಿರಸನದ ಕಹಿಯನ್ನು ನೋಡದೆ ಚಿಕ್ಕ ವಯಸ್ಸಿನಲ್ಲಿ ಖುಷಿಯಿಂದ ಸಾಯುವುದಾದರೆ, ಅದಕ್ಕಿಂತ ಹೆಚ್ಚೇನು ಬೇಕು ? ಎಲ್ಲರೂ ಅಳುವುದನ್ನು ನಿಲ್ಲಿಸಬೇಕು. ಎಲ್ಲರೂ ನಗಬೇಕು. ನನ್ನಂತೆ. ಅಥವಾ ಕೊನೆಯ ಪಕ್ಷ ದೇವರಿಗೆ ಕೃತಜ್ಞರಾಗಿರಬೇಕು, ನನ್ನಂತೆ. ನನ್ನ ಮಗ ಸಾಯುವ ಮುನ್ನ ಒಂದು ಸುದ್ದಿ ಕಳಿಸಿದ್ದ--ತಾನು ಜೀವನವನ್ನು ಶ್ರೇಷ್ಠ ರೀತಿಯಲ್ಲಿ ಕೊನೆಗಾಣಿಸಿಕೊಳ್ಳುತ್ತಿರು ವುದರ ಬಗ್ಗೆ ಸಮಾಧಾನದಿಂದ ಇದ್ದೇನೆ ಎಂದು. ಆದ್ದರಿಂದಲೆ ನೋಡಿ, ನಾನು ಕಪ್ಪು ಬಟ್ಟೆಯನ್ನು ಸಹ ಹಾಕಿಕೊಂಡಿಲ್ಲ........"

ಎಲ್ಲರಿಗೂ ತೋರಿಸುವಂತೆ ತನ್ನ ಜಿಂಕೆ ಚರ್ಮದ ಕೋಲನ್ನು ಅಲುಗಾಡಿಸಿದ, ಮುರಿದು ಹೋಗಿದ್ದ ಹಲ್ಲನ್ನು ಮುಚ್ಚಿದ್ದ ಅವನ ನಿರ್ಜೀವ ತುಟಿ ಅದರುತ್ತಿತ್ತು, ನೀರು ತುಂಬಿಕೊಂಡಿದ್ದ ಅವನ ಕಣ್ಣು ನಿಶ್ಚಲವಾಗಿತ್ತು, ಅವನ ಕೀರಲು ನಗು ಅಳುವಿನಂತಿತ್ತು.

"ಹೌದು...ಹೌದು..." ಎಲ್ಲರೂ ಒಪ್ಪಿದರು.

ಮೂಲೆಯಲ್ಲಿ ಮುದುಡಿ ಕೂತಿದ್ದ ಹೆಂಗಸು ಸುಮ್ಮನೆ ಕೇಳುತ್ತಿದ್ದಳು. ಕಳೆದ ಮೂರು ತಿಂಗಳಿಂದ ಅವಳು ತನ್ನ ಗಂಡನ ಮತ್ತು ಸ್ನೇಹಿತರ ಶಬ್ದಗಳಲ್ಲಿ ಸಮಾಧಾನ ವನ್ನು ತಾಯಿಯೊಬ್ಬಳು ತನ್ನ ಮಗನನ್ನು ಕೇವಲ ಸಾವಿಗಷ್ಟೇ ಅಲ್ಲದೆ ಭಯಂಕರ ಜೀವನ ಕ್ರಮಕ್ಕೆ ಕಳಿಸಿ ಪರಿಸ್ಥಿತಿಯನ್ನು ಒಪ್ಪಿಕೊಳ್ಳುವುದು ಹೇಗೆ ಎಂಬುದನ್ನು ಹುಡುಕು ತ್ತಿದ್ದಳು. ಆದರೆ ಇದು ಸಿಕ್ಕಿರಲಿಲ್ಲ, ಯಾರಿಗೂ ತನ್ನ ಭಾವನೆಗಳನ್ನ ಹಂಚಿಕೊಳ್ಳಲು ಸಾಧ್ಯವಿಲ್ಲ ಎಂಬ ಯೋಚನೆ ಅವಳ ದುಃಖವನ್ನು ಇನ್ನಷ್ಟು ಹೆಚ್ಚು ಮಾಡಿತ್ತು.

ಆದರೆ ದಪ್ಪನೆಯ ಪ್ರಯಾಣಿಕನ ಮಾತುಗಳ ಅವಳನ್ನು ಚಕಿತಗೊಳಿಸಿದವು, ದಿಗ್ಭ್ರಮೆಗೊಳಿಸಿದವು. ತನ್ನನ್ನು ಅರ್ಥ ಮಾಡಿಕೊಳ್ಳಲಾರದ ಇತರರದು ತಪ್ಪಲ್ಲ

ಎಂದು ಅವಳಿಗೆ ಥಟ್ಟನೆ ಅನ್ನಿಸಿತು. ಮಕ್ಕಳು ಯುದ್ಧಕ್ಕೆ ಹೋದಾಗ ಮತ್ತು ಸತ್ತಾಗ ಅಳದೆ ತಮ್ಮ ಸ್ಥಿತಿಯನ್ನು ಒಪ್ಪಿಕೊಳ್ಳುವ ಇತರ ತಂದೆತಾಯಿಯರ ಮಟ್ಟವನ್ನು ಏರಲಾರದ ತನ್ನದೇ ತಪ್ಪು.

ತಲೆಯನ್ನು ಎತ್ತಿದಳು. ದಪ್ಪನೆಯ ಮನುಷ್ಯ ತನ್ನ ಮಗ ಧೀರನಾಯಕನಂತೆ, ರಾಜನಿಗಾಗಿ, ದೇಶಕ್ಕಾಗಿ ಸಂತೋಷದಿಂದ, ವಿಷಾದವಿಲ್ಲದೆ ಸತ್ತ ಬಗೆಯನ್ನು ವರ್ಣಿಸುತ್ತಿದ್ದ. ಮೂಲೆಯಿಂದ ಬಾಗಿ ವಿವರಗಳನ್ನು ಎಚ್ಚರದಿಂದ ಕೇಳಲು ಪ್ರಯತ್ನಿಸಿದಳು. ಪರಿಚಯವಿಲ್ಲದ, ಎಂದೂ ಕನಸು ಕಾಣದ ಪ್ರಪಂಚದ ಒಳಗೆ ಮುಗ್ಗರಿಸಿದಂತೆ ಅವಳಿಗೆ ಅನ್ನಿಸಿತು. ತನ್ನ ಮಗನ ಸಾವಿನ ಬಗ್ಗೆ ಸ್ಥಿತಪ್ರಜ್ಞನಂತೆ ಮಾತನಾಡುತ್ತಿದ್ದ, ಧೀರ ತಂದೆಯನ್ನು ಎಲ್ಲರೂ ಅಭಿನಂದಿಸುತ್ತಿದ್ದುದು ಅವಳಿಗೆ ಸಂತಸ ತಂದಿತು.

ಇಲ್ಲಿಯವರೆಗೆ ಏನೂ ಕೇಳಿಲ್ಲವೇನೋ ಎಂಬಂತೆ, ಕನಸಿನಿಂದ ಎಚ್ಚರವಾದಂತೆ ಆ ಮುದುಕನ ಕಡೆ ತಿರುಗಿ ಅವಳು ಥಟ್ಟನೆ ಕೇಳಿದಳು :

"ಹಾಗಾದರೆ ನಿಮ್ಮ ಮಗ ನಿಜವಾಗಿಯೂ ಸತ್ತಿದ್ದಾನೆಯೇ ?"

ಎಲ್ಲರೂ ಅವಳತ್ತ ದುರುಗುಟ್ಟಿ ನೋಡಿದರು. ಮುದುಕ ಕೂಡಾ ಅವಳತ್ತ ನೋಡಿದ. ದೊಡ್ಡದಾದ, ಉಬ್ಬಿದ, ನೀರು ತುಂಬಿದ, ಮಂಕು ಕಣ್ಣುಗಳನ್ನು ಅವಳತ್ತ ನೆಟ್ಟ. ಉತ್ತರಿಸಲು ಪ್ರಯತ್ನಿಸಿದ, ಸಾಧ್ಯವಾಗಲಿಲ್ಲ. ಅವಳತ್ತ ಒಂದೇ ಸಮನೆ ನೋಡಿದ. ಆ ಮೂರ್ಖ, ಅಸಂಬದ್ಧ ಪ್ರಶ್ನೆಯನ್ನು ಕೇಳಿದ ತಕ್ಷಣ ತನ್ನ ಮಗ ನಿಜವಾಗಿಯೂ ಸತ್ತಿದ್ದಾನೆ, ಶಾಶ್ವತವಾಗಿ ಹೊರಟುಹೋಗಿದ್ದಾನೆ ಎಂದು ಅವನಿಗೆ ಅನ್ನಿಸಿತು. ಅವನ ಮುಖ ಸಣ್ಣಗಾಯಿತು, ವಿಕಾರವಾಯಿತು ಜೋಬಿನಿಂದ ಕರವಸ್ತ್ರವನ್ನು ರಭಸದಿಂದ ಎಳೆದುಕೊಂಡು, ಎಲ್ಲರಿಗೂ ಆಶ್ಚರ್ಯವಾಗುವಂತೆ, ದುಃಖದಿಂದ, ಹೃದಯ ವಿದ್ರಾವಕವಾಗಿ, ಬಿಕ್ಕಿಬಿಕ್ಕಿ ಅಳತೊಡಗಿದ.

ಮೂಲ: (ಇಟಾಲಿಯನ್) ಲುಯಿಜಿ ಪಿರಾಂದೆಲ್ಲೊ

"ಆ ಶಕ್ತಿ ಅಲಗಿನಂತೆ
ಈ ಪ್ರಪಂಚ ಗಲಗಿನಂತೆ
ಅದುವರೆಗೂ ಮಲಗಿದಂತೆ
ನಾವು ತಾಳಿಯಿರುವುದು"

—ಬೇಂದ್ರೆ

ಕಪ್ಪೆಯ ಜಾಡು

ಮನೆಯ ಮುಂದೆ
ಮರದ ಮೇಲೆ
ಕಾಕಾ ಕಪ್ಪಿ-ಕಾಗಕ್ಕ ಕಪ್ಪಿ
ಕುಳಿತೇ ಕುಳಿತಿತ್ತು.

ಮನೆಯ ಒಳಗೆ
ಮಂತ್ರ ಮಣ ಮಣ
ಮುಳ್ಕ ವಡೆ ಅನ್ನದುಂಡೆ
ಕಪ್ಪಿಗಾಗಿ ಕತ್ತೆತ್ತರ
ಎಂದಿಲ್ಲದ ಕಾತರ.

ಕಪ್ಪಿ ನೋಡಿತು
ನೋಡೇ ನೋಡಿತು
ಮನವು ತಿರುಗಿತು
ಹಾರಿ ಹೋಯಿತು.

ಕಪ್ಪಿ ಹಾರಿತು
ಹಾರಿ ಕಲಿಯಿತು
ಕಲಿತು ಹಾರಿತು

ನೆಲವ ಮರೆಯಿತು
ಜಗವ ಮೀರಿತು
ಮುಕ್ತ ಲೋಕದಂಚಿಗೆ
ಸ್ವಚ್ಛಂದದ ಸಿದ್ಧಿಗೆ.

ಕಾಗಕ್ಕ ಸಂಸಾರ ಕಾದಿತ್ತು
ಕಪ್ಪಿಯ ಜಾಡು ಹಳಸಿತ್ತು.

—ಶಿವರಾಂ ಪೈಲೂರು

ಶಿವರಾಂ ಪೈಲೂರು, ಚೊಕ್ಕಾಡಿ ಅಂಚೆ, ಕುಕ್ಕುಜಡ್ಕ, ಸುಳ್ಯ, ದಕ್ಷಿಣ ಕನ್ನಡ 574212

ಓದುಗ ಬರಹಗಾರ: ಕೆಲವು ಟಿಪ್ಪಣಿಗಳು

—ರಾಜೇಂದ್ರ ಚೆನ್ನಿ

(ಕಳೆದ ಸಂಚಿಕೆಯಿಂದ ಮುಂದುವರೆದಿದೆ)

ಕುಮಾರ ವ್ಯಾಸ ಹೆಚ್ಚು ವಿಸ್ತೃತವಾದ ಓದುಗ ವರ್ಗವನ್ನು (ಕೇಳುಗರನ್ನು) ಉದ್ದೇಶಿಸಿ ಬರೆದನೆನ್ನುವುದು, ಅವನ ಕಾವ್ಯಶೈಲಿಯ ಹರಹು ಮತ್ತು ವೈವಿಧ್ಯದಿಂದ ಗೊತ್ತಾಗುತ್ತದೆ. ಅಲ್ಲದೆ ಭಾರತದಲ್ಲಿ ಭಕ್ತಿ ಸಂಪ್ರದಾಯವು ವರ್ಗ ಮತ್ತು ಜಾತಿಗಳ ಸೀಮೆಗಳನ್ನು ಮೀರಿದ ಸಮುದಾಯದ ಅಪೇಕ್ಷೆಗಳ ಅಭಿವ್ಯಕ್ತಿಯಾಗಿತ್ತು. ಕುಮಾರ ವ್ಯಾಸ ಭಕ್ತಿ ಸಂಪ್ರದಾಯದ ಪ್ರತಿನಿಧಿಯಾದ್ದರಿಂದ ಕೊನೆಯ ಪಕ್ಷ ಧರ್ಮದ ಚೌಕಟ್ಟಿನಲ್ಲಿ ಬೇರೆ ಬೇರೆ ವರ್ಗಗಳ ಕೇಳುಗರನ್ನು ಉದ್ದೇಶಿಸಿ ಬರೆಯುವ ಅವಕಾಶವನ್ನು ಪಡೆದು ಕೊಂಡಿದ್ದ. ಅವನ ಕಾವ್ಯ ಶೈಲಿಯ ದೇಸಿಗತನವನ್ನು ಕೇವಲ ಅವನ ಕಾವ್ಯ ಪ್ರತಿಭೆಯ ದ್ಯೋತಕವೆಂದು ಹೇಳಲಾಗದು. ಅದು ಸಮಾಜದಲ್ಲಿ ನಡೆದ ಸ್ಥಿತ್ಯಂತರಗಳ ಫಲವೂ ಆಗಿತ್ತು. ಕುಮಾರವ್ಯಾಸ ಮೂಲ ಭಾರತದ ಕತೆಯನ್ನು ಕೃಷ್ಣಭಕ್ತಿಯ ಪರಮ ಮೌಲ್ಯದ ಅಭಿವ್ಯಕ್ತಿಗಾಗಿ ಮಾರ್ಪಡಿಸಿಕೊಳ್ಳುತ್ತಾನೆ. ಈ ಮಾರ್ಪಡಿಸಿಕೊಳ್ಳುವ ಕೆಲಸದಲ್ಲಿ ಅವನು ಪಂಪನಿಗಿಂತಲೂ ಹೆಚ್ಚು ತಳಸ್ಪರ್ಶಿ-(Thoroughgoing) ಆಗಿದ್ದಾನೆ. ಆದ್ದರಿಂದಲೇ ಅತ್ಯಂತ ಸಾಮಾನ್ಯ ವಿವರಗಳನ್ನು ಮನುಷ್ಯ ಮತ್ತು ದೇವರ ಸಂಬಂಧಗಳನ್ನು ಶೋಧಿಸುವ ತನ್ನ ಉದ್ದೇಶಕ್ಕಾಗಿ ಬಳಸಿಕೊಳ್ಳುತ್ತಾನೆ. ಕತೆ ಮತ್ತು ಪಾತ್ರ ಚಿತ್ರಣದಲ್ಲಿನ ಮಾರ್ಪಾಟುಗಳ ಜತೆಗೆ ಕಾವ್ಯದ ಪಾತ್ರದಲ್ಲಿಯೂ ಕಾಣುವ ಈ ಉದ್ದೇಶಗಾರಿಕೆಯಿಂದ ಅವನ ಕೃತಿ ಹೆಚ್ಚಿನ ಒಟ್ಟಂದವನ್ನು ತೋರುತ್ತದೆ, ಕುಮಾರ ವ್ಯಾಸನ ಹಿರಿಮೆ ಇರುವುದು ಮನುಷ್ಯ ಸ್ವಭಾವದ ವೈವಿಧ್ಯ ಮತ್ತು ವಿಶಿಷ್ಟತೆಗಳನ್ನು ಒಂದಿಷ್ಟೂ ಬಿಟ್ಟುಕೊಡದೆ ಇಡೀ ಬದುಕನ್ನು ದೈವಿಕತೆಯ ಅಸ್ತಿತ್ವದ ಅಭಿವ್ಯಕ್ತಿಯಾಗಿ ನೋಡುವುದರಲ್ಲಿ. ಆದ್ದರಿಂದಲೇ ಅವನ ಕಾವ್ಯದಲ್ಲಿ ಮನುಷ್ಯನ ನಡುವಳಿಕೆಯ ಹಿಂದಿರುವ ಉದ್ದೇಶಗಳ (Motives) ಸಂಕೀರ್ಣತೆ ಎಲ್ಲಿಯೂ ಕಡಿಮೆಯಾಗುವುದಿಲ್ಲ. ಬದುಕಿನ ಎಲ್ಲ ಕ್ರಿಯೆಗಳು ಕೃಷ್ಣನ ಸಂಕಲ್ಪ ಬಲಕ್ಕೆ ಪಕ್ಕಾಗಿದ್ದರೂ ಕುಮಾರ ವ್ಯಾಸನ ಪಾತ್ರಗಳು ತಮ್ಮ ಸ್ವಭಾವದ ಸ್ವಾತಂತ್ರ್ಯವನ್ನು ಕಳೆದುಕೊಳ್ಳುವುದಿಲ್ಲ. ಕುಮಾರ

ರಾಜೇಂದ್ರ ಚೆನ್ನಿ, ವಿದ್ಯಾನಗರ, ಎರಡನೇ ಕ್ರಾಸ್, ಶಿವಮೊಗ್ಗ.

ವ್ಯಾಸನ ಕಾವ್ಯಭಕ್ತಿ ಸಂಪ್ರದಾಯದ ಮಾನವತಾವಾದಿ ಧೋರಣೆಯ ಅಭಿವ್ಯಕ್ತಿಯೂ ಆಗಿತ್ತು ಎಂದು ಹೇಳಿ ಬಿಡುವಂತಿಲ್ಲ. ಆದರೆ ಪಂಪನ ವೀರರಿಂದ, ಕುಮಾರವ್ಯಾಸನ ಭಕ್ತಿಗೆ ಆದ ಪಲ್ಲಟ ಸಮಾಜ ರಚನೆಯಲ್ಲಾದ ಪಲ್ಲಟಗಳನ್ನು ಸೂಚಿಸುತ್ತದೆಯೆಂದು ಹೇಳಬಹುದು. ಈ ಪಲ್ಲಟದ ಜತೆಗೆ ನಡೆದ ಓದುಗ ವರ್ಗದಲ್ಲಾದ ಬದಲಾವಣೆಗಳು ಕುಮಾರವ್ಯಾಸನ ಕಾವ್ಯ ಶೈಲಿ, ನಿರೂಪಣೆ ಇವುಗಳ ಹರಹಿನಿಂದ ಗೊತ್ತಾಗುತ್ತದೆ.

ಹೊಸಗನ್ನಡ ಸಾಹಿತ್ಯದ ಶುರುವಾತಿನೊಂದಿಗೆ ಬರಹಗಾರ-ಓದುಗ ಸಂಬಂಧಗಳು ಹೆಚ್ಚು ಖಚಿತವಾದ ಅಧ್ಯಯನದ ವಲಯಕ್ಕೆ ಬರುತ್ತದೆ. ಇಂಗ್ಲೀಷ್ ಶಿಕ್ಷಣ, ವಸಾಹತುಶಾಹಿ ಅನುಭವ, ರಾಷ್ಟ್ರೀಯ ಆಂದೋಲನ, ಇವುಗಳು ಸೇರಿ ನಮ್ಮ ಮಧ್ಯಮ ವರ್ಗದ ಅಪೇಕ್ಷೆಗಳನ್ನು ಹಿತಾಸಕ್ತಿಗಳನ್ನು ಅಭಿವ್ಯಕ್ತಿಸುತ್ತ ಬಂದಿದೆ. ಮಧ್ಯಮ ವರ್ಗದ ಒಟ್ಟು ಜೀವನ ದೃಷ್ಟಿಯನ್ನು ರೂಪಿಸುವುದರಲ್ಲಿ ಇಂಗ್ಲೀಷ್ ಶಿಕ್ಷಣದ ಮೂಲಕ ಪ್ರವೇಶಿಸಿದ ಸ್ಥೂಲವಾದ ಉದಾರವಾದಿ, ಮಾನವತಾವಾದ, ಭಾವುಕ ಮತ್ತು ಆದರ್ಶವಾದಿಯಾದ 'ಭಾರತೀಯ ಸಂಸ್ಕೃತಿಯ' ಪುನರುತ್ಥಾನದ ಹಂಬಲ, ವಸಾಹತುಶಾಹಿ ಅನುಭವದಿಂದ ಹುಟ್ಟಿಕೊಂಡ ಗತ ಕಾಲದ ಬಗೆಗಿನ ಮರು ಹಂಬಲ (Nostalgia), ಗಾಂಧೀವಾದದಿಂದ ಹುಟ್ಟಿಕೊಂಡ ಸಮಾಜ ಸುಧಾರಣಾ ಧೋರಣೆಗಳು ಇವೆಲ್ಲವೂ ಮುಖ್ಯ ಪಾತ್ರ ವಹಿಸಿದವು. ಸಾಹಿತ್ಯಕವಾಗಿ ಇಂಗ್ಲೀಷ್ ರಮ್ಯ ಕಾವ್ಯದ ಪ್ರಭಾವ ಕನ್ನಡ ಕಾವ್ಯದ ವಸ್ತು ಮತ್ತು ರೂಪಗಳನ್ನು ಆಮೂಲಾಗ್ರ ಬದಲಾಯಿಸಿತು. ಹೊಸಗನ್ನಡ ಸಾಹಿತ್ಯದ ಹುಟ್ಟಿನ ಸಂದರ್ಭದಲ್ಲಿ ಜಡಗಟ್ಟಿದ ಕಾವ್ಯ ಭಾಷೆ ಮತ್ತು ರೂಪವನ್ನು ಒಡೆಯುವ ಕೆಲಸ ಮತ್ತು ಹೊಸ ಅನುಭವ ದ್ರವ್ಯವನ್ನು ಸ್ವೀಕರಿಸುವ ಕೆಲಸಗಳನ್ನು ನೋಡಿದರೆ ಇತರ ಸಾಹಿತ್ಯಗಳಲ್ಲಿ ನಡೆವ ಕ್ರಾಂತಿಗಳ ಜತೆಗಿನ ಸಾಮ್ಯಗಳು ಕಾಣುತ್ತವೆ. ಆದರೆ ಕುತೂಹಲದ ಸಂಗತಿಯೆಂದರೆ ಇಂಥ ಸಂದರ್ಭಗಳಲ್ಲಿ ಒಡೆದು ಕಾಣುವಂಥ ಮುಂಚೂಣಿ ವರ್ಗವನ್ನು ಇಲ್ಲಿ ಕಾಣಲಾಗುವುದಿಲ್ಲ ಎನ್ನುವುದು. ಹಲವಾರು ಶತಮಾನಗಳ ಸಂಪ್ರದಾಯವನ್ನು ಬುಡದಿಂದಲೇ ಪಲ್ಲಟ ಮಾಡಿದ ಈ ಸಾಹಿತ್ಯಕ ಬದಲಾವಣೆಯ ಮುಂಚೂಣಿಯಲ್ಲಿ ಬಂಡೇಳುವಿಕೆಯೇ ಸತ್ವವಾದಂಥ ವರ್ಗವೊಂದಿರಬೇಕಾಗಿತ್ತು. ಆದರೆ ಮುಂಚೂಣಿ ಮತ್ತು ಓದುಗ ವರ್ಗದ ಮಧ್ಯೆ ನಡೆಯಬೇಕಾಗಿದ್ದ ತಿಕ್ಕಾಟದ ಬದಲು ಹೊಂದಾಣಿಕೆ ಮತ್ತು ತಾದಾತ್ಮ್ಯವನ್ನು ಕಾಣುತ್ತೇವೆ. ಸ್ವತಃ ಹೊಸಗನ್ನಡ ಬರಹಗಾರರು ತಮ್ಮ ಪ್ರಯೋಗಶೀಲತೆಯನ್ನು ಮರೆಮಾಚಿ ಸಂಪ್ರದಾಯದ ಹಿರಿಮೆಯನ್ನೇ ಎತ್ತಿ ಹಿಡಿದರು. ಕನ್ನಡ ಸಂದರ್ಭದ ಈ ವಿಶಿಷ್ಟತೆಗೆ ಕಾರಣಗಳನ್ನು ಸಾಮಾಜಿಕ ಪರಿಸರದಲ್ಲಿಯೇ ಹುಡುಕಬೇಕಾಗುತ್ತದೆ. ರಾಷ್ಟ್ರೀಯತಾ ಆಂದೋಳನದ ಒತ್ತು ಐಕ್ಯತೆಯ ಮೇಲಿದ್ದುದರಿಂದ ಮತ್ತು ಸಾಮಾಜಿಕ ಚಳುವಳಿಗಳು ಪ್ರಭಾವಶಾಲಿಯಾಗಿದ್ದರಿಂದ ಓದುಗ ವರ್ಗವನ್ನು ಎದುರು ಹಾಕಿಕೊಳ್ಳುವ ಬದಲು ಜತೆಗೂಡಿಸಿಕೊಳ್ಳುವ

ಒಲವು ಹೆಚ್ಚಾಗಿತ್ತು. ಆದ್ದರಿಂದಲೇ ವ್ಯಕ್ತಿ ವಿಶಿಷ್ಟತೆಯನ್ನು ಮರೆಯುವ ಇಂಗ್ಲೀಷ್ ರಮ್ಯ ಕಾವ್ಯ ಕನ್ನಡದಲ್ಲಿ ಸಮಷ್ಟಿ ಒಲವುಗಳನ್ನು ನೆಚ್ಚಿಕೊಂಡಂಥ ಕಾವ್ಯವನ್ನು ಹುಟ್ಟು ಹಾಕಿತು. ಇನ್ನೊಂದು ರೀತಿಯಲ್ಲಿ ಹೇಳುವುದಾದರೆ ಮುಂಚೂಣಿ ಮತ್ತು ಓದುವರ್ಗ ಎರಡೂ ಏಕಕಾಲಕ್ಕೆ ಒಂದೇ ಬಗೆಯ ಮೌಲ್ಯ ಪರಿವರ್ತನೆಗೆ ಈಡಾಗಿದ್ದರಿಂದ ಅವು ಗಳ ಮಧ್ಯ ಬಿರುಕು ಹುಟ್ಟಿಕೊಳ್ಳಲಿಲ್ಲ. ಅಂದ ಮಾತ್ರಕ್ಕೆ ಇಂದು ನಾವು ಭ್ರಮಿಸು ವಂತೆ ನವೋದಯ ಕಾವ್ಯ ಸರಳವಾಗಿತ್ತು, ಮತ್ತು ವಿಶಾಲವಾದ ಓದುಗ ವರ್ಗವನು ಪಡೆದಿತ್ತು ಎಂದಲ್ಲ. ಮುಖ್ಯ ಸಂಪ್ರದಾಯಕ್ಕೂ, ಮುಂಚೂಣಿಗೂ ಹೆಚ್ಚಿನ ದೂರವಿರ ಲಿಲ್ಲವೆಂದು ಮಾತ್ರ ಹೇಳಬಹುದು. ಬೇಂದ್ರೆಯವರ ಕಾವ್ಯದ ಒಂದು ಆಯಾಮ ಮಾತ್ರ 'ಸಾಮಾನ್ಯ' ಓದುಗನಿಗೆ ದಕ್ಕುವಂತಿದ್ದರೂ ಅವರ ಕಾವ್ಯದ ಬಂಧ ಸಾಕಷ್ಟು ಸಂಕೀರ್ಣವಾಗಿತ್ತು. ಅವರ ಅನುಭವ ಶೋಧನೆ ಕೂಡ ಇಂದು ನವೋದಯಕ್ಕೆ ಆರೋಪಿಸಲಾಗುವ ಸರಳತೆ, ಏಕಮುಖತೆಯನ್ನು ಹೊಂದಿರಲಿಲ್ಲ. ಬೇಂದ್ರೆ ತಮ್ಮ ಕಾವ್ಯದ ತೆಕ್ಕೆಗೆ ತೆಗೆದುಕೊಳ್ಳುವ ಅನುಭವ ದ್ರವ್ಯ ಯಾವ 'ಅಸಾಮಾನ್ಯ' ಓದುಗನೂ ಬೆಚ್ಚಿ ಬೀಳುವಂತಿದೆ. ಇಷ್ಟಾದರೂ ಬೇಂದ್ರೆ ಮತ್ತು ಇತರ ಕವಿಗಳು ತಮ್ಮನ್ನು ಮುಖ್ಯ ಸಂಸ್ಕೃತಿಯ ವಾಹಕರೆಂದು ಕರೆದುಕೊಂಡರೆ ಹೊರತು, ಹೊಸತರ ಅನ್ವೇಷಕರೆಂದಲ್ಲ. ಮೇಲುನೋಟಕ್ಕೆ ಓದುಗ ವರ್ಗವನ್ನು ಇದ್ದ ಹಾಗೆಯೇ ಸ್ವೀಕರಿಸುವಂತೆ ಕಂಡರೂ ಹೊಸಗನ್ನಡ ಕವಿಗಳು ಓದುಗ ವರ್ಗದ ಸಂವೇದನೆಯಲ್ಲಿ ಅಭೂತಪೂರ್ವ ಸೂಕ್ಷ್ಮತೆ ಗಳನ್ನು ಸಂಕೀರ್ಣತೆಯನ್ನು ಬೆಳೆಸುವ ಮೂಲಕ ಅವರಲ್ಲಿ ಮೂಲಭೂತ ಬದಲಾವಣೆ ಗಳನ್ನು ತಂದರು. 'ಓದುಗ'ನ ಬದಲಾಗಿ 'ಸಹೃದಯ'ನ ಪರಿಕಲ್ಪನೆಗಳನ್ನು ಇಟ್ಟು ಕೊಂಡಿದ್ದು ಇದಕ್ಕೆ ಪೂರಕವಾಗಿತ್ತು.

ಹೊಸಗನ್ನಡ ಸಂದರ್ಭದಲ್ಲಿ ಮುಂಚೂಣಿ ತನ್ನ ಬಂಡಾಯಗಾರ ವ್ಯಕ್ತಿತ್ವವನ್ನು ಬಿಟ್ಟುಕೊಟ್ಟಿದ್ದರಿಂದ ಎಲ್ಲವೂ ಒಳ್ಳೆಯದೇ ಆಯಿತು ಎನ್ನಲು ಬರುವುದಿಲ್ಲ. ಇದ ರಿಂದಾಗಿ ಸಂಪ್ರದಾಯದ ಅರ್ಥಪೂರ್ಣವಾದ ಮುಂದುವರಿಕೆ ಸಾಧ್ಯವಾಯಿತು ನಿಜ. ಆದರೆ ಓದುಗನ ಜತೆಗೆ ಮಾಡಿಕೊಂಡ ಸಮಜಾಯಿಷಿಗಳ ನೇತ್ಯಾತ್ಮಕ ಪರಿಣಾಮ ಗಳನ್ನೂ ಗಮನಿಸಬಹುದು. ಕೆಲವೊಂದು ಸಾರಿ ಭಿನ್ನವಾದದ್ದನ್ನೇನನ್ನೂ ಹೇಳ ಬೇಕಿಲ್ಲವೆಂದು ಸಂತೃಪ್ತರಾಗಿ ಆಗಲೆ ಪಡಿಯಚ್ಚುಗಳಾಗಿದ್ದ ಅನುಭವಗಳನ್ನು ಕೊರೆ ಯುವುದನ್ನು ನೋಡುತ್ತೇವೆ. ದೇಶಪ್ರೇಮ, ಭಾರತೀಯ ಸಂಸ್ಕೃತಿ ಇವುಗಳ ಬಗ್ಗೆ ಯಂತೂ ದಡ್ಡತನದ ಭಾವುಕತೆಯಿಂದ ಬರೆಯುತ್ತಾರೆ. ವರ್ಗ ಪಲ್ಲಟಗಳಿಂದ ಮನುಷ್ಯ ಅನುಭವಗಳ ಹೊಸ ದಿಗಂತಗಳಿಗೆ ತೆರೆದುಕೊಂಡಿದ್ದವು. ಆದರೆ ಪಡಿಯಚ್ಚುಗಳನ್ನು ನೆಚ್ಚಿಕೊಂಡ ಹಲವಾರು ಕವಿಗಳು ಈ ದ್ರವ್ಯದ ಶೋಧನೆಯನ್ನು ಕಾದಂಬರಿಕಾರರಿಗೆ ಬಿಟ್ಟುಕೊಟ್ಟರು. ಕಾವ್ಯ ಏನನ್ನು ಒಳಗೊಳ್ಳಬಲ್ಲದು ಎನ್ನುವ ಬಗ್ಗೆ ಅನಾವಶ್ಯಕವಾದ ಸಂಕೋಚಗಳನ್ನು ನಿರ್ಮಿಸಿಕೊಂಡರು. ಗದ್ಯದ ಸಾಧ್ಯತೆಗಳು ಕಾವ್ಯವನ್ನು ಪ್ರವೇ

ಶಿಸಿದಾಗ ದೊರೆಯಬಹುದಾದ ಹರಹು ದಕ್ಕದೇ ಹೋಯಿತು. ನವೋದಯ ಕವಿಗಳು ಓದುಗನ ಬಗ್ಗೆ ಇಟ್ಟುಕೊಂಡ ಪರಿಕಲ್ಪನೆಯಲ್ಲೂ ಇಬ್ಬಂದಿತನ ಕಾಣುತ್ತದೆ. ಓದುಗ ಸಹೃದಯನಾಗಿದ್ದಾಗ ಸಂವಹನೆಯ ಬಗ್ಗೆ ಹೆಚ್ಚು ತಲೆ ಕೆಡಿಸಿಕೊಳ್ಳದೆ ಅನುಭವಕ್ಕೆ ನಿಷ್ಠರಾಗಿ ಬರೆಯುವುದು ಸಾಧ್ಯವಾಗುತ್ತಿತ್ತು. ಬೇಂದ್ರೆಯವರ ಶ್ರೇಷ್ಠ ಪದ್ಯಗಳು ಯಾವ ರೆಟರಿಕ್ಕಿನ (Rhetoric) ಗೊಂದಲವಿಲ್ಲದೆ ಬಿಚ್ಚಿಕೊಳ್ಳುತ್ತವೆ. ಆದರೆ ಓದುಗ ಭಾವೋದ್ರೇಕಕ್ಕಾಗಿ ಅಥವಾ ಆದರ್ಶದ ಭಾಷಣಗಳಿಗಾಗಿ ತೆಪ್ಪಗೆ ಕಾಯುತ್ತಿರುವ ಸಹ-ಬಾಂಧವನೆಂದುಕೊಂಡು ಬರೆಯುವಾಗ ನವೋದಯ ಕಾವ್ಯ ವಾಚಾಳಿಯಾಗಿ ಬಿಡುತ್ತದೆ. ಓದುಗನನ್ನೂ ನಿಷ್ಕ್ರಿಯಗೊಳಿಸುವ ಇನ್ನೊಂದು ಅಂಶವೆಂದರೆ ಓದುಗನಿಗೆ ಪರಿಚಿತವಿದ್ದ ಧೋರಣೆಗಳನ್ನೆ ಕಾವ್ಯದಲ್ಲಿ ನೀಡುವುದು. ಜತೆಗೆ ಸಾರ್ವಕಾಲಿಕವಾದ ಮನುಷ್ಯ ಸ್ಥಿತಿ ಮಾತ್ರ ಕಾವ್ಯದ ವಸ್ತುವೆಂದುಕೊಂಡಿದ್ದರಿಂದ ಸಮಕಾಲೀನ ಬದುಕಿನ ಸೊಗಡನ್ನು ಕಾವ್ಯ ಪಡೆಯಲಿಲ್ಲ. ಬೈಬಲ್ಲು ಮತ್ತು ಮಿಲ್ಟನನ ಕಾವ್ಯವನ್ನು ಮಾತ್ರ ಅರಗಿಸಿಕೊಂಡಿದ್ದ ಬ್ಲೇಕ್ ಕವಿಯ ಕಾವ್ಯ ಸಂಸ್ಕೃತಿಯ ಒಟ್ಟು ಬದುಕಿನ ಪರಿಭಾಷೆಯಾಗುತ್ತದೆ. ಅಷ್ಟೆ ಅಲ್ಲ ಸಮಕಾಲೀನ ಮತ್ತು ಸಾರ್ವಕಾಲಿಕ ಪಾತಳಿಗಳೆರಡರಲ್ಲೂ ದುಡಿಯುತ್ತ ಇಂದಿಗೂ ತನ್ನ ಪ್ರಸ್ತುತತೆಯನ್ನು ಉಳಿಸಿಕೊಂಡಿದೆ. ರಮ್ಯ ಕಾವ್ಯದಿಂದ ಪ್ರಭಾವಿತವಾದ ನವೋದಯ ಕಾವ್ಯ ಇಂಥ ಅರ್ಥ ವೈಶಾಲ್ಯವನ್ನು ಪಡೆಯಲಿಲ್ಲ.

ನವ್ಯ ಕಾವ್ಯ ಖಂಡಿತವಾಗಿಯೂ ಮುಂಚೂಣಿಯೊಂದರ ಸೃಷ್ಟಿಯಾಗಿತ್ತು. ಮುಖ್ಯ ಸಂಪ್ರದಾಯ ಜಡಗಟ್ಟುವುದು ಕಾವ್ಯದ ರೂಪ ಹೆಪ್ಪುಗಟ್ಟುವುದು ಮತ್ತು ಮೌಲ್ಯ ಕಲ್ಪನೆಯಲ್ಲಿ ಪರಿವರ್ತನೆಯಾಗುವುದು ; ಇವು ಮುಂಚೂಣಿಯ ಹುಟ್ಟಿಗೆ ತಕ್ಕ ಸನ್ನಿವೇಶವನ್ನು ನಿರ್ಮಿಸುತ್ತವೆ. ಕನ್ನಡ ಕಾವ್ಯ ಪರಂಪರೆಯಲ್ಲಿ ಮೊದಲ ಬಾರಿಗೆ ಕಾವ್ಯ ಸಂಪ್ರದಾಯದಲ್ಲಿ ಕಡಿತವುಂಟಾದಂತೆ ಭಾಸವಾಗುತ್ತದೆ. ನವೋದಯದ ಕವಿಗಳು ಸಂಪ್ರದಾಯದ ಬೆಂಬಲವನ್ನು ಅಪೇಕ್ಷಿಸಿದ್ದರೆ ನವ್ಯದ ಹರಿಕಾರರು ಹಳೆಮನೆಯ ಮಂದಿಯೊಂದಿಗೆ ತಕರಾರು ಹೂಡುತ್ತಾರೆ. ಬಳಕೆಯಲ್ಲಿದ್ದ ಕಾವ್ಯ ಮಾರ್ಗ ಅನುಭವ ಶೋಧನೆಗೆ ತೊಡಕಾಗಿದೆ ಎನ್ನುವ ಭಾವನೆಯಿಂದ ಮಾಧ್ಯಮದಲ್ಲಿ ಕ್ರಾಂತಿಕಾರಕ ಬದಲಾವಣೆಗಳನ್ನು ತರ ಹೊರಡುತ್ತಾರೆ. ಸ್ವಾತಂತ್ರ್ಯ ನಂತರದ ಭ್ರಮನಿರಸನ, ಮೌಲ್ಯಗಳ ಅವನತಿ ಮತ್ತು ಮಧ್ಯಮ ವರ್ಗದ ನೀತಿ ಕಲ್ಪನೆಗಳ ಬರಡುತನ ಇವುಗಳಿಂದಾಗಿ ಬರಹಗಾರ ಮತ್ತು ಓದುಗರ ಮಧ್ಯ ಬಿರುಕುಗಳು ಹುಟ್ಟಿಕೊಂಡಿದ್ದವು. ಅಂದರೆ ಇಬ್ಬರೂ ಸಂಸ್ಕೃತಿಯ ಸಾಂಪ್ರದಾಯಿಕ ಚೌಕಟ್ಟಿನೊಳಗೆ ಸೇರಿದ್ದಾರೆ ಎನ್ನುವ ಬದಲು ಈ ಚೌಕಟ್ಟನ್ನೆ ಬದಲಾಯಿಸುವ ಪ್ರಯತ್ನವೇ ಕವಿಯ ಕೆಲಸವಾಯಿತು. ಓದುಗ ವರ್ಗವನ್ನು ಒಳಗೊಂಡ ಸಮಾಜದ ಮೌಲ್ಯ ಕಲ್ಪನೆಗಳನ್ನು ಸಂವೇದನೆಯನ್ನು ವಿರೋಧಿಸಿ ಬರೆಯಬೇಕಾದ್ದರಿಂದ ಕವಿ ತನ್ನ ಛನ್ನತೆಯ ಮೇಲೆ ಒತ್ತು ಕೊಡಬೇಕಾದದ್ದು

ಸಹಜವಾಗಿತ್ತು. ನವ್ಯ ಕವಿಯು ಅಂತರ್ಮುಖಿತೆ ವ್ಯಕ್ತಿವಾದಿ ಧೋರಣೆಗಳು ಸಮಷ್ಟಿಯಿಂದ ಅವನು ವಿಮುಖವಾಗುತ್ತಿದ್ದುದರ ದ್ಯೋತಕವಲ್ಲ; ಸಮಷ್ಟಿಯ ಮೌಲ್ಯ ಕಲ್ಪನೆಗಳ ವಿರುದ್ಧ ತನ್ನ ಮೌಲ್ಯಕಲ್ಪನೆಗಳನ್ನು ರೂಪಿಸಿಕೊಳ್ಳುವ ಅವಶ್ಯಕತೆಯನ್ನು ಎತ್ತಿ ತೋರಿಸುತ್ತವೆ. ಇಂಥ ಪುನಃ ಸೃಷ್ಟಿಯ ಕೆಲಸದಲ್ಲಿ ಓದುಗನನ್ನು ಹೆಚ್ಚು ಸಕ್ರಿಯವಾಗಿ ಪಾಲುಗೊಳ್ಳುವಂತೆ ಮಾಡಲು ಕಾವ್ಯದ ರೂಪದಲ್ಲಿ ಮಾರ್ಪಾಟುಗಳನ್ನು ಮಾಡಿಕೊಳ್ಳುವುದು ಅನಿವಾರ್ಯವಾಯಿತು. ಭಾವಗೀತೆಯಲ್ಲಿ (lyric) ಓದುಗನಿಗೆ ಮಾರ್ಗದರ್ಶಿಯಾಗುವ ಒಂದು ಸಂವಿಧಾನವಿರುತ್ತದೆ. ಆದರೆ ನವ್ಯ ಕವಿತೆಯೊಂದರಲ್ಲಿ ಅನುಭವದ ಸಂವಿಧಾನ ಸಂಕೇತಾತ್ಮಕ (symbolist) ಆಗಿರುತ್ತದೆ. ಅಂದರೆ, ಕವನದಲ್ಲಿ ಪ್ರತಿಮೆಗಳನ್ನು ಜೋಡಿಸುವ ಕೊಂಡಿಗಳು ಇರುವುದಿಲ್ಲ. ಒಂದೊಂದು ಪ್ರತಿಭೆಯೂ ಭಾವನೆ ಮತ್ತು ವಿಚಾರಗಳು ಅನ್ಯೋನ್ಯವಾಗಿರುವ ಒಂದು ಸಂಕೀರ್ಣ ವಲಯವನ್ನು ಸೃಷ್ಟಿಸುತ್ತದೆ. ಈ ವಲಯಗಳ ಪರಸ್ಪರ ಸಂಬಂಧ ನೇರವಾಗಿರದೆ 'ಭಾವನೆಗಳ ತರ್ಕವನ್ನು' (logic of emotions) ಅವಲಂಬಿಸಿರುತ್ತದೆ. ಅಂದರೆ ಇಂಥ ಒಂದು ಪದ್ಯವನ್ನು ಅರ್ಥ ಮಾಡಿಕೊಳ್ಳುವುದೆಂದರೆ ಪದ್ಯದ ಒಂದು ಭಾಗದ ನಂತರದ ಇನ್ನೊಂದನ್ನು ಗ್ರಹಿಸುತ್ತಾ ಹೋಗುವುದಿಲ್ಲ. ಏಕಕಾಲಕ್ಕೆ ಪದ್ಯದ ಎಲ್ಲ ಅಂಗಗಳನ್ನು, ಪದ್ಯದ ಒಟ್ಟು ಧ್ವನಿಯ ಹಿನ್ನಲೆಯಲ್ಲಿ ಅರ್ಥ ಮಾಡಿಕೊಳ್ಳಬೇಕಾಗುತ್ತದೆ. ಪದ್ಯದ ಬಂಧ ಹೀಗಿರುವಾಗ ಓದುವ ಕ್ರಿಯೆ ನಿಷ್ಕ್ರಿಯವಾಗಿ ಸ್ವೀಕರಿಸುವುದಾಗುವುದಿಲ್ಲ. ಸಕ್ರಿಯವಾಗಿ ಅನುಭವದ ಪುನಃ ಸೃಷ್ಟಿಯಲ್ಲಿತೊಡಗುವುದಾಗುತ್ತದೆ. ಹೀಗೆ ಓದುಗನನ್ನು ಸಕ್ರಿಯ ಗೊಳಿಸುವುದರ ಹಿಂದಿರುವ ಉದ್ದೇಶವೆಂದರೆ ಓದುಗ ತನ್ನ ಜಡಗಟ್ಟಿದ ಸಂವೇದನೆಯನ್ನೂ ಒದಿಗಿಟ್ಟು, ಗ್ರಹೀತ ಪರಿಕಲ್ಪನೆಗಳನ್ನು ಬಿಟ್ಟು ಕೊಟ್ಟು ಕಾವ್ಯದ ಅನುಭವವನ್ನು ಪಡೆಯಬೇಕು ಎನ್ನುವುದು. ಸಂಪ್ರದಾಯ ಓದುಗನಲ್ಲಿ ರೂಪಿಸಿದ ಸಂವೇದನೆಯನ್ನು ಕವಿ ತಿರಸ್ಕರಿಸ ಬಯಸುತ್ತಾನೆ ಎನ್ನುವುದು ಇದರಿಂದ ಸ್ಪಷ್ಟವಾಗುತ್ತದೆ. ಇನ್ನೊಂದು ರೀತಿಯಲ್ಲಿ ನೋಡಿದರೆ ಸಂಪ್ರದಾಯದ ನೋಡುವ ಮತ್ತು ಚಿಂತಿಸುವ ಬಗೆಗಳು ತನ್ನ ಅನುಭವದ ಸತ್ವವನ್ನು ಗ್ರಹಿಸಲಾರವು ಎನ್ನುವ ಭಾವನೆ ಇಲ್ಲಿ ವ್ಯಕ್ತವಾಗುತ್ತವೆ. ನವ್ಯ ಕಾವ್ಯದಲ್ಲಿ ಸ್ಥಾಯಿಯಾದ ವ್ಯಂಗ್ಯ ಕೂಡ ಓದುಗ ಮತ್ತು ಬರಹಗಾರನ ಮಧ್ಯದ ಬಿರುಕಿನಲ್ಲಿ ಹುಟ್ಟಿಕೊಳ್ಳುತ್ತದೆ. ಹೇಳುವುದು ಮತ್ತು ಹೇಳಬೇಕಾದದ್ದು ಇವುಗಳ ಮಧ್ಯೆ ಇರುವ ವ್ಯತ್ಯಾಸವೇ ವ್ಯಂಗ್ಯ: ಓದುಗ ಸುಲಭವಾಗಿ ಅಂದುಕೊಳ್ಳಬಹುದಾದದ್ದು ಬರಹಗಾರ ತಾನು ನಿಜವಾಗಿಯೂ ಹೇಳಬೇಕಾದ್ದುದಕ್ಕಿಂತ ಭಿನ್ನವಾಗಿರುವುದನ್ನು ವ್ಯಂಗ್ಯದ ಮೂಲಕ ಸೂಚಿಸುತ್ತಾನೆ.

ಯೂರೋಪಿನ ನವ್ಯ ಸಾಹಿತ್ಯದ ಮುಖ್ಯ ಲಕ್ಷಣವೆಂದರೆ ಹಾಲಿ ಸಂಸ್ಕೃತಿಯ ಬಗೆಗಿನ ತೀವ್ರ ಅಸಹ್ಯ ಮತ್ತು ಅಪನಂಬಿಕೆಯೆಂದು ಅಲ್ಲಿಯ ವಿಮರ್ಶಕರು ಗುರುತಿಸಿದ್ದಾರೆ. ನಮ್ಮಲ್ಲಿ ಈ ತೀವ್ರತೆಯನ್ನು ಕಾಣದಿದ್ದರೂ ಸಂಸ್ಕೃತಿಯ ಪುನರ್

ಮೌಲ್ಯೀಕರಣ ನವ್ಯ ಸಾಹಿತ್ಯದ ಮುಖ್ಯ ಆಶಯವಾಗಿತ್ತು ಎನ್ನುವುದು ಸ್ಪಷ್ಟವಾಗಿದೆ. ಮೊದಲ ಬಾರಿಗೆ ಕನ್ನಡದ ಕವಿ ಸಂಸ್ಕೃತಿಯ ಅಭಿಮಾನಿ ಪ್ರಚಾರಕನಾಗುವ ಬದಲು ಅದರ ವಿಷಮತೆಯನ್ನು ಎಚ್ಚರದಿಂದ ಪರೀಕ್ಷಿಸುವ 'ಶೇಕಡ ಏಳರ ಖಳರಲ್ಲಿ' ಒಬ್ಬ ನಾಗುತ್ತಾನೆ. ಅನಂತಮೂರ್ತಿಯವರ ಸಾಹಿತ್ಯ ಸಂಸ್ಕೃತಿಯ ಮೌಲ್ಯಕಲ್ಪನೆಗಳ ತೀವ್ರವಾದ ವಿಮರ್ಶೆಯಾಗಿದೆ. ತಮ್ಮ ಕಾವ್ಯದ ಹಿಂದಿರುವ ಉದ್ದೇಶಗಳನ್ನು ವಿವರಿಸುತ್ತ ಅಡಿಗರು ಹೀಗೆ ಹೇಳುತ್ತಾರೆ. 'ರೂಢಿಯಾದದ್ದರ' ಒಳಹೊಕ್ಕು ಸಿಡಿ ಮದ್ದಿನ ಹಾಗೆ ಸ್ಫೋಟಿಸಿ ಅದನ್ನು ಅಸ್ತವ್ಯಸ್ತಗೊಳಿಸದೆ ಹೊಸಕಾಲದ ಹೊಸ ಬದುಕಿಗೆ ಅತ್ಯಗತ್ಯವಾದ ಮೌಲ್ಯಗಳನ್ನು ಬೆಳೆಸುವುದು ಸಾಧ್ಯವಾಗುವುದಿಲ್ಲ. ಆದ ಕಾರಣ ಯಾಂತ್ರಿಕ ವ್ಯವಸ್ಥೆಯಲ್ಲಿ ಸೇರಿದ ನಮ್ಮ ಸಂಸ್ಕೃತಿಯ ತಿರುಳನ್ನು ಭೇದಿಸಿ ಮೂಲಬೀಜಗಳನ್ನು ಹೊರತೆಗೆದು ಅದಕ್ಕೆ ಇಂದಿಗೆ ತಕ್ಕ ರೂಪಗಳನ್ನು ಸಿದ್ಧಗೊಳಿಸು ವುದೇ ಬುದ್ಧಿಯ ಮೂಲಕ ಕೆಲಸ ಮಾಡುವವನ ಕರ್ತವ್ಯ. (ಮೊದಲ ಮಾತು, 'ಸಮಗ್ರ ಕಾವ್ಯ').

ನವ್ಯ ಸಾಹಿತ್ಯದ ಹಿಂದಿನ ಸಂಸ್ಕೃತಿಯ ಪುನರ್ ಮೌಲ್ಯೀಕರಣದ ಉದ್ದೇಶ ವನ್ನು ಈ ಹೇಳಿಕೆ ಅತ್ಯಂತ ಸಮರ್ಥವಾಗಿ ವಿವರಿಸುತ್ತದೆ. ನವ್ಯದ ಇತರ ಬರಹ ಗಾರರು ಕನ್ನಡ ಸಾಹಿತ್ಯದಲ್ಲಿ ಇದುವರೆಗೆ ದಾಖಲೆಯಾಗಿರದಿದ್ದ ಅನುಭವ ಸಾಮಗ್ರಿ ಯನ್ನು ಸ್ವೀಕರಿಸುವ ಮೂಲಕ ಸಂಸ್ಕೃತಿಯ, ಸಂವೇದನೆಯ ಹರಹನ್ನು ಹಿಗ್ಗಿಸು ತ್ತಾರೆ. ಅಮೂರ್ತವಾದ ಮಾನವತಾವಾದಿ ಆಶಯಗಳ ಬದಲಾಗಿ ಮನುಷ್ಯನ ಅಸ್ತಿತ್ವದ ಸಂಕೀರ್ಣ ಸ್ಥಿತಿಗಳನ್ನು ಇಡಿಯಾಗಿ ಗ್ರಹಿಸುತ್ತಾ, ಶೋಧಿಸುತ್ತಾ ಬರೆ ಯುತ್ತಾರೆ. ಈ ಶೋಧನೆ ಅತ್ಯಂತ ಮೂರ್ತವಾಗಿ ನಡೆದಾಗ ಅದು ಯಾವ ರೆಟರಿಕ್ಕಿನ ಬೆಂಬಲ ವಿಲ್ಲದೆಯೇ ಓದುಗನ ಸಂವೇದನೆಯನ್ನು ಬದಲಾಯಿಸುತ್ತದೆ. ನವ್ಯ ಸಾಹಿತ್ಯದ ಕಲ್ಪಿತ ಓದುಗ ಬರಹಗಾರನಂತೆಯೇ ಅನುಭವ ಶೋಧನೆಯಲ್ಲಿ ಸಕ್ರಿಯವಾಗಿ ತೊಡಗಿರುತ್ತಾನೆ. ಇಂಥ ಸವಾಲನ್ನು ಎದುರಿಸುವ ಓದುಗರ ಸಂಖ್ಯೆ ಕಡಿಮೆಯಾದ್ದರಿಂದ ನವ್ಯ ಕಾವ್ಯ ಓದುಗ ವಲಯವನ್ನು ಚಿಕ್ಕದಾಯಿಸಿತು ಎನ್ನುವ ಆರೋಪ ಕೇಳಿ ಬರುತ್ತದೆ. ನವ್ಯ ಕಾವ್ಯದ ಸಂಕೀರ್ಣತೆಯನ್ನು ಗುಮಾನಿಯಿಂದ ನೋಡಲಾಗುತ್ತದೆ. ಈ ಆಕ್ಷೇಪಣಗಳ ಇತ್ಯರ್ಥವಿನ್ನೂ ಆಗಿಲ್ಲ. ಆದರೆ ಮಾಧ್ಯಮದ ಸಂಕೀರ್ಣತೆ ನವ್ಯೋತ್ತರ ಸಾಹಿತ್ಯವಲ್ಲಿ ಕಡಿಮೆಯಾಗುವ ಲಕ್ಷಣಗಳಿದ್ದರೂ ಅನುಭವದ ಸರಳತೆ ಮತ್ತು ಏಕಮುಖತೆ ಇನ್ನೆಂದೂ ಒಪ್ಪಿತವಾಗದಂತೆ ಮಾಡಿರುವುದು ನವ್ಯ ಸಾಹಿತ್ಯದ ಸಾಧನೆಯಾಗಿದೆ.

ಹೊಸ ಅನುಭವ ವಲಯಗಳು ಸಾಹಿತ್ಯವನ್ನು ಪ್ರವೇಶಿಸುವ ಸಂದರ್ಭದಲ್ಲಿ ಹಾಲಿ ಸಾಹಿತ್ಯಕ ಸಂಪ್ರದಾಯದ ಬಗ್ಗೆ ಅಸಮಾಧಾನ ಹುಟ್ಟುವುದು ಸಹಜವಾಗಿದೆ.

ಮನುಷ್ಯನ ಅಸ್ತಿತ್ವದ ಸ್ಥಿತಿಗಳನ್ನು–ಮುಖ್ಯವಾಗಿ ತರ್ಕಕ್ಕೆ, ಸರಳ ನೀತಿ ಕಲ್ಪನೆಗಳಿಗೆ ದಕ್ಕದ ಸುಪ್ತ ಪ್ರಜ್ಞೆಯ ಅಳವಿಗೆ ಸೇರಿದ ಸ್ಥಿತಿಗಳನ್ನು ತೆಕ್ಕೆಗೆ ತೆಗೆದುಕೊಂಡ ನವ್ಯ ನವೋದಯದ ಬಗ್ಗೆ ಇಂಥ ಅಸಮಾಧಾನವನ್ನು ತೋರಿಸರು. ಈಗ ಮನುಷ್ಯನ ಸಾಮಾಜಿಕ ಇರವಿಗೆ ಸಂಬಂಧಿಸಿದ ಹೊಸ ಅನುಭವ ವಲಯಗಳು ದಲಿತ ಮತ್ತು ಬಂಡಾಯ ಸಾಹಿತ್ಯದ ಮೂಲಕ ಪ್ರವೇಶಿಸುತ್ತವೆ. ಕುತೂಹಲದ ಸಂಗತಿಯೆಂದರೆ, ಇಂಥ ಸಂದರ್ಭದಲ್ಲಿ ಅನಿವಾರ್ಯವಾಗಬೇಕಾಗಿದ್ದ ಮಾಧ್ಯಮದ ಕ್ರಾಂತಿ, ಹೊಸ ರೂಪದ ಆವಿಷ್ಕಾರ ಇನ್ನೂ ನಡೆದಿಲ್ಲವೆನ್ನುವುದು. ದಲಿತ ಮತ್ತು ಬಂಡಾಯ ಕಾವ್ಯ ನವೋದಯದ ಸರಳ ಸಂವಹನೆ ಮತ್ತು ರೆಟರಿಕ್ಕನತ್ತ ವಾಲುತ್ತಿರುವುದು ಅಷ್ಟೇನೂ ಆರೋಗ್ಯಕರವಲ್ಲ. ಏಕೆಂದರೆ ಅಭಿವ್ಯಕ್ತಿಯ ಸರಳತೆಯ ಜತೆಗೆ ಅನುಭವದ ಸರಳ ಏಕಮುಖತೆಯೂ ಸೇರಿಕೊಳ್ಳುತ್ತಿರುವುದು ಗೋಚರಿಸುತ್ತಿದೆ. ಮುಖ್ಯವಾದ ತೊಡಕಿರುವುದು ಈ ಹೊಸ ಪಂಥಗಳ ಕಲ್ಪಿತ ಓದುಗನ ಬಗೆಗಿನ ಅಪೇಕ್ಷೆಯೇನು ಎನ್ನುವುದರಲ್ಲಿ. ಶೋಷಣೆಯ ಬಗ್ಗೆ ಕಾವ್ಯದ ಮೂಲಕ ಎಚ್ಚರಿಕೆ ಅಥವಾ ಪ್ರಚೋದನೆಯನ್ನು ಕೊಡುತ್ತವೆಯೆಂದು ರೆಟರಿಕ್ಕನ್ನು ಒಳಸಿಕೊಂಡರೆ ಅಷ್ಟರ ಮಟ್ಟಿಗೆ ನಿಜವಾಗಿಯೂ ಓದುಗನನ್ನು ನಿಷ್ಕ್ರಿಯ ಗೊಳಿಸಿದಂತಾಗುತ್ತದೆ. ಅದರ ಬದಲಾಗಿ ಶೋಷಣೆಯೂ ಒಳಗೊಂಡ ಬದುಕನ್ನು ಅನುಭವ ನಿಷ್ಠನಾಗಿ ಶೋಧಿಸುತ್ತಾ ಬರೆದರೆ ಅದನ್ನು ಗ್ರಹಿಸಿ ಬದಲಾಗುವ ಅವಕಾಶ ಓದುಗನಿಗಿರುತ್ತದೆ. ಸಿದ್ಧಲಿಂಗಯ್ಯನವರ ಓದುಗ (ಕೇಳುಗ) ಶೋಷಣೆಯ ವಿರುದ್ಧ, ಪ್ರಚೋದನೆಗಾಗಿ ಕಾಯುತ್ತಾ, ಕಾವ್ಯದ ತಕ್ಷಣದ ಪರಿಣಾಮದಿಂದ ಪ್ರತಿಭಟನೆಗೆ ಮುನ್ನುಗ್ಗಲು ಸನ್ನದ್ಧನಾಗುವ ಸರಳ ಸಾಮಾಜಿಕನಾಗಿರುತ್ತಾನೆ. ಆದರೆ ದೇವನೂರು ಮಹದೇವರ ಓದುಗ ಮಹಾದೇವರ ಜತೆಗೆ ದಲಿತ ಅನುಭವದ ಸಾಧ್ಯತೆಗಳನ್ನು ಸಾವಿರ ವರ್ಷದ ಪರಂಪರೆಯಲ್ಲಿ ಮೊದಲ ಬಾರಿಗೆ ಸಾಕ್ಷಾತ್ಕಾರ ಮಾಡಿಕೊಳ್ಳುತ್ತ ಆ ಬದುಕಿನ ಹಿಂಸೆ ಅವಮಾನದ ಜತೆಗೆ ಅದಮ್ಯ ಚೈತನ್ಯವನ್ನು ಒಂದು ಕಾಣ್ಕೆ(vision)ಯಾಗಿ ನೋಡುವ ಹೊಸ ಮನುಷ್ಯನಾಗುತ್ತಾನೆ. ಸಿದ್ಧಲಿಂಗಯ್ಯನವರ ಓದುಗ ಹಾಲಿ ಸಾಮಾಜಿಕ ಪರಿಸರದ ವಿರುದ್ಧ ಬಂಡೇಳುವ ರೊಚ್ಚಿನಲ್ಲಿರುತ್ತಾನೆ. ಮಹಾದೇವರ ಓದುಗ ದಲಿತ ಅನುಭವಕ್ಕೆ ಪೂರ್ತಿಯಾಗಿ ತೆರೆದುಕೊಂಡು ಹಾಲಿ ಸಂಸ್ಕೃತಿಯ ಪರಿಧಿಗಳನ್ನು ದಾಟಿ ಹೋಗಿ ಬಿಟ್ಟಿರುತ್ತಾನೆ. ಸಿದ್ಧಲಿಂಗಯ್ಯನವರ ಓದುಗ ಇನ್ನೊಂದು ವೇಷದಲ್ಲಿ ಈಗಾಗಲೇ ಕುವೆಂಪು ಅವರ 'ಕಲ್ಕಿ'ಯನ್ನು ಬೇಂದ್ರೆಯವರ 'ಕುರುಡು ಕಾಂಚಾಣ'ವನ್ನು ಕೇಳಿದವನು. ಆದರೆ ಮಹಾದೇವರ ಓದುಗ ಈಗ ತಾನೆ ಪೊರೆ ಕಳಚಿ ಮರುಹುಟ್ಟು ಪಡೆದವನು. ಸಿದ್ಧಲಿಂಗಯ್ಯ ಮತ್ತು ಮಹಾದೇವರು ನವ್ಯೋತ್ತರದ ವಿಭಿನ್ನ ಒಲವುಗಳನ್ನು ಸಂಕೇತಿಸುವುದರಿಂದ ಇಲ್ಲಿ ಬೇಕೆಂತಲೆ ಅತಿಶಯೋಕ್ತಿ ಬಳಸಿದ್ದೇನೆ. ಈ ಅತಿಶಯೋಕ್ತಿಯ ಮೂಲಕ ಒಂದು ಮುಖ್ಯ ಪ್ರಶ್ನೆಯನ್ನು ಎತ್ತಬೇಕಾಗಿದೆ.

ದಲಿತ ಮತ್ತು ಬಂಡಾಯ ಸಾಹಿತಿಗಳ ಪ್ರಗತಿಪರ ನಿಲುವುಗಳು ಮತ್ತು ಪ್ರತಿಪಾದಿಸಬಯಸುವ ಮೌಲ್ಯಗಳ ಬಗ್ಗೆ ಯಾರಲ್ಲೂ ಭಿನ್ನಾಭಿಪ್ರಾಯಗಳಿಲ್ಲ. ಆದರೆ ಓದುಗ ವರ್ಗದ ಪ್ರಗತಿ-ಪರ ಅಪೇಕ್ಷೆಗಳನ್ನು ಅಭಿವ್ಯಕ್ತಿಸುವ ದಲಿತ-ಬಂಡಾಯ ಕಾವ್ಯ ಯಾಕೆ ಇಷ್ಟು ತೆಳುವಾಗಿ, ಕ್ಷಣಿಕ ಪರಿಣಾಮದ್ದಾಗಿ ಮತ್ತು ಕನಿಷ್ಟ ಸಾಹಿತ್ಯಕ ಮೌಲ್ಯದ್ದಾಗಿ ಕಾಣುತ್ತದೆ? ಹೊಸ ಕಾವ್ಯಕ್ಕೆ ಅನುಗುಣವಾಗಿ ವಿಮರ್ಶೆ ತನ್ನ ಸಂವೇದನಾಶೀಲತೆಯನ್ನು ಮಾರ್ಪಡಿಸಿಕೊಂಡಿರಲಿಕ್ಕಿಲ್ಲ ಎನ್ನುವ ಸಂದೇಹವನ್ನು ಮನಸ್ಸಿನಲ್ಲಿಟ್ಟುಕೊಂಡರೂ ಈ ಹೊಸ ಕಾವ್ಯ ಸಾಂಸ್ಕೃತಿಕ ಹಾಗೂ ಸಾಹಿತ್ಯಕ ಅರ್ಥಪೂರ್ಣತೆಯನ್ನು ಒಟ್ಟಿಗೆ ಪಡೆದುಕೊಂಡಿದೆ ಎನಿಸುವುದಿಲ್ಲ. ಒಂದು ಸಂದೇಹವನ್ನು ಪ್ರಚಾರಮಾಡುವ ಕಾವ್ಯಕ್ಕಿಂತಲೂ ನಮ್ಮ ಅನುಭವವನ್ನು ಹಿಗ್ಗಿಸುವ ಕಾವ್ಯ ಹೆಚ್ಚು ತಾಳಿಕೆಯುಳ್ಳದ್ದಾಗಿರುತ್ತದೆ. ಹೀಗೆಂದಮಾತ್ರಕ್ಕೆ ಪ್ರಗತಿಪರವಾದ ನಿಲುವುಗಳುಳ್ಳ ಕಾವ್ಯವೆಲ್ಲವೂ ಪ್ರಚಾರಕಾವ್ಯ ಎನ್ನುವ ಧೋರಣೆಯನ್ನು ನಾವು ತೋರಿಸಬೇಕೆಂದಲ್ಲ. ಓದುಗ ಮತ್ತು ಬರಹಗಾರನ ಸಂಬಂಧದ ಪರಿಭಾಷೆಯಲ್ಲಿ ಇದನ್ನು ವಿವರಿಸಬಹುದಾದರೂ ಇದು ವಿಮರ್ಶೆಯ ಯಾವುದೇ ಜುಜುಬಿ ವಾದದ ಪ್ರಶ್ನೆಯಲ್ಲ. ಬರಹಗಾರ ಅನುಭವದ ಜತೆಗೆ ಯಾವ ಸಂಬಂಧವನ್ನು ಇಟ್ಟುಕೊಳ್ಳುತ್ತಾನೆ ಎನ್ನುವ ನೈತಿಕನಿಲುವಿನ ಪ್ರಶ್ನೆಯಾಗಿದೆ. ವ್ಯವಸ್ಥೆಯ ಕೌರ್ಯ ಮತ್ತು ಭ್ರಷ್ಟತೆಯನ್ನು ಹೊರಗಿನಿಂದ ವರ್ಣಿಸುವ ಕವಿ ಅನುಭವದ ಬಗ್ಗೆ ಅಹಂಕಾರದ, ಸರಳ ಮತ್ತು ಶುಷ್ಕವಾದ 'ನೀತಿಪರ' ಧೋರಣೆಯನ್ನು ತೋರಿಸುತ್ತಾನೆ; ಅನುಭವದ ಆಚೆ ನಿಂತು ಅದರತ್ತ ಬೆರಳು ಮಾಡಿ ತೋರಿಸುವ ಕವಿ ಅನುಭವದ ಬದಲು ಅಭಿಪ್ರಾಯಗಳನ್ನು ಮಾತ್ರ ಕೊಡಬಲ್ಲ, ಶೋಷಕ ಮತ್ತು ಭ್ರಷ್ಟವಾದ ವ್ಯವಸ್ಥೆಯ ಹಿಂಸೆಯನ್ನು ತನ್ನ ಮನಸ್ಸನ್ನೂ ಕೊಳೆಯಿಸುತ್ತಿರುವ ರೋಗವೆಂದು ಅನುಭವಿಸಿ ಬರೆಯುವ ಕವಿ ಹೆಚ್ಚು ಆಪ್ತನಾಗುತ್ತಾನೆ. ವ್ಯವಸ್ಥೆಯಿಂದ ವ್ಯಗ್ರನಾಗುವ, ವಿಹ್ವಲನಾಗುವ ಗಾಢವಾದ ವಿಷಾದವನ್ನು ತೋರುವ ಆದರೆ ಅದರ ಒಡಲಲ್ಲಿ ಬದುಕಿನ ಬೇರುಗಳನ್ನು ತಿದ್ದಬಲ್ಲ, ತನ್ನ ಪ್ರಗತಿಪರ ನಿಲುವುಗಳು ವ್ಯವಸ್ಥೆಯ ಅಮಾನುಷತೆಯಿಂದ ತನ್ನನ್ನು ಹೊರಗಿಟ್ಟಿವೆ ಎನ್ನುವ ದುರಹಂಕಾರದ ಬರಹಗಾರನಿಗಿಂತ ಈ ಎಲ್ಲ ಕಡುಕಿನಲ್ಲಿ ನಾವೆಲ್ಲ ಸಾಮಿಲಾಗಿದ್ದೇವೆ ಎನ್ನುವ ನೈತಿಕ ಜವಾಬ್ದಾರಿ ಹೊತ್ತುಕೊಳ್ಳುವ ಕವಿ ಹೆಚ್ಚು ಮಹತ್ವಪೂರ್ಣನಾಗುತ್ತಾನೆ. ಜತೆಗೆ ಹಾಲಿ ಸಂಸ್ಕೃತಿಯ, ಸಮಾಜ ವ್ಯವಸ್ಥೆಯ ಕೊಳಕನ್ನು ಟೀಕಿಸುತ್ತ satirical ಕಾವ್ಯವನ್ನೆ ಬರೆಯುತ್ತ ಹೋಗಬೇಕೆ ಅಥವಾ ಮನುಷ್ಯನ ಪರವಾದ ಬದುಕಿನ ಒಳಸುಳಿಗಳನ್ನು ಹುಡುಕುತ್ತಾ ನಿಜವಾದ ಸಂಸ್ಕೃತಿಯನ್ನು ಸೃಷ್ಟಿಸುವ ಕೆಲಸದಲ್ಲಿ ತೊಡಗಬೇಕೆ ಎನ್ನುವುದನ್ನೂ ಬರಹಗಾರ ನಿರ್ಧರಿಸಬೇಕಾಗಿದೆ.

ಓದುಗನ ಜತೆಗೆ ತನ್ನ ಸಂಬಂಧಗಳನ್ನು ಗುರುತಿಸಿಕೊಳ್ಳುವ ಬರಹಗಾರನ ಕೆಲಸ ಇಂದು ಇನ್ನೂ ಜಟಿಲವಾಗುತ್ತಿದೆ. ಅಮಾನುಷ ಬದುಕಿನ ಒತ್ತಡಗಳಿಂದಾಗಿ

ನಿಧಾನವಾಗಿ ಬಿಚ್ಚಿಕೊಳ್ಳುವ ಗಂಭೀರ ಸಾಹಿತ್ಯವನ್ನು ಓದುವ ವಿರಾಮವನ್ನೇ ಓದುಗ ವರ್ಗ ಕಳೆದುಕೊಳ್ಳುತ್ತಿದೆ. ಓದುಗನನ್ನು ಒಬ್ಬ ಬಳಕೆದಾರನನ್ನಾಗಿಸಿ ಅವನ ಎಲ್ಲ ತೆವಲುಗಳನ್ನು ಪೂರೈಸುವ ಸರಕುಗಳನ್ನು ಮಾರುತ್ತಿರುವ 'ಜನಪ್ರಿಯ' ಸಾಹಿತ್ಯ ಮತ್ತು ಸಮೂಹ ಮಾಧ್ಯಮಗಳು ಓದುಗನನ್ನು ಕಬಳಿಸಿ ಬಿಡುತ್ತಿವೆ. ಸೃಷ್ಟಿಶೀಲ ಬರಹಗಾರ ಮನುಷ್ಯ ಪರವಾದ ಮೂಲ್ಯಗಳನ್ನು ಇನ್ನೂ ಹುಡುಕುತ್ತಿರಬಹುದು. ಆದರೆ ಹುಡುಕುವ ಯಾವ ಆತಂಕಗಳೂ ಇಲ್ಲದ ವ್ಯವಸ್ಥೆ ತನ್ನ ಪ್ರಜೆಗಳ ಮಿದುಳಿನಲ್ಲಿ ತುರುಕಬೇಕಾದ ಮೌಲ್ಯಗಳನ್ನೂ ಆಗಲೇ ನಿರ್ಧರಿಸಿಕೊಂಡುಬಿಟ್ಟಿದೆ. ರಿಯಾಯಿತಿ ದರದಲ್ಲಿ ಅವುಗಳನ್ನು ಬಿಕರಿ ಮಾಡುತ್ತಿದೆ. ಮೌಲ್ಯಗಳ ಬಗ್ಗೆ ಸಂಕೀರ್ಣವಾದ ನಿಷ್ಕರ್ಷೆ ಸಾಹಿತ್ಯದಲ್ಲಿ ನಡೆಯುತ್ತಿರಬಹುದು. ಆದರೆ ದೂರದರ್ಶನದ ಒಂದೊಂದು ಜಾಹೀರಾತು, ಧಾರವಾಹಿ ಸರಳವಾಗಿ ನೇರವಾಗಿ ವ್ಯವಸ್ಥೆಯನ್ನು ಖಾಯಂ ಆಗಿಡುವ ಮನುಷ್ಯತ್ವವನ್ನು ಊನಗೊಳಿಸುವ 'ಮೌಲ್ಯ'ಗಳನ್ನು ಉಣಿಸುತ್ತಿವೆ. ಸೃಷ್ಟಿಶೀಲರಾಗುವ ಬದಲು ವ್ಯವಸ್ಥೆಯ ಸರಕುಗಳಿಗೆ ಬಳಕೆದಾರರಾಗುತ್ತಿರುವವರೇ ಓದುಗ ವರ್ಗವಾಗಿ ಬಿಟ್ಟರೆ ಸಾಹಿತ್ಯ ಮತ್ತು ಕಲೆ ಖಾಯಂ ಆಗಿ 'ಮುಂಚೂಣಿ'ಯಾಗಿ ಉಳಿದು ಬಿಡುವ ದುರಂತ ಅಸಂಭವವೇನಲ್ಲ: ಫರಕು ಇಷ್ಟೆ. ಮುಂಚೂಣಿಯ ಹಿಂದೆ ಯಾರೂ ಇರುವುದಿಲ್ಲ.

ಅಕ್ಟೋಬರ್ 18, 1986

ಗ್ರಂಥ ಋಣ :

1) Literary Modernism : Ed. Ining Howe
(ಮುಂಚೂಣಿ 'ovant garde' ಬಗೆತನ ಚರ್ಚೆ ಈ ಸಂಕಲನದ ಲೇಖನಗಳನ್ನು ಆಧರಿಸಿದೆ)

2) ಆಧುನಿಕ ಭಾರತೀಯ ಸಾಹಿತ್ಯ ಮತ್ತು ಇತರ ಲೇಖನಗಳು :
ಎಂ.ಜಿ. ಕೃಷ್ಣಮೂರ್ತಿ

3) ಹೊಸಗನ್ನಡ ಕಾವ್ಯದ ಎರಡು ಮಾರ್ಗಗಳು :
ಸಂ, ಜಿ.ಎಸ್, ಶಿವರುದ್ರಪ್ಪ

ಉ—ಭಯ

ಅತೃಪ್ತಿ ಕಳವಳ ಪ್ರೀತಿ ಮನುಷ್ಯತ್ವಗಳ ಜಗ್ಗಾಟ
ದಲ್ಲಿ ಹೇಡಿಯಾದೆ. ನಿದ್ದೆ ಇಲ್ಲದ ರಾತ್ರಿಗಳು
ಹೇಗೆ ಕಳೆಯಲಿ ಬದುಕೇ ?

ತೊಡಿಸಿದ ನಿಗಳ ಸಂಪ್ರದಾಯ ಎದೆಭಾರ
ಹೊತ್ತ ನೊಗವದು ಕ್ರೂರ ಒದ್ದಾಟ
ಹೇಗೆ ಕಳೆಯಲಿ ಬದುಕೇ ?

ಹೃದಯ ನೇವರಿಸಿ ಕಾಡುವ ಕೊಳಲು
ಪ್ರೀತಿ ಗೀತೆಗೆ ಹಾತೊರೆವ ಅಳಲು
ಕಳೆಯಲಿ ಹೇಗೆ ಬದುಕೇ ?

ಹತ್ತು ವರ್ಷಗಳ ಪರ್ಯಂತ ಉತ್ತಿದ್ದ ನೆಲದಲ್ಲಿ
ಉಕ್ಕಿ ಚೆಲ್ಲಿದ್ದು ಸಾವಿರದ ಬೆಂಕಿ
ವ್ಯರ್ಥ ಹಗಲಿನ ನಿಗಳ ಬದುಕೇ ?

ಗೊಂಡೆ ಮುತ್ತಿನ ಹೊಡೆ ಬಿತ್ತು ನೆಲದಾಯಿ
ಪ್ರೇಮ ಜಲ ಫಲ ತಾರಿಣಿ ರಾಣಿ
ಹೇಗೆ ಮರೆಯಲಿ ಕ್ಷಣವ ಬದುಕೇ ?

ನಿದ್ದೆ ಇಲ್ಲದ ರಾತ್ರೋ ರಾತ್ರಿಗಳು
ಹೇಗೆ ಕಳೆಯಲಿ ಬದುಕೇ ?

—ಗೆ,

ಜನ ಹೇಳುತ್ತಾರೆ ಸಾವಿರದ ಮಾತು
ಯಾರಿಗೆ ಬೇಕು ಗೆಳತಿ ?
ನಕ್ಕ ಚಿಕ್ಕಿಗೆ ಹಗಲು ಸಾಕ್ಷಿಯೇ ?

ಎಸ್.ಜಿ. ಸಿದ್ಧರಾಮಯ್ಯ, ಕನ್ನಡ ಅಧ್ಯಾಪಕ, ಸರಕಾರಿ ಕಲಾ ಕಾಲೇಜ್, ತುಮಕೂರು

ಬೇಲಿಸಾಲಿನ ನೆರಳು ನರಳಿ ಉಸುರಿದ ಆಳದಾಳದ ನಲಿವು
ನಿನ್ನ ನೆನಪು

ಎರೆಹೊಲದ ನಿರಿನಿರಿ ತುಂಬಿ ಬಿತ್ತಿ ಬೆಳೆದಿಹ ಮುತ್ತು
ನಿನ್ನ ನೆನಪು

ಹೊಳೆದಂಡೆಯ ಹೂ ಬಳ್ಳಿ ಅರಳಿ ಘಮಘಮಿಸಿದಾ ಗಂಧ
ನಿನ್ನ ನೆನಪು

ಮೂಡು ನೇಸರ ಬಣ್ಣ ಬೂದಿಯ ಬೆಳಗಿನ ಬದುಕು
ನಿನ್ನ ಬದುಕು

ಜನ ಹೇಳುತ್ತಾರೆ ಸಾವಿರ ಮಾತು
ಯಾರಿಗೆ ಬೇಕು ಗೆಳತಿ ?

—ಎಸ್. ಜಿ. ಸಿದ್ಧರಾಮಯ್ಯ

ಸ್ಥಿತ್ಯಂತರ

ಇದ್ದವರ ಮಧ್ಯೆ ಇಲ್ಲದವರಂತೆ ನಾವು
ಇದ್ದೂ ಇಲ್ಲದಂತಾಗಿದ್ದರೂ,
ಇಲ್ಲದವರೇನಲ್ಲ; ಇಲ್ಲ
—ದನೆಲ್ಲ ಇದ್ದವರೆನ್ನುವವರೂ ಅಲ್ಲ
ಇಲ್ಲದಿದ್ದರೂ ಇದೆಯೆನಿಸಿಕೊಳ್ಳುವಲ್ಲಿ
ಇದ್ದದ್ದನೆಲ್ಲಾ ಇಲ್ಲವಾಗಿಸಿಕೊಳ್ಳುತ್ತಾ
ಇದ್ದರೂ ಇಲ್ಲದಂತಾಗಿದ್ದೇವೆ;
ಇಲ್ಲದಿರೆ, ಇದ್ದವರ ಮಧ್ಯೆ
ಇದ್ದರೂ ಇಲ್ಲದಂತಾಗಿಬಿಡಬಹುದು !!

—ಶೈಲೇಂದ್ರ|ಬಂದಗದ್ದೆ

ಶೈಲೇಂದ್ರ ಬಂದಗದ್ದೆ, ಬಂದಗದ್ದೆ, ಕೆಳದಿ ಅಂಚೆ ಸಾಗರ-ಶಿವಮೊಗ್ಗ ಜಿಲ್ಲೆ.

ತೆರೆ

ಗುಬ್ಬಚ್ಚಿಯು ಬೆದರುಧ್ಯಾನದಲ್ಲಿ
ಹೇಳಹೆಸರಿಲ್ಲದೆ ಓಡಿಹೋಗಿತ್ತು
ಕಣ್ಣ ಚುಚ್ಚುವ ನೆನಪು
ಬೆಚ್ಚನೆಯ ಹುಲ್ಲುಗರಿ ಮನೆಯೆಲ್ಲಾ
ನೆಟ್ಟಗೆ ಕುಳಿತು ತೂಕಡಿಸಿದರೆ
[illegible] ಏನೇನೋ ಹಾಳು ನೆನಪು
ಬೆಚ್ಚಿ ಎಚ್ಚೆತ್ತು ಕಣ್ಬಿಚ್ಚಿ
ಹೊರಗಿಣಕಿದರೆ;
ಕಣ್ಣು ಮಂಜೊಳಗೆ ಕೆಳಗೆಲ್ಲಾ ಕಲೆಸಿದಂತಿತ್ತು
ಪಾಳು ಬಾವಿಯ ಒಳಗೆ ಇರುವುದು ನೀರೆ ?
ಅಸ್ಪಷ್ಟ ಆಲೋಚನೆಗಳಿಗೆ
ಬೆದರಿದ ಮರಿ
ಪುಳಕ್ಕನೆ ಹೊರಬಂದು
ಗರಿಬಿಚ್ಚಿ ಹಾರಿತು.

ಉಪ್ಪು-ಮರಳು

ನಾನು ನದಿ, ನೀನು ತೀರ
ಎಂಬ ಸಿನೀಮಯುದ
ಧಾಟಿಯಲ್ಲಿ ಹಾಡುತ್ತಾ
ಮನಸುತ್ತುವ ಕನಸುಗಳ
ಹೊತ್ತು ಮುಗಿದು ಹೋಗಿದೆ;
ಗೆಳತಿ;
ಈಗ ಉಳಿದಿರುವುದಿಷ್ಟು
ನದಿಯಲ್ಲಿ ಬರೀ ಉಪ್ಪುನೀರು
ತೀರದುದ್ದಕ್ಕೂ ರಾಶಿ-ರಾಶಿ
ಮರಳ ಕಣ.

— ಸುಜಾತ.

ಸುಜಾತ, ಕನ್ನಡ ಅಧ್ಯಾಪಕಿ, ಮಹಾರಾಣಿ ಕಲಾಕಾಲೇಜು, ಶೇಷಾದ್ರಿ ರಸ್ತೆ, ಬೆಂಗಳೂರು-1

ಪ್ರಾಚೀನ ಕರ್ನಾಟಕ ಇತಿಹಾಸ—ರಚನೆಯ ಸಿದ್ಧಿಸೋಲು

—ಪ್ರೊ. ಶೆಟ್ಟರ್

ಕಳೆದ ಶತಮಾನದ ಒಂಭತ್ತರ ದಶಕದಲ್ಲಿ ಆರಂಭವಾದ ಕರ್ನಾಟಕ ಇತಿಹಾಸ ರಚನಾಕಾರ್ಯ ಈಗ ಸರಿಯಾಗಿ ಒಂದು ಶತಮಾನದ ಇತಿಹಾಸವನ್ನು ಪಡೆದಿದೆ. ಈ ಒಂದು ಶತಮಾನದಲ್ಲಿ ನಮ್ಮ ನಾಡಿನ ಇತಿಹಾಸಕ್ಕೆ ಸಂಬಂಧಿಸಿದ ಹೇರಳ ಆಕರ-ಸಾಮಗ್ರಿ ಹೊರಬಂದಿದೆ. ಶಾಸನ, ನಾಣ್ಯ, ಪ್ರಾಕ್ತನ ಅವಶೇಷಗಳು, ಸಾಹಿತ್ಯ, ಪತ್ರಾಗಾರಾದ ಸಾಮಗ್ರಿ, ಜನಪದ ಹಾಗೂ ಸ್ಥಳೀಯ ಮೂಲದ ಆಕರ, ವಿದೇಶಿಯರ ಮೂಲದಿಂದ ಬಂದ ವರದಿಗಳು, ಮುಂ. ಮುಂ. ಇವೆಲ್ಲವುಗಳ ಸ್ಥೂಲ ಕಲ್ಪನೆ ಇಂದು ನಮಗಾಗಿದೆ.

ಕರ್ನಾಟಕದ ಇತಿಹಾಸವನ್ನು ನಾವು ಹೇಗೆ ವಿಭಾಗಿಸಿ ಅಭ್ಯಸಿಸಬೇಕೆನ್ನುವುದರ ಬಗ್ಗೆ ಸಹಮತ ಇರಲು ಸಾಧ್ಯವಿಲ್ಲ. ಆದರೆ ಅದು ಬೆಳೆದು ಬಂದ ಬಗೆಯನ್ನು ನಾವು ಸ್ಥೂಲವಾಗಿ ಗುರುತಿಸಬಹುದು. ಆಕರಗಳ ಸಂಗ್ರಹದ ಅಂಗವಾಗಿ ಆರಂಭವಾದ ಇತಿಹಾಸರಚನೆಯ ಕಾರ್ಯದ ಮೊದಲ ಘಟ್ಟದ ಪೂರ್ಣಶ್ರೇಯಸ್ಸು ವಿದೇಶೀ ಪೌರಾತ್ಯಪಂಡಿತರಿಗೆ ಸಲ್ಲುವುದು. ಅವರು ತಮ್ಮ ವೈಜ್ಞಾನಿಕ ಆಸಕ್ತಿ ಅರ್ಹತೆಯಿಂದಲೂ, ಸ್ಥಳೀಯ ಪಂಡಿತರನ್ನು ಸಮರ್ಪಕವಾಗಿ ದುಡಿಸಿಕೊಳ್ಳುತ್ತಲೂ, ಈ ಕಾರ್ಯವನ್ನು ಕಳೆದ ಶತಮಾನದ ಉತ್ರರಾರ್ಧದಲ್ಲಿ ಆರಂಭಿಸಿದರು. ಪೌರಾತ್ಯ ಪಂಡಿತರೊಡನೆ, ಆಡಳಿತ ವರ್ಗದೊಡನೆ, ಅಂದಿನ ಅರಸುಮನೆತನಗಳ, ಆಸ್ಥಾನಗಳ, ಅಂತಃಪುರಗಳೊಡನೆ, ಸಂಪರ್ಕ ಇಟ್ಟುಕೊಂಡಿದ್ದ ನಮ್ಮ ಸಮಾಜದ ಒಂದು ವರ್ಗದ ಸ್ಥಳೀಯರಿಗೆ ಮಾತ್ರ, ಈ ಕಾರ್ಯದಲ್ಲಿ ಪಾಲ್ಗೊಳ್ಳಲು, ಈ ಕಾರ್ಯಕ್ಷೇತ್ರವನ್ನು ಗುರುತಿಸಿಕೊಂಡು ಕ್ರಮೇಣ ಅದನ್ನು ತಮ್ಮದನ್ನಾಗಿ ಮಾಡಿಕೊಳ್ಳಲು ಸಾಧ್ಯವಾಯಿತು, ಸುಮಾರು ಅರ್ಧಶತಮಾನಕಾಲದ ನಂತರ ಸ್ಥಳೀಯ ಪಂಡಿತರಿಂದ ಕರ್ನಾಟಕದ ಇತಿಹಾಸ ರಚನೆ ಆರಂಭವಾಯಿತು. ಈ ಶತಮಾನದ 3-4ನೆಯ ದಶಕಗಳಲ್ಲಿ ಆರಂಭವಾದ ಈ ಕಾರ್ಯ ತುಂಬಾ ನಿಧಾನಗತಿಯಲ್ಲಿ ಸಾಗಿ 6ನೇ ದಶಕದವರೆಗೂ ತುಂಬಾ ಸೀಮಿತ ಹಂತದಲ್ಲಿಯೇ ಮುಂದುವರಿದು, ತನ್ನಲ್ಲಿಯೇ ತಾನು ತೃಪ್ತಿ ಕಂಡು

ಪ್ರೊ. ಶೆಟ್ಟರ್, ನಿರ್ದೇಶಕರು, ಭಾರತೀಯ ಕಲಾ ಇತಿಹಾಸ ಸಂಸ್ಥೆ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

ಕೊಂಡಿತು. ಇತಿಹಾಸ ಬರೆಯುವುದು ಒಂದುವರ್ಗದ ಸ್ವಾಮ್ಯವಾಗಿದ್ದರೆ ಅದು ಅಂದಿನ ಸಾಮಾಜಿಕ ಅನಿವಾರ್ಯತೆ ಎಂದೇ ಪರಿಗಣಿಸಬೇಕು. ಆದರೆ, ಇತಿಹಾಸದ ಕಲ್ಪನೆ ಹಾಗೂ ಕೃಷಿಯ ವಿಧಾನವೂ ಸ್ಥೂಲವಾಗಿ ಒಂದೇ ಸಂಪ್ರದಾಯ ಹಿಡಿದದ್ದು ಅಷ್ಟೊಂದು ಸುಲಭವಾಗಿ ತಿಳಿಯಲಾರದ ವಿವರ. ಅರಸುಮನೆತನಗಳ ಇತಿಹಾಸವೇ ಕರ್ನಾಟಕ ಇತಿಹಾಸವಾಗಿ, ಅಂದಿನ ಸ್ವಾತಂತ್ರ್ಯ ಆಂದೋಲನಕಾರರಿಗೆ ಹಾಗೂ ಮುಂದೆ ಬಂದ ಭಾಷಾವಾರು ಪ್ರಾಂತ ನಿರ್ಮಾಣದ ಅಭಿಲಾಷಿಗಳಿಗೆ, ತುಂಬ ಅಭಿರುಚಿಯ ವಸ್ತುವಾಗಿ ಬಿಟ್ಟಿತು. ಇದರ ಅಂಗವಾಗಿಯೇ ಹಲವು ಅರಸುಮನೆತನಗಳ ಇತಿಹಾಸ ಹೆಚ್ಚು ಆಕರ್ಷಣೆ ಪಡೆದುಕೊಂಡು, ಅಂತಹ ಮನೆತನಗಳು ನಮ್ಮ ಪರಂಪರೆಯ ಪ್ರಮುಖ ಅಂಗವೆಂಬ ಪ್ರತಿಪಾದನೆಗೆ ಪ್ರಚೋದಕವಾದವು. ಈ ನಾಡಿನ ಅರಸುಮನೆತನಗಳಲ್ಲಿ ವಿಜಯನಗರ ಸಾಮ್ರಾಜ್ಯಕ್ಕೆ ಹೆಚ್ಚಿನ ಸ್ಥಾನ ದೊರೆತದ್ದು, ಇದೂ ಒಂದು ಕಾರಣ. ಬ್ರಿಟೀಷರ ವಿರುದ್ಧ ಹೋರಾಡಿದ ಟೀಪೂ, ಸಂಪ್ರದಾಯ ಪಂಡಿತರಿಗೆ ಆಶ್ರಯವೀಯುತ್ತಾ ಬಂದ ಮೈಸೂರು ಮನೆತನ, ದಕ್ಷಿಣ ಕರ್ನಾಟಕದಲ್ಲಿ ಹೆಚ್ಚು ಆಕರ್ಷಿತವಾದರೆ, ಸ್ವಾತಂತ್ರ್ಯ ಹೋರಾಟಕ್ಕೆ ನಾಂದಿ ಹಾಕಿದರೆನ್ನಲಾದ ಹಲವು ಸ್ಥಳೀಯ ನಾಯಕರ, ಪಾಳೇಗಾರರ ಮನೆತನಗಳ ಇತಿಹಾಸ ಉತ್ತರ ಕರ್ನಾಟಕದಲ್ಲಿ ಹೆಚ್ಚು ಆಸಕ್ತಿಯನ್ನು ಕೆದಕಿದವು.

ಅಂದರೆ ಮೂರು ಹಂತಗಳಲ್ಲಿ ಬರೆದ ಇತಿಹಾಸ–ಇಲ್ಲವೇ ಮೂರು ಹಂತಗಳೇ ಕರ್ನಾಟಕದ ಇತಿಹಾಸ–ಇಂದು ನಮ್ಮ ಮುಂದೆ ಇರುವವು. ಅವು-

೧. ಪುರಾತನ ಕಾಲದಿಂದ ಹೊಯ್ಸಳರ ಆಳ್ವಿಕೆಯ ಅಂತ್ಯದವರೆಗಿನ ಇತಿಹಾಸ ಅಥವಾ ವಿಜಯನಗರ ಪೂರ್ವಕಾಲದ ಇತಿಹಾಸ.

೨. ವಿಜಯನಗರ ಕಾಲದ ಇತಿಹಾಸ; ಮತ್ತು

೩. ವಿಜಯನಗರ ಕಾಲಾನಂತರದ ಇತಿಹಾಸ.

ಈ ಮೂರು ಹಂತಗಳ ಇತಿಹಾಸವು ನಡೆದುಬಂದ ಬಗೆಯನ್ನು ನಾವು ಮೊದಲು ಗುರುತಿಸಿಕೊಂಡು, ಅದರ ನಿಜಸ್ವರೂಪವನ್ನು ಅರಿತುಕೊಳ್ಳುವ ಅವಶ್ಯಕತೆ ನಮ್ಮ ಅವಶ್ಯಕತೆಗಳಲ್ಲಿ ಒಂದಾಗಿದೆ. ಆದರೆ ಈ ಮೂರು ಹಂತಗಳ ಇತಿಹಾಸದ ಸಮಗ್ರ ಸಮೀಕ್ಷೆಗೆ ಇಲ್ಲಿ ಸ್ಥಳಾವಕಾಶವಾಗಲೀ-ಕಾಲಾವಕಾಶವಾಗಲೀ ಇಲ್ಲ. ಕಾರಣ ನಾನು ಮೊದಲ ಹಂತವನ್ನು ಮಾತ್ರ ಕೈಗೆತ್ತಿಕೊಂಡು ಉಳಿದವನ್ನು ತಮ್ಮ ವೈಜ್ಞಾನಿಕ ಸಮೀಕ್ಷೆಗೆ ಒಪ್ಪಿಸುವೆ.

ವಿಜಯನಗರ ಪೂರ್ವದ ಇತಿಹಾಸದೊಡನೆ, ಸಮಗ್ರ ಕರ್ನಾಟಕ ಇತಿಹಾಸ, ಅಥವಾ 'ಸರ್ವೇ'ತರದ ಇತಿಹಾಸ-ಸಂಪುಟಗಳನ್ನೂ ನಾನಿಲ್ಲಿ ಸಮೀಕ್ಷೆಗೆ ತೆಗೆದುಕೊಳ್ಳ ಬಯಸುವೆ.

ಕರ್ನಾಟಕ ಇತಿಹಾಸ ಸಂಸ್ಕೃತಿ, ಈ ಎರಡನ್ನೂ ಸ್ಥೂಲವಾಗಿ, ಸಮರ್ಪಕವಾಗಿ; ಸುಲಲಿತವಾಗಿ, ಪರಿಚಯಿಸುವ ಒಂದು ಗ್ರಂಥವಾಗಲೀ, ಹಲವು ಸಂಪುಟಗಳ ಒಂದು ಗ್ರಂಥ ಮಾಲೆಯಾಗಲೀ, ಇನ್ನೂ ನಮಗೆ ಲಭ್ಯವಿಲ್ಲವೆಂಬುದನ್ನು ನಾವು ಮೊದಲು ಗುರುತಿಸಿಕೊಂಡರೆ, ನಮ್ಮ ಪರಿಸ್ಥಿತಿಯ ಪರಿಪೂರ್ಣ ಕಲ್ಪನೆ ನಮಗಾಗುವುದು. Comprehensive History of Karnataka ಎಂಬ, ಇಲ್ಲವೇ Concise History of Karnataka ಎಂಬ, ಶಿರೋನಾಮೆಯಿಂದ ಇಲ್ಲಿಯವರೆವಿಗೂ ಪ್ರಕಟಗೊಂಡಿರುವ ಗ್ರಂಥಗಳು ವಿದ್ಯಾರ್ಥಿಗಳ ಅವಶ್ಯಕತೆಯನ್ನು ಹೇಗೋ ಒಂದು ಬಗೆಯಲ್ಲಿ ಪೂರೈಸುವ ಪಠ್ಯ ಪುಸ್ತಕಗಳಾದುದರಿಂದ ಅವುಗಳನ್ನು ಗಹನಾತ್ಮಕವಾಗಿ ಸಮೀಕ್ಷಿಸುವ ಅವಶ್ಯಕತೆಯನ್ನು ನಾನು ಕಾಣಲಾರೆ. ಆದರೆ ಕರ್ನಾಟಕ ಇತಿಹಾಸ ರಚನೆಯ ಕೃಷಿ ಆರಂಭವಾಗಿ ಈಗ ಸರಿಯಾಗಿ ಒಂದು ಶತಮಾನ ಪೂರ್ಣಗೊಂಡಿದ್ದನ್ನು ನಾವು ಮರೆಯುವಂತಿಲ್ಲ. ಈ ಶತಮಾನದ ಐದನೆಯ ದಶಕದಲ್ಲಿ ನಾನು ಸ್ನಾತಕೋತ್ತರ ವಿದ್ಯಾರ್ಥಿಯಾಗಿದ್ದಾಗ, ಹಯವದನರಾವ್ ಸಿದ್ಧ ಪಡಿಸಿದ ಮೈಸೂರು ಗೆಜೆಟೀರ್‌ದಿಂದ ಮಾತ್ರ ಕರ್ನಾಟಕ ಇತಿಹಾಸವನ್ನು ಸ್ಥೂಲವಾಗಿ, ಸುಲಭವಾಗಿ ತೆಗೆದುಕೊಳ್ಳಲು ನಮಗೆ ಸಾಧ್ಯವಾಗುತ್ತಿತ್ತು, ೧೯ನೆಯ ಶತಮಾನ ದಲ್ಲಿ ಪ್ರಕಟಗೊಂಡಿದ್ದ ಜೆ. ಎಫ್. ಫ್ಲೀಟ್ ಮತ್ತು ಆರ್. ಜಿ. ಭಂಡಾರ್‌ಕರ್ ಅವರ ಗ್ರಂಥಗಳು ತುಂಬಾ ಖ್ಯಾತಗೊಂಡಿದ್ದರೂ, ಅವು ನಮ್ಮ ಕೈಗೆ ನಿಲುಕದ ಗ್ರಂಥಗಳಾಗಿರಲಿಲ್ಲ. ಕಾರಣ ಅವನ್ನು ಓದುವ ವಿದ್ಯಾರ್ಥಿಗಳ ಸಂಖ್ಯೆ ಬಹಳ ವಿರಳವಾಗಿತ್ತು, ಫ್ಲೀಟ್ ಅವರ ೧೦೦ ಪುಟಗಳ ಚಿಕ್ಕ ಹೊತ್ತಿಗೆ ಮುಂಬೈ ಗೆಜೆಟಿರ್‌ಗಾಗಿ ಸಿದ್ಧಪಡಿಸಲಾದ ಐತಿಹಾಸಿಕ ಮುನ್ನುಡಿ; ಕರ್ನಾಟಕದ ಪ್ರಮುಖ ರಾಜ ಮನೆತನಗಳ ಇತಿಹಾಸದ ರೂಪರೇಷೆಯನ್ನಿತ್ತು, ಸುಮಾರು ಕ್ರಿ. ಶ. ೫ನೆಯ ಶತಮಾನದ ಮಧ್ಯದಿಂದ ೧೬ನೆಯ ಶತಮಾನದವರೆಗಿನ ಕಾಲಾವಧಿಯ ಇತಿಹಾಸವನ್ನು, ಪ್ರಮುಖವಾಗಿ ಅಂದಿನವರೆಗೂ ಶೋಧಿಸಲಾದ ಶಾಸನಗಳ ಆಧಾರದ ಮೇಲೆ ಅವರು ನಿರೂಪಿಸಿದ್ದರು. ಫ್ಲೀಟ್ ಅವರ ಗುರಿ ಅಲ್ಲಿಯವರೆಗೂ ಅಪರಿಚಿತವಾದ ರಾಜ ಮನೆತನಗಳ ಇತಿಹಾಸ ಅಥವಾ ರಾಜಕೀಯ ಇತಿಹಾಸ ರಚನೆಯಾಗಿತ್ತು. ಆದರೆ ಶಾಸನಲಿಪಿ ಮತ್ತು ಭಾಷೆಯ ಬೆಳವಣಿಗೆಯನ್ನೂ ಹಳೆಯ ಕಾಲದ ಮತಗಳು ಅಳಿದು, ಹೊಸ ಮತಗಳು ಬೆಳೆದ ಬಗೆಯನ್ನೂ, ಅವರ ಕಾಲದವರೆಗೂ ಉಳಿದು ಬಂದಿದ್ದ ಭೂ-ಗೇಣಿಯ ಬಗೆ ಹಾಗೂ ಆಡಳಿತ ವಿಭಾಗಗಳ ಚರಿತ್ರೆಯನ್ನೂ, ಅಲ್ಲದೆ ಇನ್ನಿತರ ಅನೇಕ ಐತಿಹಾಸಿಕ ಹಾಗೂ ಕುತೂಹಲಕಾರಿ ವಿಷಯಗಳನ್ನು ಅವರು ಸಂಗ್ರಹಿಸಲು ಪ್ರಯತ್ನ ಪಟ್ಟಿದ್ದರು.

"ಈ ಭೂ ಪ್ರದೇಶದಲ್ಲಿ ಒಬ್ಬರ ನಂತರ ಮತ್ತೊಬ್ಬರು ಬಂದು ಆಳಿದ ಅರಸು ಮನೆತನಗಳ ಇತಿಹಾಸವೇ, ಪುರಾತನ ಕಾಲದ ಇತಿಹಾಸವೆಂದು ಈಗಿನ ಮಟ್ಟಿಗೆ ಪರಿಗಣಿಸಬೇಕಾಗಿದೆ", ಎಂದು ಅವರು ಅಭಿಪ್ರಾಯ ಪಟ್ಟಿದ್ದರು. "ಸಾಮಂತ ಸರಕಾರಗಳು, ಬೇರೆ ಬೇರೆ ಆಡಳಿತ ವಿಭಾಗಗಳು ಒಳಗಾದ ಸ್ಥಿತ್ಯಂತರಗಳು, ಬೌದ್ಧ ಹಾಗೂ ಜೈನ ಮತಗಳ ಅವನತಿ, ಶೈವ ಮತ-ಅದರಲ್ಲೂ ಲಿಂಗಾಯತ ಮತದ ಬೆಳವಣಿಗೆ-ಈ ಬಗೆಯ ವಿಷಯಗಳ ವಿವರಗಳನ್ನಿನ್ನೂ ನಾವು ಅಭ್ಯಸಿಸಿ ತಿಳಿದುಕೊಳ್ಳಬೇಕಾಗಿದೆ", ಎಂಬುದನ್ನು ಅವರು ತಿಳಿದಿದ್ದರು. ಅವರು ರಚಿಸಿದ ಇತಿಹಾಸದಲ್ಲಿ ಬಾದಾಮಿ ಚಾಳುಕ್ಯ, ರಾಷ್ಟ್ರಕೂಟ, ಪಶ್ಚಿಮ ಚಾಳುಕ್ಯ-ಕಳಚೂರಿ, ಹೊಯ್ಸಳ, ದೇವಗಿರಿ ಯಾದವ, ಬೆಳಗಾವಿ, ಹಾಗೂ ಸೌಂದತ್ತಿಯ ರಟ್ಟರ, ಹಾನಗಲ್ಲಿನ ಹಾಗೂ ಗೋವೆಯ ಕದಂಬರ, ಕೊಲ್ಲಾಪುರದ ಶಿಲಾಹಾರರ, ಇತಿಹಾಸ ರೂಪು ಪಡೆಯಿತು. ಮುಂಬೈ ಗೆಜೆಟೀಯರ್ ಭಾಗವಾಗಿದ್ದ, ಆರ್.ಜಿ. ಭಂಡಾರ್‌ಕರ್ ಗ್ರಂಥವೂ ಕಳೆದ ಶತಮಾನದಲ್ಲಿ ಹೊರಬಿದ್ದ, ೧೮೦ ಪುಟಗಳಲ್ಲಿ ಸಮರ್ಪಕವಾಗಿ ಸಂಗ್ರಹಿಸಿ ಕೊಡಲಾದ, ಕರ್ನಾಟಕ ಇತಿಹಾಸದ ಮತ್ತೊಂದು ಕೃತಿ. ಪ್ರಧಾನವಾಗಿ ಫ್ಲೀಟರ ಮಾರ್ಗವನ್ನೇ ಅನುಸರಿಸಿ, ಬಾದಾಮಿ ಚಾಳುಕ್ಯ, ರಾಷ್ಟ್ರಕೂಟ, ಕಲ್ಯಾಣಿ ಚಾಳುಕ್ಯ, ಕಳಚೂರಿ, ದೇವಗಿರಿ ಯಾದವರ, ಕೊಲ್ಲಾಪುರದ ಶಿಲಾಹಾರರ, ರಾಜಕೀಯ ಇತಿಹಾಸವನ್ನು ಅವರು ದಖ್ಖಣದ ಇತಿಹಾಸದ ಹಿನ್ನೆಲೆಯಲ್ಲಿ ನಿರೂಪಿಸಿದರು. ಅಲ್ಲಿಂದ ಸುಮಾರು ಎರಡು ದಶಕಗಳ ಮೇಲೆ ಬಂದ, ಲೂಯಿಸ್ ರೈಸ್ ಅವರಿಂದ ಪ್ರಧಾನವಾಗಿ ಮೈಸೂರು ವಿಭಾಗದ ಅರಸು ಮನೆತನಗಳಿಗೆ ಸಂಬಂಧಿಸಿ ಬರೆದ ಗ್ರಂಥವಾಗಿತ್ತು. ಈ ಮೂರು ಗ್ರಂಥಗಳಿಂದ ಸಮಗ್ರ ಕರ್ನಾಟಕದ ಪುರಾತನ ಹಾಗೂ ಮಧ್ಯಕಾಲೀನ ಅರಸು ಮನೆತನಗಳ ಇತಿಹಾಸದ ಒಂದು ಪಕ್ಷಿನೋಟವು ಎಲ್ಲರಿಗೂ ದೊರೆಯುವಂತಾಗಿತ್ತು.

ಸ್ವಾತಂತ್ರ್ಯಾನಂತರದ ಕಾಲದಬಹುತೇಕ ಸ್ನಾತಕೋತ್ತರ ವಿದ್ಯಾರ್ಥಿಗಳಿಗೆ ಫ್ಲೀಟ್, ಭಂಡಾರ್‌ಕರ್ ಹಾಗೂ ರೈಸ್ ಅವರ ಹೆಸರು ಮಾತ್ರ ತಿಳಿದಿತ್ತೇ ಹೊರತು ಅವರ ಗ್ರಂಥಗಳನ್ನು ಅಭ್ಯಸಿಸುವ ಅವಕಾಶವಾಗಲಿ, ಆಸಕ್ತಿಯಾಗಲಿ, ದೊರೆತದ್ದು ಅಪರೂಪ. ಸಂಕ್ಷಿಪ್ತತೆ, ಸರಳತೆ, ಹಾಗೂ ವೈಜ್ಞಾನಿಕ ನಿರೂಪಣೆಯಲ್ಲಿ, ಈ ಮೂರು ಗ್ರಂಥಗಳನ್ನು ಮೀರಿಸಿ ಬಂದ ಇತಿಹಾಸದ ಗ್ರಂಥಗಳನ್ನು ಕರ್ನಾಟಕದಲ್ಲಿ ನಾನಿನ್ನೂ ಕಂಡಿಲ್ಲ, ಓದಿಲ್ಲ. ಈ ಶತಮಾನದ ೫-೬ನೆಯ ದಶಕಗಳ ಸಮಗ್ರ ಕರ್ನಾಟಕ ಇತಿಹಾಸವನ್ನು ಯಾವ ಹಂತದಲ್ಲಿಯೂ ಕಾಲೇಜ್ ವಿದ್ಯಾರ್ಥಿಗಳು ಅಭ್ಯಾಸ ಮಾಡುತ್ತಿರಲಿಲ್ಲವೆಂಬುದು ಗಮನಾರ್ಹ. ಕಾರಣ, ಹೊಸ ಗ್ರಂಥಗಳನ್ನು ಹುಡುಕುವ ಗೊಡವೆಗಾಗಲೀ ಹೊಸದಾಗಿ ಗ್ರಂಥಗಳನ್ನು ರಚಿಸುವ ಗೊಡವೆಗಾಗಲೀ ಅಂದಿನ ಸಾರಸ್ವತಲೋಕ ಆಸಕ್ತಿ ತಾಳಲಿಲ್ಲವೆಂದೇ ಹೇಳಬೇಕು. ಸ್ನಾತಕೋತ್ತರ ಮಟ್ಟದಲ್ಲಿ ಆಯ್ದು ಒಂದು ರಾಜಮನೆತನದ

ಇತಿಹಾಸದ ಬಗ್ಗೆ ವಿವರ ಸಂಗ್ರಹಿಸಲು ಅಂದಿನ ವಿದ್ಯಾರ್ಥಿಗಳಿಗಿದ್ದ ಮಾರ್ಗಗಳು ಮುಖ್ಯವಾದವು ಎರಡು ; ಆಯಾ ಅರಸು ಮನೆತನಗಳ ಬಗ್ಗೆ ರಚಿಸಲಾಗಿದ್ದ ಸ್ವಾತಂತ್ರ್ಯ ಸಂಪುಟಗಳೇನಾದರೂ ಇದ್ದರೆ ಅಂತಹ ಗ್ರಂಥಗಳನ್ನು ಅಭ್ಯಸಿಸುವುದು ; (ಉದಾ : ಕೃಷ್ಣರಾವ್, ಅವರ ತಲಕಾಡಿನ ಗಂಗರ ಮೇಲಿನ ಇತಿಹಾಸ ; ಇವು ತೆಕ್ಕೆಗೆಟುಕದ ಬಹುತೇಕ ವಿದ್ಯಾರ್ಥಿಗಳಿಗೆ ಉಳಿದ ಮತ್ತೊಂದು ಮಾರ್ಗ, ಹಯವದನರಾವ್ ಅವರ ಮೈಸೂರು ಗೆಜೆಟೀರ್ ಅಭ್ಯಸಿಸುವುದು.

ಗೆಜೆಟೀರ್‌ನ ಭಾಗವಾಗಿ ಹೊರಹೊಮ್ಮಿದ ಇತಿಹಾಸದಲ್ಲೆಲ್ಲಾ ಹಯವದನ ರಾಯರ ಮೈಸೂರು ಗೆಜೆಟೀರ್ ಇಂದಿಗೂ ವಿಶಿಷ್ಟ ಸ್ಥಾನದಲ್ಲಿ ನಿಂತಿದೆ. ೧೯೨೭ರಿಂದ ೧೯೩೦ರ ಕಾಲಾವಧಿಯಲ್ಲಿ ಐದು ಸಂಪುಟಗಳಲ್ಲಿ ಪ್ರಕಟಗೊಂಡ, ಎಂಟು ವಿಭಾಗಗಳಲ್ಲಿ ಹಂಚಲ್ಪಟ್ಟಿರುವ, ಸುಮಾರು ೬,೪೩೦ ಪುಟಗಳ ಈ ಕೃತಿಯ ಸುಮಾರು ಅರ್ಧದಷ್ಟು ಭಾಗ ಕರ್ನಾಟಕದ ಇತಿಹಾಸಕ್ಕೆ ಮೀಸಲಾಗಿದೆ ಎಂಬುದು ಗಮನಾರ್ಹ. ಎರಡನೆಯ ಸಂಪುಟದ ನಾಲ್ಕು ಭಾಗಗಳಲ್ಲಿ, ಕರ್ನಾಟಕದ ಸಮಗ್ರ ರಾಜಕೀಯ, ಸಾಂಸ್ಕೃತಿಕ ಇತಿಹಾಸವನ್ನು. ಅನಾದಿಕಾಲದಿಂದ ಅವರ ಕಾಲದ (೧೯೨೭)ವರೆಗೂ ನಿರೂಪಿಸಲಾಗಿದೆ. ಈ ನಾಲ್ಕು ಭಾಗಗಳಲ್ಲಿ ಮೊದಲನೆಯದು (ಸು. ೪೬೧ ಪುಟ) ಕನ್ನಡ ನಾಡಿನ ಆಕರ, ನಾಣ್ಯ, ಶಿಲ್ಪ, ವಾಸ್ತು, ಚಿತ್ರಕಲೆ ಹಾಗೂ ಸಾಹಿತ್ಯಕ್ಕೆ ಮೀಸಲಾಗಿರುವುದು, ಇದರ ಮತ್ತೊಂದು ವಿಶೇಷತೆ. ಇಷ್ಟೊಂದು ಸಮರ್ಪಕವಾದ, ಆಧಾರ ಸಹಿತವಾದ, ಸುಲಭವಾಗಿ ಅಭ್ಯಸಿಸಿ ಅರಿತುಕೊಳ್ಳಬಹುದಾದ, ಕರ್ನಾಟಕದ ಇತಿಹಾಸವನ್ನಾಗಲೀ, ಗೆಜೇಟೀಯರನ್ನಾಗಲೀ, ಮುಂದಿನ ಪೀಳಿಗೆಯ ಯಾವ ಇತಿಹಾಸಕಾರನೂ, ಆಡಳಿತಕಾರನೂ, ಸರಕಾರವೂ, ಸ್ವಾತಂತ್ರ್ಯ ನಂತರದ ಈ ನಲ್ವತ್ತು ವರ್ಷಗಳಲ್ಲಿ ಹೊರತಂದಿಲ್ಲ. ಅಷ್ಟೇ ಅಲ್ಲ, ಹಯವದನರಾಯರು ರಚಿಸಿದ ಇತಿಹಾಸವನ್ನೂ ಅನುಕರಿಸದೇ, ಅನಾಮತ್ತಾಗಿ ಕದಿಯದೇ, ಅವರ ನೆರಳಿನಲ್ಲಿ ನಿಲ್ಲದೇ, ಒಂದೂ ಕೃತಿಯು ಈ ನಲ್ವತ್ತು ವರ್ಷಗಳಲ್ಲಿ ಬಂದಿಲ್ಲವೆಂದರೆ, ಸತ್ಯಕ್ಕೆ ದೂರವಾದ ಮಾತಾಗಲಾರದು.

ಕರ್ನಾಟಕ ಇತಿಹಾಸದ ಬಗೆಗಿನ ಸುಮಾರು ೮-೧೦ ಗ್ರಂಥಗಳು ೭ನೆಯ ದಶಕದಿಂದೀಚೆಗೆ ಪ್ರಕಟಗೊಂಡಿವೆ. ಇವುಗಳಲ್ಲಿ ಒಂದೆರಡನ್ನು ಬಿಟ್ಟರೆ, ಉಳಿದುವೆಲ್ಲ ಬಹುತೇಕ ಅನುಕರಣಾಕೃತಿಗಳಾಗಿರುವುದು ದುಃಖದ ಸಂಗತಿ. ಇವುಗಳಲ್ಲಿ ಯಾವುದು ಆಕರಗಳನ್ನಾಗಲೀ, ಗ್ರಂಥಋಣವನ್ನಾಗಲೀ, ಸೂಚಿಸದೇ ಪ್ರಕಟಗೊಂಡಿದೆಯೋ ಅಂತಹ ಗ್ರಂಥವನ್ನು ಬಹುತೇಕ ನಕಲು ಕೃತಿ ಎಂದೇ ಪರಿಗಣಿಸಬೇಕಾಗುವುದು. ಕೆಲವರು ಗ್ರಂಥಋಣವನ್ನು ಸೂಚಿಸುವ ಸೌಜನ್ಯ ಹೊಂದಿದ್ದಾರೆ, ಆದರೆ ತಾವು ಅನಾಮತ್ತಾಗಿ ವಿವರಗಳನ್ನು ಎತ್ತಿಕೊಂಡ ಗ್ರಂಥಗಳನ್ನು ಮಾತ್ರ ಎಚ್ಚರಿಕೆಯಿಂದ ತಾವು ಕೊಡುವ ಪಟ್ಟಿಯಲ್ಲಿ ಸೇರಿಸದೇ, ತಮ್ಮ ಕೃತಿಚೌರ್ಯದ ಚತುರತೆಯನ್ನು ಮೆರೆದಿದ್ದಾರೆ.

ವಿಷಯವನ್ನೆಲ್ಲ ಒಂದೋ ಎರಡೋ ಗ್ರಂಥಗಳಿಂದ ಎರವಲು ಪಡೆದು ಅವನ್ನು ತಮ್ಮ ಭಾಷೆಗೆ ಅಳವಡಿಸಿಕೊಂಡವರು, ಇನ್ನೂ ಹೆಚ್ಚಿನ ಬುದ್ಧಿವಂತ ಚೋರರು. ಆದರೆ ಈ ಎಲ್ಲಾ ಬಗೆಯ ಅನುಕರಣೆಗಾರರೂ ತಮ್ಮದೇ ಆದ ಅನೇಕ ತಪ್ಪುಗಳನ್ನು ಸೇರಿಸಿ, ಕರ್ನಾಟಕ ಇತಿಹಾಸಕ್ಕೆ ಸ್ವಂತದ್ದೆನ್ನುವ ದೇಣಿಗೆಯನ್ನು ಕೊಟ್ಟಿದ್ದಾರೆ. ಇವುಗಳಲ್ಲಿ ಕೆಲವು ಅಪೂರ್ಣ ಅರಿವಿನ ಫಲ ; ಇನ್ನೂ ಕೆಲವು ಅನಾಸಕ್ತಿಯ ಫಲ : ಇನ್ನುಳಿದವು ಸತ್ಯದ ಬಗ್ಗೆ ಗ್ರಂಥಕಾರನಿಗಿರುವ ಅನಾದರಕ್ಕೆ ಸಾಕ್ಷಿ.

ಗಾತ್ರದಲ್ಲಿ ಸಾಕಷ್ಟು ದೊಡ್ಡದಾಗಿ ಕಾಣುವ ೧೯೬೮ರಲ್ಲಿ ಮೈಸೂರು ಸರಕಾರದಿಂದ ಪ್ರಕಟಗೊಂಡ ಕರ್ನಾಟಕ ಥ್ರೂ ದ ಏಜಸ್ ಕನ್ನಡ ಇಂಗ್ಲೀಷ ಎರಡೂ ಭಾಷೆಗಳಲ್ಲಿ ಈ ಗ್ರಂಥವನ್ನು ತಂದವರು, 'It was written for the perusal of generation to come' ಎಂದು ಘೋಷಿಸಿಕೊಂಡರು. ಇತಿಹಾಸ ಪೂರ್ವ ಯುಗದಿಂದ ಆರಂಭವಾಗಿ, ಮೈಸೂರು ಏಕೀಕರಣದವರೆಗಿನ ಇತಿಹಾಸವನ್ನು ೧೦೯೪ ಪುಟಗಳಲ್ಲಿ ಸವಿಾಕ್ಷಿಸಲಾಗಿರುವ ಈ ಕೃತಿಯಲ್ಲಿ ಎದ್ದು ಕಾಣುವುದು. ಕರ್ನಾಟಕದಲ್ಲಿ ಆಳಿದ ಮುಸ್ಲಿಂ ಅರಸುಮನೆತನಗಳು ಈ ನಾಡಿನ ಇತಿಹಾಸದಿಂದ ಹೊರಗುಳಿದದ್ದನ್ನು ಪ್ರತಿ ಅರಸುಮನೆತನದ ಇತಿಹಾಸದೊಡನೆ ಅರಸೊತ್ತಿಗೆಯ ಆಶ್ರಯ ಮೂಲವಾದ ಸಾಂಸ್ಕೃತಿಕ, ಧಾರ್ಮಿಕ ಆಡಳಿತ, ಆರ್ಥಿಕ ಪರಿಸ್ಥಿತಿಗಳನ್ನು ಕೊಟ್ಟಿರುವುದು ಈ ಗ್ರಂಥದ ವಿಶೇಷತೆ. ಆದರೆ ಯಾವುದೊಂದು ಅಧ್ಯಾಯದಲ್ಲೂ ಮೂಲ ಆಕರಗಳ ಸೂಚನೆ ಇಲ್ಲದಿರುವುದು, ಅವ್ಯವಸ್ಥೆಯಿಂದ ಕೂಡಿದ ಗ್ರಂಥಋಣದ ಪಟ್ಟಿಯ ಪ್ರಕಟನೆ, ಅಸಮರ್ಪಕವಾದ ಬಗೆಯಲ್ಲಿ ಹಂಚಲ್ಪಟ್ಟಿರುವ ಸ್ಥಳ ಹಾಗೂ ಪ್ರಾಧಾನ್ಯತೆ, ಈ ಗ್ರಂಥದಲ್ಲಿ ಎದ್ದು ಕಾಣುವುವು. ಇದೊಂದು ಸಮಗ್ರ ರಾಜಕೀಯ-ಸಾಂಸ್ಕೃತಿಕ ಗ್ರಂಥವೆನಿಸದೆ, ಚಿಂದಿ-ಚಿಂದಿ ಚೀಟಿ ಅಂಟಿಸಿ ಸಿದ್ಧಪಡಿಸಿದ ಸೂಚನಾ ಹಲಗೆ (Notice Board) ಯಂತೆ ಇದು ನಮಗೆ ಕಾಣುವುದು. ಯಾವ ವಿಷಯವೂ ಆಳವಾದ ಅಭ್ಯಾಸಕ್ಕೆ ಒಳಗಾಗದಿರುವುದು ಇಲ್ಲಿ ಕಂಡುಬರುವ ಪಾಂಡಿತ್ಯ ಗುಣ. ಗಾತ್ರದಲ್ಲಿ ಅತ್ಯಂತ ಹಿರಿದಾದ ಸರಕಾರಿ ಆಶ್ರಯದಲ್ಲಿ ಪ್ರಕಟಗೊಂಡ ಮತ್ತೊಂದು ಗ್ರಂಥ, ಎಂ.ವಿ. ಕೃಷ್ಣರಾವ್ ಹಾಗೂ ಕೇಶವಭಟ್ಟ ಅವರು ಕನ್ನಡದಲ್ಲಿ ಸಿದ್ಧಪಡಿಸಿದ 'ಕರ್ನಾಟಕ ಇತಿಹಾಸ ದರ್ಶನ' ; ೧೩೧೫ ಪುಟಗಳ ಈ ಗ್ರಂಥದಲ್ಲಿ ಅನಾದಿಕಾಲದಿಂದ ಆಧುನಿಕ ಕಾಲದವರೆಗಿನ ಕರ್ನಾಟಕ ಇತಿಹಾಸವನ್ನು ನಿರೂಪಿಸಲಾಗಿದೆ. ನಮ್ಮ ನಾಡಿನ ಎರಡು ಸಾವಿರ ವರ್ಷಗಳ ಎಲ್ಲ ಅಂಶಗಳೂ ಅಡಕವಾಗಿರುವ ಇಷ್ಟು ದೊಡ್ಡ ಪ್ರಮಾಣದ ಹೊತ್ತಿಗೆ ಅಂದಿನವರೆಗೂ ಬೆಳಕು ಕಂಡಿರಲಿಲ್ಲ. ಅದುವರೆಗೆ 'ದೇಶ ವಿದೇಶಗಳ ವಿದ್ವಾಂಸರುಗಳು ನಡೆಸಿದ ಸಂಶೋಧನೆಯಿಂದ ಲಭಿಸಿರುವ ಅಮೂಲ್ಯ ಸಾಮಗ್ರಿಗಳನ್ನು ಕ್ರೋಢೀಕರಿಸಿಕೊಂಡು ಈ ಗ್ರಂಥದ ನಾನಾ ಅಧ್ಯಾಯಗಳನ್ನು ಬರೆದುದಾಗಿ, ಎಂಬುದನ್ನು

ಈ ಗ್ರಂಥಕಾರರು ಸ್ಪಷ್ಟಗೊಳಿಸಿರುವುದರಿಂದ ಅವರ ನೆಲಗಟ್ಟು ಸ್ಪಷ್ಟ. ರಾಜಮನೆತನಗಳ ಇತಿಹಾಸದಲ್ಲಿ ಅಲ್ಲಿಯವರೆಗೂ ತಿಳಿದ ವಿವರಗಳನ್ನೇ ಕೊಡಲಾಗಿದ್ದರೂ ಸಾಮಂತರಾಜ ಕುಲಗಳ, ಮಹಾಮಂಡಲೇಶ್ವರರ ಹಾಗೂ ಪಾಳೆಯಗಾರರ ಬಗ್ಗೆ ಗಮನ, ಧರ್ಮ, ರಾಜ್ಯಜೀವನ, ಕಲೆ, ಸಾಹಿತ್ಯದ ಬಗ್ಗೆ ಮಾಡಿದ ಚರ್ಚೆ, ಈ ಗ್ರಂಥವನ್ನು ಸಾಕಷ್ಟು ಉಪಯುಕ್ತ ಮಾಡಿದೆ. ಆದರೆ ಇಲ್ಲಿಯ ಬಹುತೇಕ ವಿವರಗಳು ಹಯವದನರಾಯರ ಸಂಪುಟಗಳ ಚೌಕಟ್ಟಿನಲ್ಲಿರುವುದು ಗಮನಾರ್ಹ. ಮೂಲ ಪಾಠಕ್ಕೆ ಆಕರಗಳ ಪುಷ್ಟಿ ಇಲ್ಲದಿದ್ದರೂ ಗ್ರಂಥಋಣ ಸೂಚಿಸುವಲ್ಲಿ ಅಲಕ್ಷ್ಯವಾಗಲೀ ಅಪವಾದವಾಗಲೀ ಎದ್ದು ಕಾಣುವುದಿಲ್ಲ.

ಇಂಗ್ಲೀಷ್ ಭಾಷೆಯಲ್ಲಿ ಪ್ರಕಟಗೊಂಡಿರುವ, ಪಿ.ಬಿ. ದೇಸಾಯಿ ಸಂಪಾದಿಸಿದ, ಅಲ್ಲದೇ ಐ. ಎಂ. ಮುತ್ತಣ್ಣ, ಎಚ್.ವಿ. ಶ್ರೀನಿವಾಸಮೂರ್ತಿ ಹಾಗೂ ಆರ್. ರಾಮಕೃಷ್ಣ, ಮತ್ತು ಕೆ. ಆರ್. ಬಸವರಾಜರ ಗ್ರಂಥಗಳು, ಗಾತ್ರದಲ್ಲಿ ಮಾತ್ರ ವ್ಯತ್ಯಾಸ ಹೊಂದಿರುವ 'ಸರ್ವೇ'ಸ್ವರೂಪದ, ಆಕರ ಅನುಸೂಚಿಯನ್ನು ಪಡೆಯದ, ವಿದ್ಯಾರ್ಥಿಗಳ ಅವಶ್ಯಕತೆಯನ್ನು ಮಾತ್ರ ಗಮನದಲ್ಲಿಟ್ಟುಕೊಂಡು ಬರೆದ ಸಾಂಪ್ರದಾಯಿಕ ಹಾದಿಯನ್ನು ತುಳಿದ, ಸರ್ವೇಸಾಮಾನ್ಯವಾದ ಮಾಹಿತಿಯನ್ನು ಒದಗಿಸುವ ಗ್ರಂಥಗಳು. ಈ ಗ್ರಂಥಗಳೆಲ್ಲ ಇತ್ತೀಚೆಗೆ ಪ್ರಕಟಗೊಂಡಿದ್ದರಿಂದ ಇವು latest ಪುಸ್ತಕಗಳಾಗಿವೆಯೇ ಹೊರತು, ಅವು ಇತ್ತೀಚೆಗೆ ಬೆಳಕಿಗೆ ತರಲ್ಪಟ್ಟ, ಐತಿಹಾಸಿಕ ಸಂಶೋಧನೆಗಾಗಿ ಮೀಸಲಿಟ್ಟ ಪತ್ರಿಕೆಗಳಲ್ಲಾಗಲೀ, ವೇದಿಕೆಗಳಲ್ಲಾಗಲೀ, ಪ್ರತಿಪಾದಿಸಲಾದ ಹೊಸ ಸಾಮಗ್ರಿಯನ್ನು ಸಮ್ಮಿಳಿಸಿಗೊಳ್ಳಲಾಗಲೀ, ಅವನ್ನು ಸಮೀಕ್ಷಿಸುವ ಗೊಡವೆಗಾಗಲೀ ಹೋಗಿಲ್ಲ. ಇತ್ತೀಚೆಗೆ ದೊರೆತ ಶಾಸನವನ್ನು ರಾಜಕೀಯ ಇತಿಹಾಸ ಬರೆಯಲು ಒಬ್ಬಿಬ್ಬರು ಉಪಯೋಗಿಸಿಕೊಂಡಿರಲು ಸಾಧ್ಯ. ಆದರೆ, ಸಮಗ್ರತೆಯ ಸ್ವರೂಪ ಈ ಗ್ರಂಥಗಳಲ್ಲಿ ಕಂಡುಬಾರದ ವಸ್ತುವಾಗಿದೆ. ಒಂದೆರಡು ಗ್ರಂಥಗಳನ್ನು ಹೊರತು ಪಡಿಸಿ, ಇನ್ನುಳಿದ ಗ್ರಂಥಗಳ ವಸ್ತು, ಮೊದಲು ಪ್ರಕಟಗೊಂಡ ಯಾವ ಯಾವ ಗ್ರಂಥದಿಂದ ಆಯ್ದುಕೊಂಡದ್ದು, ಅಲ್ಲಿ ಬರುವ ತುಲನಾತ್ಮಕ ಮಾತು ಯಾರಿಂದ ಮೊದಲು ಬಂದದ್ದು, ಇವರು ಕೊಡುವ ವರ್ಣನೆಯಲ್ಲಿಯ ಯಾವ ಯಾವ ವಾಕ್ಯಗಳು ಗ್ರಂಥಕರ್ತನವು, ಯಾವ ವಾಕ್ಯಗಳು ಬೇರೆಯವರವು, ಎಂಬುದನ್ನು ಹೆಚ್ಚು ಶ್ರಮ ಪಡದೇ ಗುರುತಿಸಬಹುದು. ಒಂದು ಗ್ರಂಥದಲ್ಲಿಯಂತೂ ಇತಿಹಾಸ ನಿರೂಪಣೆಯಾಗುತ್ತಿರುವುದೋ ಅಥವಾ ಯಾವುದಾದರೂ ಧರ್ಮ ಬೋಧನೆ ನಡೆಯುತ್ತಿದೆಯೋ, ಎಂಬುದನ್ನು ಗುರುತಿಸುವುದೂ ಕಷ್ಟ. ಭಾಷಾವಾರು ಪ್ರಾಂತರಚನೆಯ ಬಗ್ಗೆ ಇಲ್ಲಿ ಬರೆದ ಒಂದು ವಾಕ್ಯವು, ಈ ಇತಿಹಾಸಕಾರರ ಶೈಲಿಯನ್ನು, ಅವರ ಇತಿಹಾಸಕಲ್ಪನೆಯನ್ನು ವ್ಯಕ್ತಪಡಿಸುವುದು. ಅದು ಇಂತಿದೆ ;

"However, the problem of border areas purely on linguistic grounds is a difficult one....we have to satisfy ourselves and impress upon others the supreme reality that all states together form one nation, one people and one country, which is our dear Bharat. Our efforts should now be directed to make our mother Bharat ever strong, united and prosperous, above all is Bharata Rashtra."

ಭಾಷೆಯನ್ನು ಡೊಂಬರಾಟಕ್ಕೆ ಇಳಿಸಿ, ಇತಿಹಾಸವನ್ನು ದುರುಪಯೋಗಪಡಿಸಿಕೊಂಡು, ಭಾವುಕತೆಯನ್ನು ಕೆದಕಿ, ವೈಯಕ್ತಿಕ ಪ್ರತಿಷ್ಠೆಯನ್ನು ಸ್ಥಳೀಯರಲ್ಲಿ ಹೇಗೆ ಹಲವರು ಗಳಿಸಿಕೊಳ್ಳಬಹುದೆಂಬುದಕ್ಕೆ ಇದೊಂದು ಸಾಕ್ಷಿ. ಈ ಬಗೆಯ ಸದ್ಗುಣಪೂರ್ಣ ಬೋಧನೆಯು ಗ್ರಂಥದ ತುಂಬಾ ಇರುವ ಈ ಇತಿಹಾಸವು ಕಿರಿಯ ಜನಾಂಗದಲ್ಲಿ ಏನನ್ನು ಪ್ರಚೋದಿಸಬಲ್ಲದೆಂಬುದನ್ನು ನಾವು ಸುಲಭವಾಗಿ ಗ್ರಹಿಸಬಹುದು.

ನಮ್ಮ ಸುದೈವದಿಂದ ಸ್ವಾತಂತ್ರ್ಯಾನಂತರ ಕಾಲದ ಎಲ್ಲಾ ಇತಿಹಾಸಕಾರರೂ ಚತುರ ನಕಲುದಾರರಾಗಲಿಲ್ಲ. ಸಿ. ಲಕ್ಷ್ಮೀನಾರಾಯಣರಾಯರು ಹಾಗೂ ದಿ. ಸ್ವಾ. ಪಂಚಮುಖಿಯವರು ೧೯೪೬ ರಲ್ಲಿಯೇ ಕನ್ನಡಭಾಷೆಯಲ್ಲಿ ಪ್ರಕಟಿಸಿದ್ದ, ಕರ್ನಾಟಕದ ಅರಸುಮನೆತನಗಳು ಇನ್ನೂ ಆಸಕ್ತಿಯನ್ನುಂಟುಮಾಡಬಹುದಾದ, ನಂಬಲರ್ಹವಾದ ಆಕರ ಹಾಗೂ ವಾದಗಳಿಂದ ಕೂಡಿದ ಗ್ರಂಥವಾಗಿ ಉಳಿದಿದೆ. ಕದಂಬ ಬಾದಾಮಿ ಚಾಳುಕ್ಯ, ತಲಕಾಡಿನ ಗಂಗ, ನೊಳಂಬ, ಬಾಣ ಮನೆತನಗಳ, ಮೂಲತಃ ರಾಜಕೀಯ ಇತಿಹಾಸದ ಬಗ್ಗೆ, ಆಕರ ಮೂಲವಾದ ವಿವರಗಳನ್ನೊದಗಿಸಿಕೊಡುವ ಗ್ರಂಥ ಇದಾಗಿದೆ. ೧೯೬೦ರಲ್ಲಿ ಪಂಚಮುಖಿ ಪ್ರಕಟಿಸಿದ ಕರ್ನಾಟಕ ಇತಿಹಾಸ ಇದೇ ಚೌಕಟ್ಟಿನಲ್ಲಿ ಹೆಣೆದ ಗ್ರಂಥವಾಗಿದ್ದು, ಇನ್ನೂ ಹೆಚ್ಚು ವಿವರ ಹೊಂದಿರುವ, ಆಕರಗಳಿಂದ ಪುಷ್ಟಿಪಡೆದ ವಾದದಿಂದೊಡಗೂಡಿದ, ಇತಿಹಾಸವಾಗಿದೆ, ಪಂಚಮುಖಿಯವರ ಅಭಿಪ್ರಾಯಗಳ ಬಗ್ಗೆ, ಅವರು ಆಕರಗಳನ್ನು ಬಳಸಿಕೊಳ್ಳುವ ಬಗ್ಗೆ, ಅವರ ಸಾಂಸ್ಕೃತಿಕ-ಧಾರ್ಮಿಕ ಒಲವಿನ ಬಗ್ಗೆ, ನಮ್ಮಲ್ಲಿ ಭಿನ್ನಾಭಿಪ್ರಾಯ ಉಂಟು. ಆದರೆ, ಅವರು ಹೆಣೆದ ಇತಿಹಾಸ, ಅನುಕರಣೆಯ ದೋಷಕ್ಕೊಳಗಾಗಿಲ್ಲ. ಇತ್ತೀಚೆಗೆ ಪ್ರಕಟವಾದ ಡಾ. ಟಿ. ವಿ. ವೆಂಕಟಾಚಲ ಶಾಸ್ತ್ರಿಯವರ ನಮ್ಮ ಕರ್ನಾಟಕ, ಕರ್ನಾಟಕದ ಇತಿಹಾಸ ರಚನೆಗೆ ಬೇಕಾದ ಉಪಯುಕ್ತ ವಿವರಗಳನ್ನು ಒದಗಿಸುವ, ಚಿಕ್ಕ ಆದರೆ, ಚೊಕ್ಕದಾದ ಗ್ರಂಥವಾಗಿದೆ. (ಇದರ ಎರಡನೆಯ ಭಾಗ ಮುಂದಿನ ಸಂಚಿಕೆಗೆ)

(ಪ್ರೊ. ಶೆಟ್ಟರ್‌ರವರು ನಮ್ಮ ಕಾಲದ ಅತ್ಯಂತ ಪ್ರಜ್ಞಾವಂತ ಇತಿಹಾಸಕಾರರು, ಅವರ ಈ ಲೇಖನವನ್ನು ಒದಗಿಸಿಕೊಟ್ಟ ಡಾ॥ ಎಸ್. ಚಂದ್ರಶೇಖರ್‌ರವರಿಗೆ ಶೂದ್ರ ಋಣಿಯಾಗಿದೆ.)

ಕವನ ಹುಟ್ಟುವ ಹೊತ್ತು

ಕವನ ಹುಟ್ಟುವ ಹೊತ್ತು
ಯಾವುದು ಗೊತ್ತೆ ?
ಕಲ್ಪನಾ ವಿಲಾಸ
ಭೃಂಗದ ಬೆನ್ನೇರ ಬೇಕಿಲ್ಲ,
ವಿರಹದುರಿ ಎದೆಯು
ಹೊತ್ತಿಕ ಉರಿದು
ತಾನೂ ಭಸ್ಮವಾಗಿ
ತನ್ನನ್ನು ಸಾಯಗೊಡದೆ
ಬದುಕ ಬಿಡದೆ ಅಣು ಅಣುವೂ ಕೊಲ್ಲುವ ಹೊತ್ತು
ಕವನ ಹುಟ್ಟುವ ಹೊತ್ತು
ಯಂತ್ರದ ಚಕ್ರದಂತೆ ಸುತ್ತುವ
ಈ ಯಾಂತ್ರೀಕೃತ ಜೀವನದಲ್ಲೀ
ಅಲ್ಲೊಮ್ಮೆ ಇಲ್ಲೊಮ್ಮೆ
ಮೋಡದ ಮರೆಯ ಮಿಂಚಿನಂತೆ
ಮಿಂಚಿ ಮಿಂಚಿ ಮಾಯವಾಗುವ
ಅದೃಷ್ಟ ಸ್ನೇಹದ ಹಸ್ತದ
ಕಂಡು ಬಾಯಾರಿ ಕೈ ಚಾಚಿ
ಕರೆಕರೆದು ಬೆಂಡಾಗಿ
ಬಸವಳಿದು ನಾ ಕುಸಿದ ಹೊತ್ತು
ಕವನ ಹುಟ್ಟುವ ಹೊತ್ತು
ಬದುಕೆಲ್ಲಾ ಎಳೆದಾಟ
ಗಂಡ ಮಕ್ಕಳ ಕಾಟ
ಎಂದು ಒದರೊದರಿ
ಅದೇ ಅದೇ ಬೇಯಿಸಿ
ಅದೇ ಅದೇ ಬಡಿಸಿ
ಉಂಡ ಎಲೆ ಎತ್ತಿ
ಗೋಮಯ ಮಾಡಿ ನೆಲಸಾರಿಸಿ

ಎಸ್.ವಿ. ಪ್ರಭಾವತಿ, ಕನ್ನಡ ಅಧ್ಯಾಪಕಿ, ಭಾರತೀಯ ಸಂಸ್ಕೃತಿ ಮಹಿಳೆಯರ ಕಾಲೇಜ್, ವಿಜಯನಗರ, ಬೆಂಗಳೂರು-40.

ಮತ್ತೆ ಬೇಯಿಸಿ ಮತ್ತೆ ಬಡಿಸಿ
ಕುಂಬಾರನ ಚಕ್ರದಂತೆ ತಿರುಗುತ್ತ ತಿರುಗುತ್ತ
ಈ ತಿರುಗುವಿಕೆಯಿಂದ ಮುಕ್ತಿ ಸಿಗಬಾರದೇ
ಎಂದು ಹಂಬಲಿಸಿ ಹಾರೈಸಿ ಮಧ್ಯೆ
ಚಣಕಾಲ ಕಾಲವೇ ನಿಂತಂತೆ
ಅನಿಸಿದ ಹೊತ್ತು ಕವನ ಹುಟ್ಟುವ ಹೊತ್ತು.

—ಎಸ್.ವಿ. ಪ್ರಭಾವತಿ

ಗೆಳೆಯರಿಗೆ......

ಕಣ್ಣು ಕೆಂಪಾಗಿಸಿ
ದುರುಗುಟ್ಟಿ 'ಘೋರ್' ಎನ್ನುವ ಮೊದಲು,
ಬದಲು,
ಬಾಲ್ಯದೆಳೆಮನ ಕುತೂಹಲದ
ವರ ಪರೀಕ್ಷೆಯ ಕೌತುಕದ
ಮುಗ್ಧ
ಕರೆದಾಗ
ಥುತ್ ಎಂದು ಎದುರು ನಿಂತು
ಹಿರಿಯವನಾಗಿ
ಬುದ್ಧಿ ಹೇಳಿ ತಿದ್ದದೆ
ಸಿಕ್ಕಿದ್ದೇ ಅನಾಯಾಸದ ಅವಕಾಶ ಎಂದು
ಕರ್ಣನನು ದಯಪಾಲಿಸುವಾಗ

ಶ್ರೀಮತಿ ಅನಸೂಯಾದೇವಿ, C/o ಟಿ.ಎಂ. ನೀಲಕಂಠ ಅಡಿಗ, 400, 'ಶಾಂಭವಿ ನಿಲಯ' ಎಚ್. ಸಿದ್ದಯ್ಯ ರಸ್ತೆ, ವಿಲ್ಸನ್ ಗಾರ್ಡನ್, ಬೆಂಗಳೂರು-560 027

ಆ ಪುಣ್ಯಾತ್ಮನಿಗಿದ್ದ ನಿಷ್ಠೆ
ತಂದೆಯಾದೊಡನೆ ಗೈರು ಹಾಜರಿ !
ಅವಸರಿಸಿ ಹೋದನೇಕೆ
ಜವಾಬ್ದಾರಿಯ ಪಾಲು ಕೊಡವಿ ?

ಹೆಂಡತಿಯನ್ನು ಹಾಗೆ
ಕಾಲಚಕ್ರದ ಸುತ್ತುರುಳು ಉರುಳುಗಳಲ್ಲಿ
ನಿಂದೆ, ಅಪವಾದ, ಅಪಹಾಸ್ಯಕ್ಕೆ
ಈಡು ಮಾಡಿ
ಬಿಟ್ಟು ಹೋದರೆ ಹೇಗೆ ?

ಮಗನ ದುರಂತಕ್ಕೆ ಮೂಲ
ತಾಯಿ ಕಲ್ಲೆದೆಯ ಕುಂತಿ
ಎಂದು ವಾದಿಸುವ
ಮುಂದೆ ಭೋಧಿಸುವ
ಮುಂಚೆ
ಯೋಚಿಸಿ,
ಒಂದೊಮ್ಮೆ ಈಗ ಕರ್ಣನಾಡಿದ್ದರೆ
ಮಿಸೆ ಬಂದು ದೇಶ ಕಾಣುತ್ತಿರುವ ನೀವು,
ತಡವಾಗಿಯಾದರೂ
ಹೆತ್ತಮ್ಮನಿಗೆ ನ್ಯಾಯ ಸಲ್ಲಿಸದೇ
ಸುಮ್ಮನೇ ಬಿಡುತ್ತಿದ್ದಿರೇನು
'ಅಪ್ಪ'! ಎನಿಸಿಕೊಂಡ ಆ
ಸೂರ್ಯನನು
ಹೇಳಿ ?

—ಅನಸೂಯಾದೇವಿ

ವಿಘ್ನೇಶ್ವರನಿಗೆ

ಆನೆ ಮುಖದವ ನಿನ್ನ, ಅಗಲ ಕಿವಿ ಪುಟ್ಟ ಕಣ್ಣನ್ನ
ಡೊಳ್ಳು ಹೊಟ್ಟೆಯ ಸುತ್ತ, ಹಾವು ಸುತ್ತಿದ್ದನ್ನ
ನೋಡಿದ್ದು ನೆನಪು ನನಗೆ. ಡುಮ್ಮ ನಿನ್ನನು ಹೊರುವ
ಸಣ್ಣ ಇಲಿ ನಿನ್ನೆದುರು, ಕಾದು ಕೂತಂತಿತ್ತು, ನೆನಪು ನನಗೆ.

ಜಿಗಿ ಮಣ್ಣಲ್ಲಿ ತೀಡುತ್ತ ನಿನ್ನ ಪ್ರತಿಕೃತಿ ಮಾಡಿ
ಬಿಳಿ ಪಂಚೆಯನ್ನುಡಿಸಿ, ತೊಡಿಸಿ ನಿನಗೆ ಕಿರೀಟ
ನಾಲ್ಕು ಕೈ ಮಾಡಿದ್ದು ನೆನಪು ನನಗೆ.

ಚಂದ್ರನಿಗೆ ಸಿಟ್ಟಾಗಿ ಮುರುಕೊಂಡ ಹಲ್ಲನ್ನು
ನಿನ್ನ ಕೈಲಿಟ್ಟದ್ದು, ಮೋದಕವ ಕೊಟ್ಟದ್ದು,
ದೂರ್ವೆಯನು ತಂದದ್ದು
ದಾಸಾಳ ತುಂಬೆ ಮಲ್ಲಿಗೆ ಜಾಜಿ ಹೂವುಗಳ ತಂದದ್ದು
ಚವುತಿ ಚಂದ್ರಗೆ ಹೆದರಿ ತಲೆಮರೆಸಿಕೊಂಡದ್ದು
ನೆನಪು ನನಗೆ.

ಹೊಸ್ತಿಲಮೇಲೆ ಬೆರಳೆತ್ತರದ ಸಗಣಿ ಗುಪ್ಪೆಯ ಮೇಲೆ
ದೂರ್ವೆ ಇಟ್ಟದ್ದನ್ನು ನೀನೆಂದೆ ತಿಳಿದಿದ್ದೆ,
ನಿನಗಾಗಿ ಮಾಡಿಟ್ಟ ಮೋದಕದ ರುಚಿಗಾಗಿ ಕಾದುಕೂತಿದ್ದೆ,
ನೂರೆಂಟುಗಣಪತಿಯ ಸಂಜೆ ನೋಡುವುದಕ್ಕೆ ಮನೆಮನೆಗೆ
ಹೋಗಿದ್ದೆ
ದಾರಿಗಳ ಕೂಟದಲಿ ವಿಘ್ನ ಪರಿಹರಿಸೆಂದು
ಸುಳ್ಳು ಅಪವಾದಗಳ ತಪ್ಪಿಸಯ್ಯ ಎಂದು ನಿನ್ನ ಬೇಡಿದ್ದೆ,

ಭೂಕೈಲಾಸ ನಾಟಕದಲ್ಲಿ ಸೊಂಡಿಲನು ತೂಗುತ್ತ
ನೀನಡೆದು ಬಂದದ್ದು,
ಚಾತುರ್ಯದಿಂದಲೇ ಭೂ ಪ್ರದಕ್ಷಿಣೆ ಮಾಡಿ
ಷಣ್ಮುಖನ ಗೆದ್ದದ್ದು
ಸ್ವಾತಂತ್ರ್ಯ ಚಳುವಳಿಯಲ್ಲಿ ಬಿಳಿಟೋಪಿ ಇಟ್ಟದ್ದು,

ಅಮರೇಂದ್ರ ನಾಡಿಗ್, ಇಂಗ್ಲೀಷ್ ಅಧ್ಯಾಪಕ, ಕನ್ನಡ ವಿಭಾಗ, ಜ್ಞಾನಭಾರತಿ, ಬೆಂಗಳೂರು-56

ಮಸೀದೆಯ ಮುಂದೆ ನಿನ್ನ ಓಲಗ ಊದಿ
ಕೋಮು ಗಲಭೆಗಳಾದ್ದು ನೆನಪು ನನಗೆ.

80ರಲ್ಲಿ
ಯೂನಿವರ್ಸಿಟಿ ಕೆಲಸ ಪರ್ಮನೆಂಟ್ ಆಗಲೆಂದು ...

ಯೂನಿವರ್ಸಿಟಿ ಕೆಲಸ ಹಂಗಾಮಿಯಾದದ್ದು
ಖಾಯಮ್ಮಾಗಲಿ ಎಂದು ನಿನ್ನ ಬೇಡಿದ್ದೆ.
ಪುಸ್ತಕದ ಅಂಗಡಿ ಇಟ್ಟ ನನ್ನ ಸಾಲದ ಭಾರ
ಹಗುರವಾಗಲಿ ಎಂದು ಕೇಳಿಕೊಂಡಿದ್ದೆ.
ನಾನು ಸದಾಕಾಲ ಕವಿಯಾಗಿಯೇ ಇದ್ದು
ಲಿಪಿಕಾರ ಕೆಲಸಕ್ಕೆ ನೀನೆ ಸಿಗಬೇಕೆಂದು ಪ್ರಾರ್ಥಿಸಿದ್ದೆ.

83ಕ್ಕೆ
ಮನೆಯ ಕಟ್ಟುವುದಕ್ಕೆ ಸಾಲ ಸಿಗಲೆಂದು
ಪದಾರ್ಥಗಳ ಬೆಲೆ ಇಳಿಯಬೇಕೆಂದು
ಕನ್ನಡ ನಾಡಿನಲ್ಲಾದರೂ ಕನ್ನಡದ ಪ್ರೀತಿ ಉಳಿದಿರಲೆಂದು
ಆ ಚತುರ್ಥಿಯ ದಿವಸ ನಿನಗೆ ಸಾಕಷ್ಟು ಸಲ
ಅಡ್ಡ ಬೀಳುತ್ತಿದ್ದ ನನ್ನ ಮಗ ಅಪೂರ್ವ
ಅಪೂರ್ವವಾಗಿಯೆ ಬೆಳೆದು ತೃಪ್ತಿಕೊಡಬೇಕೆಂದು
ನಿನ್ನ ಬೇಡಿದ್ದೆ.

87ರ ಬೇಡಿಕೆ ಇಷ್ಟು :
ವಿಮಾನ ಅಪಹರಣಗಳು ಆಗದಿರಲಿ
ಪ್ರಯಾಣಿಕರು ಸುಖವಾಗಿ ಮನೆಗೆ ಬರಲಿ.
ಪ್ರಭವವಿಭವಾದಿಗಳು ಲೋಕವೆಲ್ಲೆಲ್ಲ ಕಡೆ
ಸುಖಶಾಂತಿ ತರಲಿ.

ನಮ್ಮ ಮಗ ಅಪೂರ್ವನಿಗೆ ಒಳ್ಳೆ ಬುದ್ಧಿಯ ಕೊಟ್ಟು
ನೋಡಿಕೋ ಮಹಾರಾಜ, ಕಡಿಮೆಯಾಗುವ ಹಾಗೆ ನನ್ನ
ಸಿಟ್ಟು.
ಹತ್ತೂ ದಿಕ್ಕಿಂದ ಬಲಿಯುತ್ತಿರುವ ಕಾಲಜೇಡ,
ನಿನ್ನ ಲಿಪಿಕಾರಿಕೆಯ ಮರೆಯಬೇಡ.

— ಸುಮತೀಂದ್ರ ನಾಡಿಗ್

ಸುದ್ದಿಯ ಗುದ್ದಾಟ

ಡಾ|| ಚೆಲುವರಾಜು

ಚೆಲುವರಾಜುರವರು 'ಶಿಕ್ಷಣ ಕ್ಷೇತ್ರ'ದಲ್ಲಿ ಒಂದಷ್ಟು ಒಳ್ಳೆಯದಾಗಬೇಕೆಂದು ಸದಾ ಬಯಸಿ ಹೋರಾಡುತ್ತಿರುವ ವಿಚಾರವಾದಿ. ಕಳೆದ ಹದಿಮೂರು ವರ್ಷಗಳ ಹಿಂದೆ 'ಶೂದ್ರ' ನಡೆಸಿದ ಶಿಕ್ಷಣದ ಬಗ್ಗೆಯ ವಿಚಾರ ಸಂಕಿರಣದಲ್ಲಿ ಡಾ|| ಅಮೂಲ್ಯ ಕುಮಾರ ಎನ್. ರೆಡ್ಡಿಯವರೊಡನೆ ಭಾಗವಹಿಸಿ ಅರ್ಥಪೂರ್ಣವಾದ ಮಾತುಗಳನ್ನು ಹೇಳಿದ್ದರು. ಬೆಂಗಳೂರು ವಿಶ್ವವಿದ್ಯಾನಿಲಯದ ರಾಜಕೀಯ ಶಾಸ್ತ್ರ ವಿಭಾಗದ ಮುಖ್ಯಸ್ಥರಾಗಿ, ಕ್ರಿಯಾಶೀಲತೆಯಿಂದ ಕೆಲಸ ಮಾಡುತ್ತ ಬಂದಿದ್ದಾರೆ. ಈಗ ಗುಲಬರ್ಗಾ ವಿಶ್ವವಿದ್ಯಾನಿಲಯದ ಉಪಕುಲಪತಿಗಳಾಗಿದ್ದಾರೆ. ನಾನಾ ಕನಸುಗಳನ್ನು ತುಂಬಿಕೊಂಡು ಹೋಗಿದ್ದಾರೆ. ಈ ಪ್ರದೇಶದ ಜನ ಹಾಗೂ ಕರ್ನಾಟಕ ಸರ್ಕಾರ ಪೂರ್ಣ ಸಹಕಾರ ಕೊಡದಿದ್ದರೆ ದೋಷವನ್ನು ಡಾ|| ಚೆಲುವರಾಜುರವರ ಮೇಲೆ ಹಾಕಿ ಕೈತೊಳೆದುಕೊಳ್ಳುವ ತಪ್ಪು ಮಾಡಬಾರದು. ಯಾಕೆಂದರೆ, ನಮ್ಮ ವಿಶ್ವ ವಿದ್ಯಾಲಯಗಳಿಗೆ ಹಾಗೂ ಶಿಕ್ಷಣ ಕ್ಷೇತ್ರಕ್ಕೆ ನಿಜವಾಗಿಯೂ ಚಿಕಿತ್ಸೆಬೇಕಾಗಿದೆ. ಇಲ್ಲದಿದ್ದ ಪಕ್ಷದಲ್ಲಿ ಲಕ್ಷಾಂತರ ರೋಗಿಷ್ಟ ಜನಗಳನ್ನು ಶಿಕ್ಷಣ ಕ್ಷೇತ್ರದಿಂದ ಸಮಾಜಕ್ಕೆ ಕೊಟ್ಟಂತಾಗುತ್ತದೆ. ಹಾಗೆಯೇ ರಾಜಕೀಯ ಮತ್ತು ಜಾತಿಯ ಪೆಡಂಭೂತಗಳನ್ನು ಬೆಳೆಸಿದಂತಾಗುತ್ತೆ. ಆಗ ಆದರ್ಶವನ್ನು ದೃಷ್ಟಿಯಲ್ಲಿಟ್ಟುಕೊಂಡು ಮುಂದೆ ಬರುವ ಜನರನ್ನು ಕಡೆಗಣಿಸಿ ಕೊಳಕು ಸಮಾಜಕ್ಕೆ ಪ್ರೋತ್ಸಾಹಿಸಿದಂತಾಗುತ್ತೆ.

ಡಾ|| ಕೆ. ಮರುಳಸಿದ್ಧಪ್ಪ

ಸೆಂಟ್ರಲ್ ಕಾಲೇಜಿನ ಸಾಹಿತ್ಯದ ವಿದ್ಯಾರ್ಥಿಗಳ ನಡುವೆ ಕೆ.ಎಂ.ಎಸ್ ಅತ್ಯಂತ ಪ್ರಿಯವಾದ ಹೆಸರು. ಸದಾ ಮೌನವನ್ನೇ ಅಪ್ಪಿಕೊಂಡು ತಿರುಗುವ ಇವರು ಮಾತಾಡಬೇಕೆನಿಸಿದರೆ ತಮ್ಮ ಸರದಿ ಬರುವ ತನಕ ಕಾದಿದ್ದು ಅರ್ಥಪೂರ್ಣವಾದ ಮಾತುಗಳನ್ನು ಹೇಳಬಲ್ಲವರು. ಹಿಂದೆ ನಿಂತು ಸ್ವಾರ್ಥವಿಲ್ಲದೆ ಜನರನ್ನು ಬೆಳಸ ಬಲ್ಲ ಚೈತನ್ಯವನ್ನು ಪಡೆದಿರುವ ವ್ಯಕ್ತಿ. ಬಹಳ ಪ್ರಾಮಾಣಿಕವಾಗಿ ಹೇಳಬೇಕೆಂದರೆ ನನ್ನಂಥವರಲ್ಲಿ ಸ್ವಾಭಿಮಾನವನ್ನು ಬೆಳಸಿರುವಂಥವರು. ದಲಿತಕವಿ ಸಿದ್ಧಲಿಂಗಯ್ಯ,

ಡಿ. ಆರ್. ನಾಗರಾಜ್‌ರಂಥವರು ಮುಕ್ತವಾಗಿ ಉಸಿರಾಡುವ ವಾತಾವರಣಕ್ಕೆ ಪ್ರೇರಕರಾದವರು. ಕಳೆದ ಎರಡು ವರ್ಷಗಳಿಂದ ಬೆಂಗಳೂರು ವಿಶ್ವವಿದ್ಯಾಲಯದ ಪ್ರಸಾರಾಂಗದ ನಿರ್ದೇಶಕರಾಗಿ ಮಾಡಿರುವ ಕೆಲಸ ಅಪೂರ್ವ. ನಷ್ಟದ ಹಾದಿಯನ್ನು ತಪ್ಪಿಸಿ ಒಂದಷ್ಟು ಲಾಭದ ಆಶಯವನ್ನು ಬೆಳಸಿದವರು. ಇವರ ಜೊತೆಗೆ ಡಾ॥ ಚೇಂದರಾಜು ಹಾಗೂ ಡಾ॥ ಜಿ. ರಾಮಕೃಷ್ಣರಂಥವರ ಪ್ರಗತಿಶೀಲರ ಸಹಕಾರವನ್ನು ಪಡೆದು ನಡೆಸಿದ ಉಪನ್ಯಾಸಗಳು ಸದಾ ನೆನಪಿನಲ್ಲಿಡತಕ್ಕಂತಹವು. ಉದಾಹರಣೆಗೆ ಡಾ॥ ದೇವಿಪ್ರಸಾದ ಚಟ್ಟೋಪಾಧ್ಯಾಯ, ಓ. ಚಿನ್ನಪ್ಪರೆಡ್ಡಿ, ನಿಖಿಲ ಚಕ್ರವರ್ತಿ, ಡಾ॥ ಯು. ಆರ್. ಅನಂತಮೂರ್ತಿ ಮುಂತಾದವರ ಉಪನ್ಯಾಸಗಳು. ಮುಂದಿನ ತಿಂಗಳು ಶಿಕ್ಷಣಕ್ಕೆ ಸಂಬಂಧಿಸಿದಂತೆ ಬಿ.ಸಿ. ರಾಮಚಂದ್ರಶರ್ಮರ ಭಾಷಣ ಹೆಚ್ಚು ಉಪಯುಕ್ತವಾಗಬಹುದು. ಶಿಕ್ಷಣದ ಬಗ್ಗೆ ಸಾಕಷ್ಟು ಅನುಭವಗಳನ್ನು ಪಡೆದಿರುವ ಶರ್ಮರಂಥವರನ್ನು ಕೇವಲ ಕಾವ್ಯದಲ್ಲಿಯೇ ಮರಿಮಾಡಿಸುವುದನ್ನು ತಪ್ಪಿಸಿ ಈ ಕಡೆಯೂ ಎಳೆದಿದ್ದಾರೆ ಮರುಳಸಿದ್ಧಪ್ಪನವರು. ಒಂದು ವಿಶ್ವವಿದ್ಯಾಲಯದ ಹೆಚ್ಚುಗಾರಿಕೆ ಬೆಳೆಯುವುದು ಅದರ ಪ್ರಸಾರಾಂಗದ ಕ್ರಿಯಾಶೀಲತೆಯ ಮೂಲಕವೂ ಎಂಬುದನ್ನು ತೋರಿಸುತ್ತಿದ್ದಾರೆ.

ಸಿ. ಜಿ. ಕೃಷ್ಣಸ್ವಾಮಿಯ 'ರಂಗನಿರಂತರ'

ಸಮುದಾಯದಿಂದ ರಂಗಸಂಪದಕ್ಕೆ ಬಂದು ಕ್ರಿಯಾಶೀಲರಾಗಿದ್ದ ಕೃಷ್ಣಸ್ವಾಮಿ ಈಗ 'ರಂಗನಿರಂತರ' ಸಂಘಟನೆಯನ್ನು ರೂಪಿಸಿದ್ದಾರೆ. ಸಮುದಾಯದಂತಹ ಸಂಸ್ಥೆಯನ್ನು ರಾಜ್ಯದಲ್ಲಿ ಬೆಳೆಸುವಾಗ ಪ್ರಸನ್ನರವರಿಗೆ ಬಲಗೈಯಾಗಿದ್ದರು. ನಂತರ ಭಿನ್ನಾಭಿಪ್ರಾಯ ಬಂದು ರಂಗಸಂಪದಕ್ಕೆ ಬಂದರು. ರಂಗಸಂಪದಕ್ಕೆ ಜೀವ ತುಂಬಿದರು; ಈಗ ಅದು ಇಬ್ಭಾಗವಾಯಿತಂತೆ. ಅದೇನೆ ಇರಲಿ ಕೃಷ್ಣಸ್ವಾಮಿ ಎಲ್ಲಿಗೋದರೂ ಶ್ರಮ ವಹಿಸಿ ದುಡಿಯುವ ಮತ್ತು ಒಂದಷ್ಟು ಜನ ಕೂಡಿ ಹಾಕಿ ಸಂಘಟಿಸುವ ಶಕ್ತಿ ಇದೆ. ಈ ಶಕ್ತಿಯೇ ಕೃಷ್ಣಸ್ವಾಮಿಯವರಿಗೆ ನಿರ್ದೇಶಕನಾಗಿ ಬೆಳೆಯುವ ಸ್ವಾಭಿಮಾನವನ್ನು ಬೆಳೆಸಿದ್ದು. ಪ್ರಸನ್ನರವರು ಹೇಳುವ ಪ್ರಕಾರ "ಕೃಷ್ಣಸ್ವಾಮಿ ಮತ್ತು ಬಸವಲಿಂಗಪ್ಪ ತುಂಬ ಸತ್ವ ಇರುವಂಥವರು" ಎನ್ನುವಲ್ಲಿ ಅರ್ಥವಿದೆ. ಆದರೆ ಅದಕ್ಕೆ ನಿಜವಾದ ಹಾದಿಯನ್ನು ಹುಡುಕಿಕೊಳ್ಳುವಲ್ಲಿ ನಿರಂತರತೆಯನ್ನು ಬೆಳೆಸಿಕೊಳ್ಳಬೇಕು. ಈ ದಿಕ್ಕಿನಲ್ಲಿ ಈಗಾಗಲೇ ಕೆಲಸ ಮಾಡುತ್ತಿರುವ ಇವರಿಬ್ಬರೂ ಗಂಭೀರ ವ್ಯಕ್ತಿಗಳು. 'ರಂಗನಿರಂತರ'ತೆಯ ಪ್ರಯೋಗ ಶೀಲತೆ ಮೆಚ್ಚುವಂಥದ್ದು. ನಾನಾ ರೀತಿಯ ರಂಗಕರ್ಮಿಗಳನ್ನು ತನ್ನೊಳಗೆ ಬರಮಾಡಿಕೊಳ್ಳುವಲ್ಲಿ ಅದು ಸಫಲತೆಯನ್ನು ಪಡೆಯಲಿ. ನಿರಂತರ ನಡೆಸುವ ಈ ರಂಗ ಕ್ರಿಯೆ ನಮ್ಮ ದೂರದರ್ಶನದ ಸವಾಲನ್ನು ಎದುರಿಸುವಂತಾಗಲಿ. ಕೆಲವು ನಾಟಕಗಳು, ಪ್ರಯೋಗಗಳು ಕಳಪೆಯನ್ನಿಸಿದರೂ ಅದರ

[illegible]
'ಸವಾಲು' ಸವಾ ಕೃಷ್ಣಸ್ವಾಮಿಯ ಮುಂದೆ ಇರುವುದರಿಂದ 'ರಂಗನಿರಂತರ'ಕ್ಕೆ ಸಾಧನೆ ದೊರಕಲಿ. ಒಂದಷ್ಟು ಉತ್ಸಾಹಿ ನಟನಟಿಯರು ರಂಗಭೂಮಿಗೆ ಕೊಡುಗೆಯಾಗಿ ಬರಬೇಕು. ಯಾಕೆಂದರೆ ನಮ್ಮಲ್ಲಿಯ ಸಮುದಾಯದಂತಹ ನಾನಾ ತಂಡಗಳು (ಬೆಂಗಳೂರಿನಲ್ಲಿ) ಸಾಯುವ ಹಂತದಲ್ಲಿವೆ. ಬೇರೆ ರೀತಿಯ ರಂಗ ಚಟುವಟಿಕೆಗಳಿಂದ ಅವುಗಳಿಗೂ ಜೀವ ಬರುವಂತಾಗಲಿ.

ಡಾ॥ ಎನ್.ಎಸ್. ಲಕ್ಷ್ಮೀನಾರಾಯಣ ಭಟ್ಟ

ಕನ್ನಡ ಸಾಹಿತ್ಯದ ವಿವಿಧ ಮುಖಗಳಿಗೆ ಸಂಬಂಧಿಸಿದಂತೆ ಬೆಂಗಳೂರು ವಿಶ್ವವಿದ್ಯಾಲಯದ ಕನ್ನಡ ವಿಭಾಗಕ್ಕೆ ವಿಶಿಷ್ಟ ಸ್ಥಾನವಿದೆ. ಕಳೆದ ಒಂದೂವರೆ ದಶಕದಲ್ಲಿ ಜಿ.ಎಸ್. ಶಿವರುದ್ರಪ್ಪನವರು ಅದಕ್ಕೆ ವೈವಿಧ್ಯ ಪೂರ್ಣವಾದ ಶಿರುವನ್ನು ಕೊಟ್ಟರು. ಅತ್ಯಂತ ಮುಕ್ತ ಮನಸ್ಸಿನಿಂದ ಬೆಳೆಸಿದರು. ಹೀಗೆ ಬೆಳೆಸುವಾಗ ಪ್ರತಿವರ್ಷ ನಡೆಸುತ್ತಿದ್ದ ಮೂರು ದಿನಗಳ ವಿಚಾರ ಸಂಕಿರಣಗಳಲ್ಲಿ ನಮ್ಮ ಸಾಹಿತ್ಯ-ರಾಜಕೀಯ ಹಾಗೂ ಸಂಸ್ಕೃತಿಯ ನಾನಾ ಮುಖಗಳನ್ನು ಚರ್ಚಿಸಲು ವೇದಿಕೆಯನ್ನು ನಿರ್ಮಾಣಮಾಡಿ ಕೊಟ್ಟರು. ರಾಜ್ಯದ ನಾನಾ ಮೂಲೆಗಳಲ್ಲಿಯ ಪ್ರಜ್ಞಾವಂತರನ್ನು ಒಂದೆಡೆ ಸೇರಿಸಿ ಹೃದಯ ಬಿಚ್ಚಿ ಮಾತಾಡುವ ಕ್ರಿಯೆಗೆ ಚಾಲನೆಕೊಟ್ಟರು. ಈಗ ಜಿ.ಎಸ್.ಎಸ್. ನಿವೃತ್ತರಾದ ಮೇಲೆ ಆ ಪರಂಪರೆಯನ್ನು ಮುಂದುವರೆಸಿಕೊಂಡು ಹೋಗಲು 'ಅಧ್ಯಯನ ಕೇಂದ್ರ'ದ ಮುಖ್ಯಸ್ಥರಾಗಿ ಭಟ್ಟರು ಬಂದಿದ್ದಾರೆ. ಭಟ್ಟರು ಬೆಳೆದು ಬಂದ ಸಂಸ್ಥೆಯ ಒಟ್ಟಿಗೆ ಬಂದಿರುವುದರಿಂದ ಅದರ ಚರಿತ್ರೆಯ ಅರಿವು ಅವರಿಗಿದೆ. ಅದನ್ನು ಮುಂದುವರೆಸಿಕೊಂಡು ಹೋಗುವ ಮತ್ತು ಜಿ.ಎಸ್.ಎಸ್ ಹುಟ್ಟುಹಾಕಿದ ಪರಂಪರೆಯನ್ನು ಬೆಳೆಸುವ ಅದಮ್ಯ ಉತ್ಸಾಹವನ್ನು ತುಂಬಿಕೊಂಡಿದ್ದಾರೆ. ಈ ಉತ್ಸಾಹದ ಪ್ರತೀಕವಾಗಿ ಫೆಬ್ರವರಿ 26,27 ಮತ್ತು 28ರಂದು ನಡೆಸಿದ ಗೋಷ್ಠಿಗಳು ಅರ್ಥಪೂರ್ಣವಾದವು. 'ಕನ್ನಡ ಸಾಹಿತ್ಯ ಪ್ರತಿಭೆಯ ಸ್ವರೂಪ-ಒಂದು ತೌಲನಿಕ ಚಿಂತನೆ' ಈ ವಿಷಯದ ಚೌಕಟ್ಟಿನಲ್ಲಿ ನಮ್ಮ ಸಾಹಿತ್ಯ ಸಂದರ್ಭದ ಪ್ರತಿಭಾನ್ವಿತ ವ್ಯಕ್ತಿಗಳೆಲ್ಲ ಒಂದೆಡೆ ಸೇರಿದರು-ಚರ್ಚಿಸಿದರು-ಮುಕ್ತ ವಾತಾವರಣ ಬೆಳೆಸಲು ಪ್ರಯತ್ನಿಸಿದರು.

ಹಣಕಾಸಿನ ತೊಂದರೆಯಿದ್ದರೂ ಲಕ್ಷ್ಮೀನಾರಾಯಣಭಟ್ಟರು ತಮ್ಮ ಸಹೋದ್ಯೋಗಿಗಳ ಸಹಕಾರ ಪಡೆದು ಅತ್ಯಂತ ಚೆನ್ನಾಗಿ ನಡೆಸಿದರು. ಭಟ್ಟರು ಇದೇ ರೀತಿಯಲ್ಲಿ ಕ್ರಿಯಾಶೀಲರಾಗಿ ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ಈಗಾಗಲೇ ಸತ್ತಿರುವ ನಾನಾ ವಿಭಾಗಗಳಿಗೆ ಪರೋಕ್ಷವಾಗಿ ಜೀವ ಬರಲು ಪ್ರೇರಕರಾಗಲಿ, ಎಂದು 'ಶೂದ್ರ' ಅತ್ಯಂತ ಕಳಕಳಿಯಿಂದ ಆಶಿಸುತ್ತೆ.

ಕರ್ನಾಟಕದ ರೈತ ಹೋರಾಟಗಳು (ರಾಷ್ಟ್ರೀಯ ಹಿನ್ನೆಲೆಯಲ್ಲಿ ಒಂದು ಅಧ್ಯಯನ) –ಎಂ. ವಿ ನಾಡಕರ್ಣಿ. ಪ್ರಿಂಟರ್ಸ್ ಪ್ರಕಾಶನ, ಬೆಂಗಳೂರು. ಇದು ಎಲ್ಲರೂ ಓದಬೇಕಾದಂತಹ ಪುಸ್ತಕ. ಒಟ್ಟು ರೈತಚಳುವಳಿಯನ್ನು ರಾಜಕೀಯ ಮತ್ತು ಆರ್ಥಿಕ ಹಿನ್ನೆಲೆಯಲ್ಲಿ ಪರಿಣಾಮಕಾರಿಯಾಗಿ ನೋಡಿರುವಂಥದ್ದು.

ಬಾರೊ ಗೀಜಗನೆ (ಕಾದಂಬರಿ) ಕೃಷ್ಣಮೂರ್ತಿ ಹನೂರು. ಪುರೋಗಾಮಿ ಪ್ರಕಾಶನ, ಬೆಂಗಳೂರು-3 "ಅಭಿಮಾನಿ" ವಾರಪತ್ರಿಕೆಯ ಕಾದಂಬರಿ ಸ್ಪರ್ಧೆಯಲ್ಲಿ ಬಹುಮಾನ ಪಡೆದ ಪುಸ್ತಕ. ಬಹುಮಾನ ಪಡೆದದ್ದು ಎನ್ನುವುದಕ್ಕಿಂತ ಕೃಷ್ಣ ಮೂರ್ತಿಯವರು ನಮ್ಮ ನಡುವೆ ಚೆನ್ನಾಗಿ ಬರೆಯುತ್ತಿರುವ ಯುವ ಲೇಖಕರಲ್ಲಿ ಒಬ್ಬರು. ಜನಪದ ಸಾಹಿತ್ಯದ ಗಂಭೀರವ್ಯಕ್ತಿಯಾಗಿರುವ ಕೃಷ್ಣಮೂರ್ತಿಯವರು ಕನ್ನಡ ಸಾಹಿತ್ಯಕ್ಕೆ 'ಬಾರೊ ಗೀಜಗನೆ' ಅಂಥ ಉತ್ತಮ ಕಾದಂಬರಿಯನ್ನು ನೀಡಿ ದ್ದಾರೆ. ಅವರಿಗೆ 'ಶೂದ್ರ'ದ ಪರವಾಗಿ ಅಭಿನಂದಿಸುತ್ತೇನೆ.

ಅಂಕಣ (ಮಾಸ್ತಿ ವಿಶೇಷಾಂಕ) ಅಂಕಣ ಸಾಹಿತ್ಯಕ ಪತ್ರಿಕೆಯು ಮಾಸ್ತಿಯವರ ಬಗ್ಗೆ ತಂದಿರುವ ಉತ್ತಮ ಪುಸ್ತಕ.

ಪರಾಗ ಸ್ಪರ್ಶ (ಕವನ ಸಂಕಲನ) ಪದ್ಮನಾಭ ನಾಯಕ್, ಸಗರಿ ಪ್ರಕಾಶನ, ಚಿತ್ರಾಪುರ, ಕುಳಾಯಿ. ಪದ್ಮನಾಭನಾಯಕರು ಉತ್ಸಾಹದಿಂದ ತಂದಿರುವ ಕವನ ಸಂಕಲನ. ಆದ್ದರಿಂದಲೇ ಬೆನ್ನುಪುಟಕ್ಕೆ ಜಾಹಿರಾತು ಲಗತ್ತಿಸಿಕೊಂಡು ಅರ್ಪಣೆಗೆ ಅರ್ಹರಾದವರ ಭಾವಚಿತ್ರವನ್ನು ಮುದ್ರಿಸಿಕೊಂಡಿದೆ. ಇಷ್ಟಾದರೂ ಮೂರು ನಾಲ್ಕು ಓದಬಹುದಾದ ಕವನಗಳಿವೆ.

ಹಕ್ಕಿ ಪಲ್ಟಿ (ಕವನ ಸಂಕಲನ) ಎಚ್. ಮಂಜುನಾಥ, ಪ್ರಕಾಶಕರು : ಕನ್ನಡ ಸಂಘ ಕ್ರೈಸ್ಟ ಕಾಲೇಜ್. ಶ್ರೀನಿವಾಸರಾಜುರವರು, ಕ್ರೈಸ್ಟ್ ಕಾಲೇಜಿನ ಕನ್ನಡ ಸಂಘದ ಜೀವನಾಡಿಯಾಗಿ ಈಗಾಗಲೇ ತಂದಿರುವ ಕೆಲವು ಉತ್ತಮ ಪುಸ್ತಕಗಳ ಜೊತೆಗೆ ಈ ಕವನ ಸಂಕಲನವೂ ಸೇರುತ್ತದೆ. ಇದು ಮಂಜುನಾಥರವರ ಮೊದಲ ಸಂಕಲನ. ಮತ್ತೆ ಮತ್ತೆ ಓದಿ ನಮ್ಮಲ್ಲಿಟ್ಟುಕೊಳ್ಳಬಹುದಾದ ಪುಸ್ತಕ.

ನನ್ನ ಪಾಡಿಗೆ ನಾನು (ಕವನಗಳು) ಪ್ರತಿ ವರ್ಷ ಕ್ರೈಸ್ಟ್ ಕಾಲೇಜಿನ ಕನ್ನಡ ಸಂಘವು ಬೇಂದ್ರೆಯವರ ಹೆಸರಿನಲ್ಲಿ ನಡೆಸುವ ಕಾವ್ಯಸ್ಪರ್ಧೆ (ವಿದ್ಯಾರ್ಥಿಗಳಿಗಾಗಿ)ಯ ಕವನ ಸಂಕಲನ. ಇದರಲ್ಲಿ ಅಬ್ದುಲ್ ರಶೀದ್‌ರವರ 'ನನ್ನ ಪಾಡಿಗೆ ನಾನು' ಎಂಬ ಉತ್ತಮ ಕವನದ ಜೊತೆಗೆ ಒಂದಷ್ಟು ಉತ್ತಮ ಕವನಗಳಿವೆ.

ಸಾಪಿಗಳ ಹಾಡು (ಕವನ ಸಂಕಲನ) ಮೋಹನದಾಸ್ ಧಾವಸಕರ್, 'ಧರ್ಮಶ್ರೀ ಪ್ರಕಾಶನ, ಶಂಕರಪುರ, ಬೆಂಗಳೂರು. ಮೋಹನದಾಸ್‌ರವರು ಕಷ್ಟಪಟ್ಟು ಬರೆದಿರುವ ಕವನಗಳು. ಆದ್ದರಿಂದ ಕೆಲವು ಕವನಗಳಿಗೆ ಬೆಲೆ ಇದೆ. ಆದರೂ ಶಬ್ದ ಗಳ ಆಡಂಬರ ಜಾಸ್ತಿಯಾಯಿತು ಕೆಲವು ಕವನಗಳಲ್ಲಿ.

ಸಂವಾದ (ಸಾಹಿತ್ಯಕ ದ್ವೈಮಾಸಿಕ) ಕನ್ನಡಕ್ಕೆ ಮತ್ತೊಂದು ಸಾಹಿತ್ಯಕ ಪತ್ರಿಕೆ ರಾಘವೇಂದ್ರ ಪಾಟೀಲ್, ಬಿದಿರಹಳ್ಳಿ ನರಸಿಂಹಮೂರ್ತಿ, ಡಿ. ಎಸ್. ನಾಗಭೂಷಣ ಸ. ಉಷಾ, ವೈ. ಮಂಜಪ್ಪ, ಮತ್ತು ಜಿ. ಎಸ್. ರಾಮಪ್ಪ ಕೂಡಿ ತರುತ್ತಿದ್ದಾರೆ. ಮೊದಲ ಸಂಚಿಕೆ ಚೆನ್ನಾಗಿದೆ. ಚಂದಾ : 25ರೂ. 'ಶೂದ್ರ' ಇದಕ್ಕೆ ಒಳ್ಳೆಯ ದನ್ನು ಬಯಸುತ್ತೆ.

ಪ್ರಶಸ್ತಿ ಪಡೆದ ಮಹನೀಯರು

ಕರ್ನಾಟಕ ಜಾನಪದ ಅಕಾಡೆಮಿಯು 1980ರಿಂದ 1986ರವರೆಗೆ ಪ್ರಶಸ್ತಿ ಪಡೆದ ಹಿರಿಯ, ಕಿರಿಯ ಕಲಾವಿದರ ಪರಿಚಯವಿರುವ ಉತ್ತಮ ಪುಸ್ತಕ, ಈ ಸಂಪ್ರದಾಯವನ್ನು ಬೇರೆ ಅಕಾಡೆಮಿಯವರು ತಂದರೆ ಸೂಕ್ತ ಅನ್ನಿಸುತ್ತೆ.

ಕಥಾ ಜಗತ್ತು

ನೋಬಲ್ ಪ್ರಶಸ್ತಿ ಪಡೆದ ಪ್ರತಿಭಾವಂತ ಲೇಖಕರ ಐವತ್ತು ಉತ್ತಮ ಕಥೆಗಳನ್ನು ಕನ್ನಡಕ್ಕೆ ಎಸ್. ದಿವಾಕರ್ ತಂದಿದ್ದಾರೆ. ದಿವಾಕರ್ ಅತ್ಯಂತ ಉತ್ತಮ ಅನುವಾದಕರಾಗಿ, ಒಟ್ಟು ಕಥೆಗಳನ್ನು ಆರಿಸುವಲ್ಲಿ ವಹಿಸಿದ ಶ್ರಮಕ್ಕೆ 'ಶೂದ್ರ' ಕೃತಜ್ಞತಾ ಪೂರ್ವಕವಾಗಿ ವಂದಿಸುತ್ತೆ. ಗೋಪಾಲ ಕೃಷ್ಣ ಅಡಿಗರು ಮತ್ತು ಮಾವಿನಕೆರೆ ರಂಗನಾಥರವರು ಸಂಪಾದಕರಾಗಿ ಹೊರತರುತ್ತಿರುವ ಪುಸ್ತಕಗಳು, ಇದರ ಬೆನ್ನಿನೊಡನೆಯೇ 'ಕಾವ್ಯ ಜಗತ್ತು' ನೋಬಲ್ ಪ್ರಶಸ್ತಿ ವಿಜೇತ ಕವಿಗಳ ಕವನಗಳನ್ನು ಅಡಿಗರು ಅನುವಾದಿಸಿದ್ದಾರೆ, ಇದೊಂದು ಉತ್ತಮ ಅನುವಾದಿತ ಕೃತಿ, ಇದಕ್ಕಾಗಿ ಅಡಿಗರನ್ನು ಕನ್ನಡದ ಓದುಗರು ಅಭಿನಂದಿಸಬೇಕು.

—ಸಿದ್ಧಾರ್ಥ

ಗ್ರಾಮಸಭೆ ಮತ್ತು ಜಿಲ್ಲಾ ಪರಿಷತ್ತುಗಳನ್ನು ರಚಿಸಿರುವ ಕರ್ನಾಟಕ ರಾಜ್ಯ ಸರಕಾರ ಜನತೆಗೆ ಅಧಿಕಾರ ನೀಡುವ ಹೊಸ ಹೆಜ್ಜೆಯ ಮೂಲಕ ಸಂವಿಧಾನದ ಕನಸುಗಳಲ್ಲೊಂದನ್ನು ನನಸಾಗಿಸಿದೆ.

1983ರಲ್ಲಿ ಕರ್ನಾಟಕದಲ್ಲಿ ಅಧಿಕಾರಕ್ಕೆ ಬಂದ ಹೊಸ ಸರಕಾರ ಜನತೆಯ ಆಶೋತ್ತರಗಳನ್ನು ಈಡೇರಿಸಲು ಕಂಕಣಬದ್ಧವಾಯಿತು. ಜನಸಮುದಾಯದ ಜೀವನ ಮಟ್ಟ ಸುಧಾರಿಸಿ ಸಮೃದ್ಧಿ ಮತ್ತು ಸಂತಸವನ್ನು ತಂದುಕೊಡುವ ದಿಸೆಯಲ್ಲಿ ಹೊಸ ಹೊಸ ಮಾರ್ಗಗಳನ್ನು ಕಂಡುಕೊಂಡಿತು.

ಜನತೆಗೆ ಅಧಿಕಾರ : ಪ್ರಜಾಪ್ರಭುತ್ವದಲ್ಲಿ "ಪ್ರಜೆಯೇ ಪ್ರಭು" ಎಂಬ ತತ್ವದಲ್ಲಿ ಅಚಲವಾದ ನಂಬಿಕೆ ಇಟ್ಟಿರುವ ಕರ್ನಾಟಕ ಸರ್ಕಾರ, ಪ್ರಜಾಪ್ರಭುತ್ವ ಅರ್ಥಪೂರ್ಣವಾಗಬೇಕಾದರೆ ಆಡಳಿತದಲ್ಲಿ ಜನತೆಯ ಸಕ್ರಿಯ ಪಾತ್ರ ಅತ್ಯಂತ ಅಗತ್ಯ ಎಂಬುದನ್ನು ಮನಗಂಡಿದೆ.

ಇದಕ್ಕೆ ಮುಖ್ಯವಾಗಿ ಬೇಕಾಗಿದ್ದು ಅಧಿಕಾರ ವಿಕೇಂದ್ರೀಕರಣ. ಆದ್ದರಿಂದಲೇ ಪಂಚಾಯಿತಿ ರಾಜ್ಯ ಸಂಸ್ಥೆಗಳನ್ನು ರಚಿಸಿ, ಗ್ರಾಮೀಣ ಪ್ರದೇಶಗಳ ಸಮಗ್ರ ಅಭಿವೃದ್ಧಿ ಕಾರ್ಯಗಳಲ್ಲಿ ಜನತೆ ನೇರವಾಗಿ ಪಾಲುಗೊಳ್ಳುವ ವ್ಯಾಪಕ ಅವಕಾಶಗಳನ್ನು ಕಲ್ಪಿಸಿದೆ.

ಈ ಗುರಿ ಸಾಧನೆಗಾಗಿ ಎರಡು ಪ್ರಮುಖ ಚುನಾವಣಾ ಸುಧಾರಣೆಗಳನ್ನು ಕಾರ್ಯಗತಗೊಳಿಸಲಾಗಿದೆ. ಮೊದಲನೆಯದು ಯುವ ಸಮೂಹ; ಸಾರ್ವಜನಿಕ ವಿಚಾರಗಳಲ್ಲಿ ತಮ್ಮ ಅಭಿಮತ ವ್ಯಕ್ತಪಡಿಸಲು ಅನುಕೂಲವಾಗುವಂತೆ ಮತದಾನದ ವಯೋಮಿತಿಯನ್ನು 18 ವರ್ಷಗಳಿಗೆ ಇಳಿಸಿರುವುದು, ಎರಡನೆಯದು; ಈ ಸ್ಥಳೀಯ ಸಂಸ್ಥೆಗಳಲ್ಲಿ ಶೇಕಡ 20 ರಷ್ಟು ಸ್ಥಾನಗಳನ್ನು ಮಹಿಳೆಯರಿಗೆ ಮೀಸಲಾಗಿಟ್ಟಿರುವುದು.

ಈಗ ಪಂಚಾಯಿತಿ ರಾಜ್ಯ ವ್ಯವಸ್ಥೆಯ ಮೊದಲ ವರ್ಷವೇ ಜಿಲ್ಲಾ ಪರಿಷತ್ತುಗಳು ಮತ್ತು ಮಂಡಲ ಪಂಚಾಯಿತಿಗಳಿಗೆ 900 ಕೋಟಿ ರೂಪಾಯಿಗಳನ್ನು ಸರಕಾರ ನೀಡುತ್ತದೆ.

ಪ್ರಥಮ ಬಾರಿಗೆ ಸಮನಾದ ಪ್ರಾಥಮಿಕ ಹಂತದಿಂದ ಸುಮಾರು 56,000; ಪ್ರಜಾ ಪ್ರತಿನಿಧಿಗಳು ಆಯ್ಕೆಯಾಗಿದ್ದಾರೆ. ಇದರಲ್ಲಿ 29,051 ಜನಸಾಮಾನ್ಯ ವರ್ಗದ ಪ್ರತಿನಿಧಿಗಳು, 11887 ಜನ ಪರಿಶಿಷ್ಟ ಜನಾಂಗದ ಪ್ರತಿನಿಧಿಗಳು ಹಾಗೂ 14356 ಮಹಿಳಾ ಪ್ರತಿನಿಧಿಗಳಿದ್ದಾರೆ. ಮಹಿಳೆಯರಲ್ಲಿ 2469 ಜನ ಪರಿಶಿಷ್ಟ ಜನಾಂಗದ ಪ್ರತಿನಿಧಿಗಳು. ಇವರ ಜೊತೆಗೆ ಜಿಲ್ಲಾ ಪರಿಷತ್ತುಗಳಿಗೆ 887 ಸದಸ್ಯರು ಆಯ್ಕೆಯಾಗಿದ್ದಾರೆ.

ಪ್ರಜಾಪ್ರಭುತ್ವದ ಮೂಲ ಈ ಹೆಮ್ಮೆಯ ನಾಡಿನ ಮಣ್ಣಿನ ಮಕ್ಕಳಲ್ಲಿ ಅಡಗಿದೆ ಎಂಬುದನ್ನು ಶೃತಪಡಿಸುವ ಕರ್ನಾಟಕ ಸಮುದಾಯ ನಿಜಕ್ಕೂ ಅಭಿನಂದನಾರ್ಹರು.

ಏಪ್ರಿಲ್ ಸಂಚಿಕೆಯಲ್ಲಿ :

ಓ. ಎಲ್. ನಾಗಭೂಷಣಸ್ವಾಮಿ

ಪ್ರೊ. ಶೆಟ್ಟಾರ್

ಮ. ನ. ಜವರಯ್ಯ

ಪ್ರಸನ್ನ

ರಾಮಚಂದ್ರೇಗೌಡ

ಕೆ. ಪುಟ್ಟಯ್ಯ

ಎಸ್. ನಟರಾಜ್

ಜರಗನಹಳ್ಳಿ ಶಿವಶಂಕರ್

ಶ್ರೀಧರ ಪಿಸ್ಸೆ

ವೀರ ಚಕ್ರವರ್ತಿ

ಕನಸಿಗೊಂದು ಕಣ್ಣು

ಒಳನೋಟ

ಸುದ್ದಿಯ ಗುದ್ದಾಟ.